ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 13 ಬುಧವಾರ 2024

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

45

ಸಂಪುಟ: 45 | ಸಂಚಿಕೆ: 206 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮೈಸೂರು ಮಿತ್ರ

ನಾಳೆ ಮೈಸೂರಲ್ಲಿ ವಿಶ್ವ ಮಧುಮೇಹ ದಿನದ ಅಂಗವಾಗಿ 'ಜನ ಜಾಗೃತಿ ಜಾಥಾ'

ಮೈಸೂರು, ನ.12(ಜಿಎ)–ವಿಶ್ವ ಮಧುಮೇಹ ದಿನದ ಅಂಗವಾಗಿ ಭಾನವಿ ಆಸ್ಪತ್ರೆ ವತಿಯಿಂದ ನ.14ರಂದು ಬೆಳಗ್ಗೆ 8 ಗಂಟೆಗೆ 'ಜನ ಜಾಗೃತಿ ಜಾಥಾ' ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಆಸ್ಪತ್ರೆಯ ಪ್ರಧಾನ ವ್ಯವಸ್ಥಾಪಕ ಆರ್.ಪ್ರಶಾಂತ್ ಈ ವಿಷಯ ತಿಳಿಸಿ, ಜಾಥಾಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಚಾಲನೆ ನೀಡಿ, ನಂತರ ಆಧುನಿಕ ತಂತ್ರಜ್ಞಾನದ ಯಂತ್ರೋಪಕರಣಗಳನ್ನು ರೋಗಿಗಳ ಸೇವೆಗೆ ಲೋಕಾರ್ಪಣೆ ಮಾಡಲಿದ್ದಾರೆ. ಆಸ್ಪತ್ರೆ ಮುಂಭಾಗದಿಂದ ಆರಂಭವಾಗುವ ಜಾಥಾವು ವಿಜಯ ಬ್ಯಾಂಕ್ ವೃತ್ತದ ಮೂಲಕ ಎ2 ಜೆಡ್ ಮಾರ್ಗವಾಗಿ ಮರಳಿ ಆಸ್ಪತ್ರೆ ತಲುಪಲಿದೆ ಎಂದರು. ಆಸ್ಪತ್ರೆಯಲ್ಲಿ ಸಿಟಿಸ್ಕ್ಯಾನ್, ಪ್ರಯೋಗಾಲಯ, ಚರ್ಮರೋಗದ ಲೇಸರ್ ಯಂತ್ರೋಪಕರಣಗಳನ್ನು ಆಧುನಿಕ ತಂತ್ರಜ್ಞಾನಕ್ಕೆ ಹೊಂದಿಕೊಂಡಂತೆ ಉನ್ನತ ದರ್ಜೆಗೆ ಅಳವಡಿಸಿಕೊಂಡು ರೋಗಿಗಳಿಗೆ ಸೇವೆ ನೀಡಲು ಸಿದ್ಧಗೊಂಡಿದ್ದೇವೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಡಾ.ವಿಜಯ್ ಚಲುವರಾಜು, ಡಾ.ಚಂದನ್ ಕುಮಾರ್, ಡಾ.ನಿರಂಜನ್ ಸ್ವಾಮಿ, ಡಾ.ಶ್ರೇಯಸ್ ಉಪಸ್ಥಿತರಿದ್ದರು.

ನಾಳೆ ಮೈಸೂರಲ್ಲಿ 'ವಾಕಥಾನ್'

ಮೈಸೂರು, ನ.12(ಜಿಎ)–ರಿಸರ್ಚ್ ಸೊಸೈಟಿ ಫಾರ್ ದಿ ಸ್ಟಡಿ ಆಫ್ ಡಯಾಬಿಟಿಸ್ ಇನ್ ಇಂಡಿಯಾ ಕರ್ನಾಟಕ ಚಾಪ್ಟರ್(ಕೆಆರ್‌ಎಸ್‌ಎಸ್‌ಡಿಐ), ಜೆಎಸ್‌ಎಸ್ ಹಾಗೂ ಅಸೋಸಿಯೇಷನ್ ಆಫ್ ಫಿಸಿಶಿಯನ್ಸ್ ಆಫ್ ಇಂಡಿಯಾ (ಎಪಿಐ) ವತಿಯಿಂದ ವಿಶ್ವ ಮಧುಮೇಹ ದಿನಾಚರಣೆ ಅಂಗವಾಗಿ ನ.14ರಂದು ಬೆಳಗ್ಗೆ 9.30ಕ್ಕೆ ವಾಕಥಾನ್ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕೆಆರ್‌ಎಸ್‌ಎಸ್‌ಡಿಐ ಮುಖ್ಯಸ್ಥ ಡಾ.ವೈ.ಎಸ್.ರವಿಕುಮಾರ್ ಈ ವಿಷಯ ತಿಳಿಸಿ, ಸರ್ ಫ್ರೆಡರಿಕ್ ಬ್ಯಾಂಟಿಗ್‌ರ ಹುಟ್ಟಿದ ದಿನದ ಅಂಗವಾಗಿ ಜಗತ್ತಿನಾದ್ಯಂತ ವಿಶ್ವ ಮಧುಮೇಹ ದಿನವನ್ನಾಗಿ ಆಚರಿಸಲಾಗುತ್ತಿದ್ದು, ಈ ವಾಕಥಾನ್ ಮೂಲಕ ಮಧುಮೇಹ ಕಾಯಿಲೆ ಮತ್ತು ಅದರಿಂದಾಗುವ ತೊಂದರೆ, ತೊಡಕುಗಳ ಬಗ್ಗೆ ಜನಸಾಮಾನ್ಯರಲ್ಲಿ ಅರಿವು ಮೂಡಿಸಲು ಸಹಕಾರಿಯಾಗಲಿದೆ ಎಂದರು.

ಕೆಆರ್‌ಎಸ್‌ಎಸ್‌ಡಿಐ ವತಿಯಿಂದ ಈ ವರ್ಷ 'ಮಧುಮೇಹ ಮತ್ತು ಯೋಗಕ್ಷೇಮ' ಕುರಿತು 21ನೇ ವಾರ್ಷಿಕ ಸಮ್ಮೇಳನವನ್ನು ಡಿ.20,21,22 ರಂದು ಬನ್ನಿಮಂಟಪದಲ್ಲಿರುವ ಜೆಎಸ್‌ಎಸ್ ಮೆಡಿಕಲ್ ಕಾಲೇಜಿನಲ್ಲಿ ಏರ್ಪಡಿಸಲಾಗಿದ್ದು, ರಾಜ್ಯದ ವಿವಿಧ ಭಾಗಗಳಿಂದ ನುರಿತ 800ಕ್ಕೂ ಅಧಿಕ ವೈದ್ಯರು ಪಾಲ್ಗೊಳ್ಳಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಡಾ.ಕೆ.ಎಂ.ಶ್ರೀನಾಥ್, ಡಾ.ಮಧು ಕುಮಾರ್, ಡಾ.ಎಂ.ಸಿ.ಪ್ರಸಾದ್, ಡಾ.ನಂದಿನಿ ಉಪಸ್ಥಿತರಿದ್ದರು.

ಭಾರತೀಯ ನೌಕಾಪಡೆಗೆ ಆಯ್ಕೆಯಾದವರಿಗೆ ಸೈನಿಕ ಅಕಾಡೆಮಿಯಿಂದ ಗೌರವ ಸಮರ್ಪಣೆ



ಮೈಸೂರು ಬೆಳವಾಡಿ ಸಿಲಿಕಾನ್ ವ್ಯಾಲಿ ಬಡಾವಣೆಯಲ್ಲಿರುವ ಸೈನಿಕ ಅಕಾಡೆಮಿ ವತಿಯಿಂದ ಭಾರತೀಯ ನೌಕಾಪಡೆಗೆ ಆಯ್ಕೆಯಾದವರನ್ನು ಅಭಿನಂದಿಸಲಾಯಿತು.

ಮೈಸೂರು,ನ.12–ಮೈಸೂರು ಬೆಳವಾಡಿ ಸಿಲಿಕಾನ್ ವ್ಯಾಲಿ ಬಡಾವಣೆಯಲ್ಲಿರುವ ಸೈನಿಕ ಅಕಾಡೆಮಿ ಸಂಸ್ಥೆ ವತಿಯಿಂದ ಭಾರತೀಯ ನೌಕಾಪಡೆಗೆ (Indian Navy) ಆಯ್ಕೆ ಆಗಿರುವ ಸೈನಿಕ ಅಕಾಡೆಮಿ ಅಭ್ಯರ್ಥಿಗಳಾದ ಬೆಳವಾಡಿ ಗ್ರಾಮದ ಅಬಿನ್, ಹುಣಸೂರಿನ ನಿಜಾಮ್, ಕುಶಾಲನಗರದ ಅಂಟೋರೊಸ್ ಅವರನ್ನು ಅಭಿನಂದಿಸಲಾಯಿತು.

ಈ ವೇಳೆ ಸೈನಿಕ ಅಕಾಡೆಮಿಯ ಸಂಸ್ಥಾಪಕ, ಕಮಾಂಡೋ ಶ್ರೀಧರ ಸಿ.ಎಂ. ಮಾತನಾಡಿ, ನಮ್ಮ ದೇಶದ ಸೈನಿಕರು ಅಂದರೆ ಭೂ ಸೇನೆಯ ಸೈನಿಕರೆಂದು ತಿಳಿಯುತ್ತಾರೆ. ಆದರೆ ಸೇನೆಯಲ್ಲಿ 3 ವಿಭಾಗದ ಸೈನಿಕರು ಇರುತ್ತಾರೆ. ಭೂಸೇನಾ, ವಾಯುಸೇನಾ ಮತ್ತು ಜಲಸೇನಾ. ಸೈನಿಕ ಅಕಾಡೆಮಿಯಲ್ಲಿ ನೀಡುತ್ತಿರುವ ತರಬೇತಿಯಿಂದ ಈ ಬಾರಿ ನೌಕಾಪಡೆಗೆ ಆಯ್ಕೆ ಆಗಿರುವುದು ಬಹಳ ಸಂತೋಷ ತಂದಿದೆ. ದೇಶ ಸೇವೆ ಈಶ ಸೇವೆ ಎಂದು ಸೇವೆಗೆ ತೆರಳುತ್ತಿರುವ ಯುವ ಸೈನಿಕರನ್ನು ಗೌರವಿಸುವುದು ನಮ್ಮೆಲ್ಲರ ಕರ್ತವ್ಯ ಎಂದರು. ಕಾರ್ಯಕ್ರಮದಲ್ಲಿ ಸಹ ಸಂಸ್ಥಾಪಕಿ ಅನಿತಾ ಶ್ರೀಧರ, ಅಧ್ಯಾಪಕರು, ಸಹ ಸಿಬ್ಬಂದಿ, ಸೈನಿಕ ಅಕಾಡೆಮಿ ಅಭ್ಯರ್ಥಿಗಳು ಉಪಸ್ಥಿತರಿದ್ದರು.

'ಮಿಸ್ಟರ್ ಕರುನಾಡು ಸೇವಾ ಸೇನೆ' ಪ್ರಶಸ್ತಿಗಾಗಿ ಡಿ.1, ಮೈಸೂರಲ್ಲಿ ದೇಹದಾರ್ಢ್ಯ ಸ್ಪರ್ಧೆ

ಮೈಸೂರು,ನ12(ಜಿಎ)–ಕನ್ನಡ ರಾಜ್ಯೋತ್ಸವದ ಅಂಗವಾಗಿ ಕರುನಾಡ ಸೇವಾ ಸೇನೆ ಹಾಗೂ ಮೈಸೂರು ಜಿಲ್ಲೆ ದೇಹದಾರ್ಢ್ಯ ಮತ್ತು ಫಿಟ್‌ನೆಸ್ ವತಿಯಿಂದ 'ಮಿಸ್ಟರ್ ಕರುನಾಡ ಸೇವಾ ಸೇನೆ' ಪ್ರಶಸ್ತಿಗಾಗಿ ಜಿಲ್ಲಾ ಮಟ್ಟದ ದೇಹದಾರ್ಢ್ಯ ಸ್ಪರ್ಧೆಯನ್ನು ಡಿ.1ರಂದು ಸಂಜೆ 4 ಗಂಟೆಗೆ ಪುರಭವನದಲ್ಲಿ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸೇನೆಯ ರಾಜ್ಯ ಉಪಾಧ್ಯಕ್ಷ ಕೆ.ಮುರಳಿ ಈ ವಿಷಯ ತಿಳಿಸಿ, ಕಾರ್ಯಕ್ರಮದಲ್ಲಿ ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ, ಶಾಸಕರಾದ ಶ್ರೀವತ್ಸ, ದರ್ಶನ್ ಧ್ರುವನಾರಾಯಣ್, ಉದ್ಯಮಿ ಹೆಚ್.ವಿ.ರಾಜೀವ್, ಮಾಜಿ ಶಾಸಕರಾದ ಎಂ.ಕೆ.ಸೋಮಶೇಖರ್, ಎಲ್.ನಾಗೇಂದ್ರ ಆಗಮಿಸಲಿದ್ದಾರೆ ಎಂದರು.

ಸ್ಪರ್ಧೆಗೆ ಮೈಸೂರು, ಹುಣಸೂರು, ಹೆಚ್.ಡಿ.ಕೋಟೆ, ನಂಜನಗೂಡು, ತಿ.ನರಸೀಪುರ, ಪಿರಿಯಾಪಟ್ಟಣ ಮತ್ತು ಕೆಆರ್.ನಗರದವರು ಸ್ಪರ್ಧಿಸಲು ಅವಕಾಶವಿದ್ದು, ನ.29ರೊಳಗೆ ನೋಂದಣಿ ಮಾಡಿಕೊಳ್ಳಬೇಕು. ಹೆಚ್ಚಿನ ಮಾಹಿತಿ ಗಾಗಿ 8050256616 ಸಂಪರ್ಕಿಸಿ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ನಂದೀಶ್, ಹೇಮಂತ್, ವಿನಯ್ ರಮೇಶ್ ಉಪಸ್ಥಿತರಿದ್ದರು.

ಶ್ರೀಕಾಂತ ಪದವಿಪೂರ್ವ ಕಾಲೇಜಿನಲ್ಲಿ ಇಂದು ಸೈಬರ್ ಕ್ರೈಂ ಬಗ್ಗೆ ಜಾಗೃತಿ

ಮೈಸೂರು,ನ.12–ಅಖಿಲ ಭಾರತೀಯ ಗ್ರಾಹಕ ಪಂಚಾಯತ್, ಮೈಸೂರು ಘಟಕ ವತಿಯಿಂದ ಅಗ್ರಹಾರದಲ್ಲಿರುವ ಶ್ರೀಕಾಂತ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗೆ ಸೈಬರ್ ಕ್ರೈಂನಿಂದ ಆಗುತ್ತಿರುವ ಅಪರಾಧಗಳ ಬಗ್ಗೆ ಜಾಗೃತಿ ಕಾರ್ಯಕ್ರಮವನ್ನು ನವೆಂಬರ್ 13ರಂದು ಮಧ್ಯಾಹ್ನ 2 ಗಂಟೆಗೆ ಹಮ್ಮಿಕೊಳ್ಳಲಾಗಿದೆ ಎಂದು ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ಮಹಿಳಾ ಪ್ರಮುಖ ನಾಗಮಣಿ ತಿಳಿಸಿದ್ದಾರೆ. ಮುಖ್ಯ ಅತಿಥಿಗಳಾಗಿ ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ಅಧ್ಯಕ್ಷ ಸಿ.ಎಸ್.ಚಂದ್ರಶೇಖರ್, ಮಾಜಿ ಸೈನಿಕರಾದ ನಂಜುಂಡಸ್ವಾಮಿ ಹೆಚ್.ಎಸ್., ಶ್ರೀಕಾಂತ ಮಹಿಳಾ ಪದವಿ ಪೂರ್ವ ಕಾಲೇಜು, ಪ್ರಾಂಶುಪಾಲರಾದ ಸುಬ್ಬಲಕ್ಷ್ಮಿ, ದೈಹಿಕ ಶಿಕ್ಷಣ ಉಪನ್ಯಾಸಕರಾದ ಚಂದ್ರು, ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ನಿರೂಪಕರಾದ ಮಂಜು ಶ್ರೀಶಂಕರ್ ಇನ್ನಿತರರು ಭಾಗವಹಿಸಲಿದ್ದಾರೆ.

ನಿಧನ

ಬಸವರಾಜು ನಾಯಕ



ಮೈಸೂರು, ನ. 12– ಮೈಸೂರಿನ ಮಂಜುನಾಥಪುರ ನಿವಾಸಿ ಬಸವರಾಜು ನಾಯಕ (80) ಮಂಗಳವಾರ ನಿಧನರಾದರು. ಮೃತರು ಪತ್ನಿ ಮಹದೇವಮ್ಮ, ಪುತ್ರ ಸಿದ್ದರಾಜು, ಹೆಣ್ಣು ಮಕ್ಕಳಾದ ಜ್ಯೋತಿ, ವಸಂತ ಸೇರಿದಂತೆ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಬನ್ನಿಮಂಟಪದ ತೆಂಗಿನಮರ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪ್ರಕಾಶ್



ಮೈಸೂರು, ನ.12– ಮೈಸೂರಿನ ಬೋಗಾದಿ ಎರಡನೇ ಹಂತದ ನಿವಾಸಿ, ಮೂಲತಃ ಕೆ.ಆರ್.ನಗರ ತಾಲೂಕು ಕಂಚುಗಾರಕೊಪ್ಪಲು ಗ್ರಾಮದ ಪ್ರಕಾಶ್(48) ಅವರು ಮಂಗಳವಾರ ನಿಧನರಾದರು.

ಇವರು ಪತ್ನಿ ನಾಗರತ್ನ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಜನತಾನಗರದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ರಾಜಮಾರ್ಗದಲ್ಲಿ 'ಅಪಾಯಕಾರಿ' ಅಲಂಕಾರ ಬೇಕಿತ್ತಾ!

ಪಾದಚಾರಿಗಳ ಆತಂಕದ ನುಡಿ



ಮೈಸೂರಿನ ಕೆ.ಆರ್.ವೃತ್ತದ ಬಳಿ ಸಯ್ಯಾಜಿರಾವ್ ರಸ್ತೆಯಲ್ಲಿ ಕಳಚಿ ಬಿದ್ದಿರುವ ಸ್ಟೋನ್ ರೇಲಿಂಗ್ ಕಂಬಗಳು.

ಮೈಸೂರು, ನ.12(ಎಸ್‌ಬಿಡಿ)– ಮೈಸೂರಿನ ರಾಜಮಾರ್ಗದ ಇಕ್ಕೆಲಗಳಲ್ಲಿರುವ ಕಲ್ಲಿನ ಬೇಲಿ(ಸ್ಟೋನ್ ರೇಲಿಂಗ್) ಅಲ್ಲಲ್ಲಿ ಕಳಚಿ ಬೀಳುತ್ತಲೇ ಇವೆ. ಸಯ್ಯಾಜಿರಾವ್ ರಸ್ತೆ, ಕೆ.ಆರ್.ವೃತ್ತದ ಬಳಿ ಸ್ಟೋನ್ ರೇಲಿಂಗ್‌ನ ಏಳೆಂಟು ಕಂಬಗಳು ಇಂಟರ್‌ಲಾಕ್ ಸಮೇತ ನೆಲಕ್ಕುರುಳಿ ತುಂಡಾಗಿವೆ. ಅದೃಷ್ಟವಶಾತ್ ಯಾರಿಗೂ ತೊಂದರೆಯಾಗಿಲ್ಲ. ಸ್ಟೋನ್ ರೇಲಿಂಗ್ ತುಂಡುಗಳು ಅಲ್ಲಿಯೇ ಬಿದ್ದಿದ್ದು, ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ಅಜ್ಞಾನದಿಂದಾದ ಅವೈಜ್ಞಾನಿಕ ಕಾಮಗಾರಿ ಬಗ್ಗೆ ಸಾರ್ವಜನಿಕರು ಶಪಿಸುತ್ತಿದ್ದಾರೆ.

ಅರಮನೆ ಸುತ್ತಲಿನ ಹಾಗೂ ಜಂಬೂಸವಾರಿ ಸಾಗುವ ರಸ್ತೆಯನ್ನು 'ರಾಜಮಾರ್ಗ' ಎಂದು ಅಭಿವೃದ್ಧಿಪಡಿಸಿ, ಇಕ್ಕೆಲಗಳಲ್ಲಿ ಅಲಂಕಾರಿಕ ಸ್ಟೋನ್ ರೇಲಿಂಗ್ ಅಳವಡಿಸಲಾಯಿತು. ಕಾಮಗಾರಿ ಮುಗಿದಾಗಿನಿಂದಲೂ ನಿರಂತರವಾಗಿ ಕಲ್ಲು ಕಂಬಗಳು ಕಳಚಿ ಬೀಳುತ್ತಲೇ ಇವೆ. ಆ ತುಂಡುಗಳನ್ನು ಪಾಲಿಕೆಯವರು ಆಯ್ದುಕೊಂಡು ಒಂದು ಕಡೆ ರಾಶಿ ಹಾಕುತ್ತಿದ್ದಾರೆ. ಇದನ್ನು ಸಂಪೂರ್ಣ ತೆರವು ಮಾಡಿ, ಹೊಸದಾಗಿ ನಿರ್ಮಾಣ ಮಾಡಬಹುದೇ ಹೊರತು ದುರಸ್ತಿ ಸಾಧ್ಯವೇ ಇಲ್ಲ ಎಂಬುದು ಎಲ್ಲರಿಗೂ ತಿಳಿದಿರುವ ಸತ್ಯ.

ಆದರೆ ಈ ರೀತಿ ಕಲ್ಲುಕಂಬಗಳು ಕಳಚಿ ಜನರ ಮೇಲೆ ಬಿದ್ದರೆ ಏನು ಗತಿ?. 2019ರ ಡಿಸೆಂಬರ್‌ನಲ್ಲಿ ತಾತಯ್ಯ ಉದ್ಯಾನದ ಬಳಿ ರೇಲಿಂಗ್‌ನ ಕಂಬವೊಂದು ಕಳಚಿ ಬಿದ್ದ ಪರಿಣಾಮ ವ್ಯಕ್ತಿಯೊಬ್ಬರು ಗಾಯಗೊಂಡಿದ್ದರು. ಪಾಲಿಕೆ ಮುಂಭಾಗವೂ ಸೇರಿದಂತೆ ಹಲವು ಕಡೆ ರೇಲಿಂಗ್ ಅಲುಗಾಡುತ್ತಿದ್ದು, ಯಾವಾಗ ಕಳಚಿ ಬೀಳುವುದೋ ಗೊತ್ತಿಲ್ಲ. ಈ ಬಗ್ಗೆ ತುರ್ತಾಗಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಕುಮಾರಸ್ವಾಮಿ, ದೇವೇಗೌಡರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ ಜಮೀರ್ ಅಹಮದ್‌ರನ್ನು ಸಂಪುಟದಿಂದ ವಜಾಗೊಳಿಸಿ

ಮೈಸೂರು ಜಿಲ್ಲಾ ಒಕ್ಕಲಿಗರ ಸಂಘ ಆಗ್ರಹ

ಮೈಸೂರು, ನ.12(ಜಿಎ)–ಚನ್ನಪಟ್ಟಣ ಉಪಚುನಾವಣಾ ಪ್ರಚಾರದಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹಾಗೂ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡಿರುವ ಸಚಿವ ಜಮೀರ್ ಅಹಮದ್‌ರನ್ನು ಸಂಪುಟ ಸ್ಥಾನದಿಂದ ವಜಾಗೊಳಿಸಬೇಕೆಂದು ಮೈಸೂರು ಜಿಲ್ಲಾ ಒಕ್ಕಲಿಗರ ಸಂಘ ಆಗ್ರಹಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ಸಿ.ಮರಿಸ್ವಾಮಿ ಮಾತನಾಡಿ, ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಕರಿಯ ಎಂದು ಹಾಗೂ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಕುಟುಂಬವನ್ನು ಮುಸಲ್ಮಾನರು ಒಂದೊಂದು ರೂಪಾಯಿ ಸಂಗ್ರಹಿಸಿ, ಖರೀದಿಸುತ್ತೇವೆಂದು ಹೇಳುವ ಮೂಲಕ ಜಮೀರ್ ಧಾರ್ಮಿಕ ಸಂಘರ್ಷಕ್ಕೆ ಕಿಡಿ ಹೊತ್ತಿಸಿದ್ದಾರೆ ಎಂದು ಹೇಳಿದರು.

ದೇವೇಗೌಡರಿಗೆ ಅವಮಾನವಾದರೆ ಒಕ್ಕಲಿಗ ಸಮುದಾಯಕ್ಕೆ ಅವಮಾನ ಆಗುತ್ತದೆ. ಒಕ್ಕಲಿಗರು ಸಮಾಜದ ಎಲ್ಲಾ ಸಮುದಾಯದವರೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದೇವೆ. ಅದರಲ್ಲೂ ಮುಸ್ಲಿಂ ಸಮುದಾಯದವರೊಂದಿಗೆ ಕೃಷಿಕಾರ್ಯಗಳಲ್ಲಿ ಅನ್ಯೋನ್ಯದಿಂದ ಇದ್ದೇವೆ. ಈ ರೀತಿ ಇರುವಾಗ ಜಮೀರ್ ದೇವೇಗೌಡರನ್ನು, ಖರೀದಿಸುತ್ತೇನೆ ಎಂಬ ದುರಹಂಕಾರಿ ಹೇಳಿಕೆಯು ಒಕ್ಕಲಿಗ ಸಮುದಾಯವನ್ನೇ ಕೊಂಡುಕೊಳ್ಳುತ್ತೇನೆ ಎಂಬಂತೆ ಭಾಸವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅವರ ಸಂಪುಟದ ಯಾವುದೇ ಸಚಿವರು ಸಮೀರ್ ಹೇಳಿಕೆಯನ್ನು ಖಂಡಿಸಿಲ್ಲ. ಸಮಾಜದಲ್ಲಿ ಅಶಾಂತಿ ಸೃಷ್ಟಿಸುವವರು ಸಚಿವ ಸ್ಥಾನದಲ್ಲಿ ಮುಂದುವರೆಯುವುದು ಜನತೆಯ ಆಶೋತ್ತರಗಳಿಗೆ ಭಂಗ ತರುವಂತಹುದು. ಹಾಗಾಗಿ ಮುಖ್ಯಮಂತ್ರಿಗಳು ಈ ಕೂಡಲೇ ಮಂತ್ರಿ ಸ್ಥಾನದಿಂದ ವಜಾಗೊಳಿಸಬೇಕೆಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಸಿ.ಜಿ.ಗಂಗಾಧರ್ ಗೌಡ, ಪ್ರೇಮಶಂಕರೇಗೌಡ, ಎ.ರವಿ, ತೇಜಸ್ ಲೋಕೇಶ್‌ಗೌಡ ಮತ್ತಿತರರು ಉಪಸ್ಥಿತರಿದ್ದರು.

ಶ್ರೀ ಮಹದೇಶ್ವರಸ್ವಾಮಿ ಉತ್ಸವ




ಮೈಸೂರಿನ ಗರಡಿಗೇರಿಯಲ್ಲಿರುವ ಶ್ರೀ ಮಲೆ ಮಹದೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್ ವತಿಯಿಂದ ಕಾರ್ತಿಕ ಮಾಸದ ಪೂಜಾ ಮಹೋತ್ಸವದ ಅಂಗವಾಗಿ ಪ್ರಮುಖ ರಸ್ತೆಗಳಲ್ಲಿ ಶ್ರೀ ಮಲೆ ಮಹದೇಶ್ವರಸ್ವಾಮಿ ಭವ್ಯ ಮೆರವಣಿಗೆ ನೆರವೇರಿಸಲಾಯಿತು.

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಸ್ನೇಹಮಯಿ ಕೃಷ್ಣ ಅಪಪ್ರಚಾರ ಆರೋಪ

ಕ್ರಮಕ್ಕೆ ಆಗ್ರಹಿಸಿ ಕಾಂಗ್ರೆಸ್ ನಿಯೋಗದಿಂದ ಪೊಲೀಸರಿಗೆ ದೂರು

ಮೈಸೂರು, ನ.12(ಬಿಎಲ್‌ಯು)– ಮುಡಾ ಪ್ರಕರಣ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಸುಳ್ಳು ಸುದ್ದಿ ಹರಡುತ್ತಾ ಅಪಪ್ರಚಾರ ಮಾಡುತ್ತಿರುವ ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕಾಂಗ್ರೆಸ್ ನಿಯೋಗ ಇಂದು ಪೊಲೀಸ್ ಠಾಣೆಗೆ ದೂರು ನೀಡಿದೆ.

ಕೆಪಿಸಿಸಿ ವಕ್ತಾರ ಲಕ್ಷ್ಮಣ ನೇತೃತ್ವದ ಕಾಂಗ್ರೆಸ್ ನಿಯೋಗ ಇಂದು ನಗರದ ದೇವರಾಜ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಶಿವಕುಮಾರ್ ಅವರಿಗೆ ಲಿಖಿತ ದೂರು ಸಲ್ಲಿಸಿ, ಸ್ನೇಹಮಯಿ ಕೃಷ್ಣ ವಿರುದ್ಧ ಕ್ರಮಕ್ಕೆ ಆಗ್ರಹಿಸಿದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಅಪಪ್ರಚಾರ ಮಾಡುತ್ತಿರುವ ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಮೈಸೂರಿನ ದೇವರಾಜ ಪೊಲೀಸ್ ಠಾಣೆಗೆ ದೂರು ನೀಡಿದರು.

ಮುಡಾ ಪ್ರಕರಣದ ಬಗ್ಗೆ ಲೋಕಾಯುಕ್ತ ತನಿಖೆ ನಡೆಸುವಂತೆ ಸ್ನೇಹಮಯಿ ಕೃಷ್ಣ ಹಾಗೂ ಟಿ.ಜೆ.ಅಬ್ರಹಾಂ ನ್ಯಾಯಾಲಯದ ಮೊರೆ ಹೋಗಿದ್ದರು. ಅದರಂತೆ ನ್ಯಾಯಾಲಯ ಕೂಡ ಲೋಕಾಯುಕ್ತ ತನಿಖೆಗೆ ಆದೇಶಿಸಿದೆ. ಈ ಹಿನ್ನೆಲೆಯಲ್ಲಿ ಲೋಕಾಯುಕ್ತರು ತನಿಖೆ ನಡೆಸುತ್ತಿದ್ದಾರೆ. ಆದರೆ ಲೋಕಾಯುಕ್ತ ತನಿಖೆ ಸರಿಯಾಗಿ ನಡೆಯುತ್ತಿಲ್ಲವೆಂದು ಲೋಕಾಯುಕ್ತ ಎಡಿಜಿಪಿಗೆ ದೂರು ನೀಡುವುದಲ್ಲದೆ, ತನಿಖಾಧಿಕಾರಿಗೆ ದಿನನಿತ್ಯ ಬ್ಲ್ಯಾಕ್ ಮೇಲ್ ಮಾಡಿ, ಒತ್ತಡ ತರುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

ಲೋಕಾಯುಕ್ತರು ತನಿಖಾ ವರದಿಯನ್ನು ಇನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ಪ್ರಕರಣ ವಿಚಾರಣೆ ಹಂತದಲ್ಲಿರುವಾಗಲೇ ತನಿಖೆ ಸರಿಯಾಗಿ ನಡೆಯುತ್ತಿಲ್ಲವೆಂದು ಆಕ್ಷೇಪಿಸುತ್ತಿದ್ದಾರೆ ಎಂದು ಲಕ್ಷ್ಮಣ್ ದೂರಿದ್ದಾರೆ.

ಕ್ರಯಪತ್ರದ ವೇಳೆ ಸಿದ್ದರಾಮಯ್ಯ ಪತ್ನಿ ಪಾರ್ವತಿ ಬದಲು ವಿಶೇಷ ತಹಶೀಲ್ದಾರ್ ಮುದ್ರಾಂಕ ಶುಲ್ಕ ಪಾವತಿಸಿದ್ದಾರೆಂದು ಆರೋಪಿಸಿದ್ದಾರೆ. ಆದರೆ ಕರ್ನಾಟಕ ನೋಂದಣಿ ಕಾಯ್ದೆ ಸೆಕ್ಷನ್ 1965 ರ ಪ್ರಕಾರ ಮುಡಾದಿಂದ ನಿವೇಶನದಾರರಿಗೆ ನೀಡಲಾಗುವ ಕ್ರಯಪತ್ರಗಳಿಗೆ ಸಂಬಂಧಿಸಿದಂತೆ ಕ್ರಯಪತ್ರ ನೋಂದಾಯಿಸಲು ಉಪ ನೋಂದಣಾಧಿಕಾರಿಗಳ ಕಚೇರಿಗೆ ನಿವೇಶನದಾರರು ಹಾಜರಾಗದೆ ವಿನಾಯಿತಿ ಪಡೆದ ಸಂದರ್ಭದಲ್ಲಿ ಕ್ರಯ ಮಾಡಿಸಿಕೊಳ್ಳುವವರ ಪರವಾಗಿ ನೋಂದಣಿ ಮಾಡುವವರೇ ಹಣ ಪಾವತಿಸಬಹುದು. ಅಲ್ಲದೆ ಪಾರ್ವತಿ ಅವರು ಮುದ್ರಾಂಕ ಶುಲ್ಕ ಪಾವತಿ ಮಾಡಿದ್ದು, ಚಲನ್‌ನಲ್ಲಿ ಪಾರ್ವತಿ ಅವರ ಹೆಸರು ನಮೂದಾಗಿದೆ. ಇದರ ಸಂಪೂರ್ಣ ದಾಖಲಾತಿ ದೂರಿನ ಜೊತೆ ಸಲ್ಲಿಸಿರುವುದಾಗಿ ತಿಳಿಸಿದ್ದಾರೆ.

ವಾಸ್ತವತೆ ಹೀಗಿದ್ದರೂ ಸತ್ಯಾಂಶ ಮರೆಮಾಚುತ್ತಿರುವ ಸ್ನೇಹಮಯಿ ಕೃಷ್ಣ, ಸಿದ್ದರಾಮಯ್ಯ ಅವರನ್ನು ನಿರಂತರ ತೇಜೋವಧೆ ಮಾಡುವುದಲ್ಲದೆ ಜನಸಾಮಾನ್ಯರಲ್ಲಿ ತಪ್ಪು ಕಲ್ಪನೆ ಮೂಡಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಸ್ನೇಹಮಯಿ ಕೃಷ್ಣ ವಿರುದ್ಧ ಕಾನೂನು ರೀತಿ ಕ್ರಮ ಕೈಗೊಳ್ಳಬೇಕು ಎಂದು ಲಕ್ಷ್ಮಣ್ ಆಗ್ರಹಿಸಿದರು.

ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಮಾಧ್ಯಮ ವಕ್ತಾರ ಮಹೇಶ್ ಈ ವೇಳೆ ಹಾಜರಿದ್ದರು.

ನ.15ರಂದು ಅಗ್ನಿಹೋತ್ರ ಯೋಗ ಕುರಿತು ಸಮಾವೇಶ

ಮೈಸೂರು, ನ.12(ಜಿಎ)–ರೋಟರಿ ಬೆಂಗಳೂರು ಗ್ಲೋಬಲ್ ಯೋಗ ಸಂಸ್ಥೆಯಿಂದ ನ.15ರಂದು ಬೆಳಗ್ಗೆ 10ರಿಂದ ಸಂಜೆ 6ಗಂಟೆವರೆಗೆ ಮಹರ್ಷಿ ಪಬ್ಲಿಕ್ ಶಾಲೆಯಲ್ಲಿ ಅಗ್ನಿಹೋತ್ರ ಯೋಗ ಕುರಿತ ಸಮಾವೇಶ ಆಯೋಜಿಸಲಾಗಿದೆ ಎಂದು ಸಂಯೋಜಕ ಚಂದನ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮಾವೇಶದಲ್ಲಿ ಸುಮಾರು 1800 ಮಂದಿ ಪಾಲ್ಗೊಳ್ಳಲಿದ್ದಾರೆ. ಸನಾತನ ಧರ್ಮದ ಆಚಾರ ವಿಚಾರಗಳ ಹಿಂದೆ ಬಹಳಷ್ಟು ವೈಜ್ಞಾನಿಕ ವಿಚಾರಗಳಿವೆ. ಈ ಹಿನ್ನೆಲೆಯಲ್ಲಿ ಸಮಾವೇಶ ಆಯೋಜಿಸಿದ್ದು, ಎಂಬಿಬಿಎಸ್‌ನಲ್ಲಿ ಸೀಟು ಸಿಕ್ಕಿಲ್ಲ ಎಂದು ಹಲವರು ಆಯುರ್ವೇದ ವ್ಯಾಸಂಗಕ್ಕೆ ಬರುತ್ತಾರೆ. ಅವರುಗಳು ಆಸಕ್ತಿಯಿಂದ ಅಧ್ಯಯನ ಮಾಡಲು ಈ ಸಮಾವೇಶ ನೆರವಾಗುವುದು. ಇದೇ ಕ್ಷೇತ್ರದಲ್ಲಿ ಉದ್ಯೋಗ ದೊರಕಿಸಿಕೊಳ್ಳುವುದು ಹೇಗೆ ಎಂಬ ಬಗ್ಗೆ ಮಾರ್ಗದರ್ಶನ ನೀಡುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ವಿರೇಂದ್ರ, ತೇಜಸ್ ಶಂಕರ್ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

13.11.2024 ಬುಧವಾರ, ಮಳೆ ನಕ್ಷತ್ರ: ವಿಶಾಖ, 06.11.2024 ರಿಂದ 18.11.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಶುಕ್ಲ ಪಕ್ಷ,
ತಿಥಿ: ದ್ವಾದಶಿ, ನಕ್ಷತ್ರ: ರೇವತಿ, ರಾಹುಕಾಲ: ಮಧ್ಯಾಹ್ನ 12 ರಿಂದ 1.30 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಕತ್ತು ನೋವು, ಸೊಂಟ ನೋವು, ಭುಜದ ನೋವು ಇತರೆ ತೊಂದರೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9ರಿಂದ.

■ **ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್ :** ಕನ್ನಡ ರಾಜ್ಯೋತ್ಸವ ಪ್ರಯುಕ್ತ ವಿಶೇಷ ರಿಯಾಯಿತಿ ಮಾರಾಟ, ಸ್ಥಳ: ಮಾರಾಟ ಮಳಿಗೆ, ರಾಮಸ್ವಾಮಿ ವೃತ್ತ, ಬೆಳಗ್ಗೆ 9.30 ರಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

■ **ಭಾರತೀಯ ಅಂಚೆ ಇಲಾಖೆ :** 38ನೇ ಅಖಿಲ ಭಾರತ ಅಂಚೆ ಬ್ಯಾಡ್ಮಿಂಟನ್ ಪಂದ್ಯಾವಳಿ, ಸ್ಥಳ: ಚಾಮುಂಡಿ ವಿಹಾರ ಒಳಾಂಗಣ ಕ್ರೀಡಾಂಗಣ, ಬೆಳಗ್ಗೆ 10 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಕೂದಲು ಉದುರುವಿಕೆಗೆ ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಯಿಂದ.


■ **ಶ್ರೀ ನಟರಾಜ ಪರ್ಫಾರ್ಮಿಂಗ್ ಆರ್ಟ್ಸ್ ಸೆಂಟರ್ :** ನೃತ್ಯ ಸಂಭ್ರಮ, ಉದ್ಘಾಟನೆ : ನೂಪುರ ಕಲಾವಿದರು ಟ್ರಸ್ಟ್ ನಿರ್ದೇಶಕ ಪ್ರೊ. ಕೆ. ರಾಮಮೂರ್ತಿರಾವ್, ಮುಖ್ಯ ಅತಿಥಿಗಳು: ನೃತ್ಯಗಿರಿ ಪ್ರದರ್ಶಕ ಕಲೆಗಳ ಕೇಂದ್ರದ ನಿರ್ದೇಶಕರಾದ ಶ್ರೀಮತಿ ಡಾ. ಕೃಪಾ ಫಡ್ಕೆ, ಅಧ್ಯಕ್ಷತೆ : ಶ್ರೀ ನಟರಾಜ ಪರ್ಫಾರ್ಮಿಂಗ್ ಆರ್ಟ್ಸ್ ಸೆಂಟರ್ ಅಧ್ಯಕ್ಷ ಎಂ.ಕೆ. ಬಾಲರಾಜು, ಸ್ಥಳ: ಶ್ರೀ ನಟರಾಜ ಪರ್ಫಾರ್ಮಿಂಗ್ ಆರ್ಟ್ಸ್ ಸೆಂಟರ್, ಸಂಜೆ 6ಕ್ಕೆ.

■ **ಜಗದ್ಗುರು ಶ್ರೀ ವೀರಸಿಂಹಾಸನ ಮಹಾ ಸಂಸ್ಥಾನ ಮಠ (ಶ್ರೀ ಸುತ್ತೂರು ಕ್ಷೇತ್ರ, ಮೈಸೂರು ಜಿಲ್ಲೆ):** ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ ಶ್ರೀ ಮಹದೇಶ್ವರರ ಸನ್ನಿಧಿ, ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ಸೋಮೇಶ್ವರ ದೇವಸ್ಥಾನಗಳ ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮಗಳು, ಸ್ಥಳ: ಮಠದ ಆವರಣ, ಸಂಜೆ

■ **ರಂಗಾಯಣ :** ರಂಗಭೀಷ್ಮ ಬಿ.ವಿ.ಕಾರಂತ ಕಾಲೇಜು ರಂಗೋತ್ಸವ, ಶೇಕ್ಸ್‌ಪಿಯರ್‌ನ ಮ್ಯಾಕ್‌ಬೆತ್ ಆಧಾರಿತ ಮಾರನಾಯಕ ನಾಟಕ ಪ್ರದರ್ಶನ, ರಚನೆ : ಹೆಚ್.ಎಸ್. ಶಿವಪ್ರಕಾಶ್, ನಿರ್ದೇಶನ : ಪಿ. ಚಾಂದಿನಿ, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.

■ **ಉನ್ನತ ಶಿಕ್ಷಣ ಇಲಾಖೆ :** ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಕಾಮಗಾರಿಗಳ ಶಂಕುಸ್ಥಾಪನೆ ಸಮಾರಂಭ, ಶಂಕುಸ್ಥಾಪನೆ : ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಸ್ಥಿತರು : ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಸತೀಶ್ ಜಾರಕಿಹೊಳಿ, ಕೆ. ವೆಂಕಟೇಶ್, ಡಾ. ಹೆಚ್.ಸಿ. ಮಹದೇವಪ್ಪ, ಡಾ. ಎಂ.ಸಿ. ಸುಧಾಕರ್, ಜಮೀರ್ ಅಹಮದ್, ಅಧ್ಯಕ್ಷತೆ : ಶಾಸಕ ಕೆ. ಹರೀಶ್‌ಗೌಡ, ಮುಖ್ಯ ಅತಿಥಿಗಳು : ಸಂಸದರಾದ ಸುನೀಲ್ ಬೋಸ್, ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸ್ಥಳ: ಮಹಾರಾಜ ಪಿಯು ಕಾಲೇಜು ಮೈದಾನ, ಬೆಳಗ್ಗೆ 10.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ವಾದ್ಯ ವೈಭವ–ಸಂಗೀತ ವಾದ್ಯಗಳ ಪರಿಚಯ ಮಾಲಿಕೆ, ಪ್ರಸ್ತುತಿ: ಚೈತ್ರಿಕಾ. ಎಸ್., 6.40 ಅರಿವಿನ ಶಿಖರ : ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಎ. ಎಸ್. ನಾಗಲಕ್ಷ್ಮೀ, ವ್ಯಾಖ್ಯಾನ–ಮೊರಬದ ಮಲ್ಲಿಕಾರ್ಜುನ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಚಿತ್ರಗೀತೆಗಳು, 9.00 ವೃತ್ತಿ ಮಾರ್ಗದರ್ಶನ, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ: ನಾಸಿರ್ ಅಹ್ಮದ್–ಮ್ಯಾಂಡೋಲಿನ್ ವಾದನ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ: 12.35 ಆಯುಷ್ ವಾಣಿ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, 12.40 ದೇವರನಾಮ–ಪಿ. ಎಸ್. ರಂಜನಿ, 12.45 ಜನಪದ ಸಂಗೀತ, 1.00 ಸಕ್ಕರೆ ನಾಡಿನ ಅಕ್ಕರೆಯ ಲೇಖಕರು, ಲೇಖನ ಹಾಗೂ ಪ್ರಸ್ತುತಿ : ಶಭಾನ ಮತ್ತು ಕೀರ್ತಿ. ಎಸ್. ಬೈಂದೂರು, ಪರಿಕಲ್ಪನೆ : ಅಬ್ದುಲ್ ರಶೀದ್, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಡಾ. ಕೆ.ಜೆ. ಯೇಸುದಾಸ್ – ಹಾಡುಗಾರಿಕೆ, 4.00 ಮಹಿಳಾರಂಗ–ರಾಜ್ಯೋತ್ಸವ ತಿಂಗಳ ವಿಶೇಷ –ಮಹಿಳಾ ಸಾಧಕಿಯರೊಂದಿಗೆ ಸಂವಾದ, 4.45 ಹಿಂದಿ ಪಾಠ–ಶಾಂತಾ. ಡಿ. ಕಿಣಿ, 6.50 ಕೃಷಿರಂಗ : ಕೃಷಿ ದೀವಿಗೆ 'ಸಂಶೋಧನಾ ಸಂಸ್ಥೆಯೊಂದಿಗೆ ಕೃಷಿ ಕಲಿಕೆ' ಕುರಿತ ಬಾನುಲಿ ಸರಣಿ ಹಿಂಗಾರಿಗೆ ಸೂಕ್ತವಾದ ಮೇವಿನ ಬೆಳೆಗಳು. ಈ ಕುರಿತು ಮಂಡ್ಯದ ವಿ.ಸಿ. ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರದ ಪ್ರಾಧ್ಯಾಪಕರಾದ ಡಾ. ಪಿ.ಮಹದೇವು ಅವರೊಂದಿಗೆ ಸಂದರ್ಶನ. ಸಂದರ್ಶಕರು : ಎನ್. ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 9.30 ಕ್ರೀಡಾಲೋಕ, 10.00 ಜನಪದ ಸಂಗೀತ, 10.30 ಸವಿನೆನಪು



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ನವೆಂಬರ್ 13 ಬುಧವಾರ 2024


45

ಸಂಪುಟ: 45 | ಸಂಚಿಕೆ: 206 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಏಕಕಾಲದಲ್ಲಿ ಪಾಲಿಕೆ, ಮುಡಾದಲ್ಲಿ ನೌಕರಿ; ಎರಡೂ ಕಡೆ ವೇತನ ಪಡೆಯುತ್ತಿದ್ದ
ಮುಡಾ ನಿವೇಶನ ಹಗರಣದ 'ಕಿಂಗ್‌ಪಿನ್' ಬಿ.ಕೆ.ಕುಮಾರ್ ಸೇವೆಯಿಂದ ವಜಾ

● ಎಸ್.ಟಿ.ರವಿಕುಮಾರ್

ಮೈಸೂರು, ನ.12–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಸಾವಿರಾರು ನಿವೇಶನಗಳನ್ನು ಕಂಡಕಂಡವರಿಗೆ ಮಂಜೂರು ಮಾಡಿದ ಬ್ರಹ್ಮಾಂಡ ಭ್ರಷ್ಟಾಚಾರದ ಕಿಂಗ್‌ಪಿನ್ ಹಾಗೂ ಏಕಕಾಲದಲ್ಲಿ, ಕಳೆದ 20 ವರ್ಷಗಳಿಂದ ಮೈಸೂರು ಮಹಾನಗರಪಾಲಿಕೆ ಮತ್ತು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಕಚೇರಿಗಳಲ್ಲಿ ಪಾಳಿಯ ಮೇಲೆ ಕೆಲಸ ಮಾಡಿ ಎರಡೂ ಕಡೆ ವೇತನ ಪಡೆಯುತ್ತಿದ್ದ ಚಾಣಾಕ್ಷ ಬಿ.ಕೆ.ಕುಮಾರ್‌ನನ್ನು ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಅವರು ಸೇವೆಯಿಂದ ವಜಾಗೊಳಿಸಿದ್ದು, ಆತನ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಲು ಮುಂದಾಗಿದ್ದಾರೆ.

ಪ್ರಸ್ತುತ ಮೈಸೂರು ಮಹಾನಗರ ಪಾಲಿಕೆಯ ವಾಣಿವಿಲಾಸ ನೀರು ಸರಬರಾಜು ಮತ್ತು ಒಳಚರಂಡಿ ವಿಭಾಗದ



ಮಲಿನ ನೀರು ಶುದ್ಧೀಕರಣ ಘಟಕದಲ್ಲಿ ದ್ವಿತೀಯ ದರ್ಜೆ ಸಹಾಯಕ (ಸಮಾನ ಕೆಲಸಕ್ಕೆ ಸಮಾನ ವೇತನ) ನಾಗಿ ಕೆಲಸ ಮಾಡುತ್ತಿದ್ದ ಬಿ.ಕೆ.ಕುಮಾರ್, ಇದೇ ವೇಳೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಕಚೇರಿಯಲ್ಲಿ ಹೊರಗುತ್ತಿಗೆ ನೌಕರನಾಗಿ ಎರಡೂ ವೇತನ ಪಡೆದು ಕಾನೂನು ಉಲ್ಲಂಘನೆ ಮಾಡಿರುವುದರಿಂದ ಆತನನ್ನು ಕೆಲಸ ದಿಂದ ವಜಾ ಮಾಡಿರುವ ಪಾಲಿಕೆ ಆಯುಕ್ತರು, ಆತನ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಲು



ಕ್ರಮ ಕೈಗೊಳ್ಳಲಾಗಿದೆ ಎಂದು 2024ರ ನವೆಂಬರ್ 6ರಂದು ಹೊರಡಿಸಿರುವ ಅಧಿಕೃತ ಜ್ಞಾಪನದಲ್ಲಿ ತಿಳಿಸಿದ್ದಾರೆ.

ಮೂಲತಃ ಪಾಂಡವಪುರ ತಾಲೂಕು ಬೇವಿನಕುಪ್ಪೆ ಗ್ರಾಮದವನಾದ ಬಿ.ಕೆ. ಕುಮಾರ್, ಕಳೆದ 2004ರಲ್ಲಿ ತುಂಡು ಕೆಲಸಗಳ (ಪೀಸ್ ವರ್ಕ್) ಆಧಾರದ ಮೇಲೆ ಅಂದು ಕೆಲಸ ನಿರ್ವಹಿಸುತ್ತಿದ್ದ ಕೆಲ ನೌಕರರು ನಿವೃತ್ತಿ ಅಥವಾ ಕೆಲಸ ತ್ಯಜಿಸಿದ್ದರಿಂದ ಖಾಲಿಯಾದ ಹುದ್ದೆಗಳಿಗೆ ಸಮಾನ ಕೆಲಸಕ್ಕೆ ಸಮಾನ ವೇತನದಡಿ ಮೈಸೂರು ಮಹಾನಗರಪಾಲಿಕೆಯಲ್ಲಿ ಸೇವೆಗೆ ಸೇರಿಕೊಂಡಿದ್ದ. ಅದೇ ವೇಳೆ ಕೆಲ ರಾಜಕಾರಣಿಗಳು, ಪ್ರಭಾವಿಗಳು ಹಾಗೂ ಆಪ್ತ ಅಧಿಕಾರಿಗಳ ಕೃಪಾಕಟಾಕ್ಷದಿಂದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮುಖ್ಯ ಲೆಕ್ಕಾಧಿಕಾರಿ ಕಚೇರಿಯಲ್ಲೂ ದ್ವಿತೀಯ ದರ್ಜೆ ಸಹಾಯಕನಾಗಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದ ಆತ ಏಕಕಾಲದಲ್ಲಿ ಎರಡೂ ಕಡೆ ಸಂಬಳ ಪಡೆಯುತ್ತಿದ್ದ ಎಂಬ ದೂರುಗಳ ಹಿನ್ನೆಲೆಯಲ್ಲಿ ರಚಿಸಿದ್ದ ಸಮಿತಿಯು ಆತ ಏಕಾಲದಲ್ಲಿ ಎರಡೂ ಕಡೆ ಕೆಲಸ ಮಾಡಿ ಪ್ರತಿ ತಿಂಗಳು ಎರಡೆರಡು ಕಡೆ ಸಂಬಳ ಪಡೆಯುತ್ತಿದ್ದ ಎಂದು 2024ರ ಅಕ್ಟೋಬರ್ 22ರಂದು ವರದಿ ನೀಡಿತ್ತು. ಈ ರೀತಿ ಒಬ್ಬ ವ್ಯಕ್ತಿ ಎರಡು ಸರ್ಕಾರಿ ಕಚೇರಿಗಳಲ್ಲಿ ಕೆಲಸ ಮಾಡುವುದು ಕಾರ್ಮಿಕ ಕಾಯ್ದೆ ಅನ್ವಯ ನಿಯಮಬಾಹಿರ ಎಂದು ಅಭಿಪ್ರಾಯಪಟ್ಟ ಕಾರಣ, ಪಾಲಿಕೆ ಆಯುಕ್ತರು ಕುಮಾರ್‌ನನ್ನು ● 6ನೇ ಪುಟಕ್ಕೆ

- ತುಂಡು ಕೆಲಸ ಆಧಾರದ ಮೇಲೆ ಪಾಲಿಕೆಯ ಒಳಚರಂಡಿ ವಿಭಾಗದ ಮಲಿನ ನೀರು ಶುದ್ಧೀಕರಣ ಘಟಕದಲ್ಲಿ ಕೆಲಸ ಮಾಡುತ್ತಿದ್ದ ಕುಮಾರ್; 2004ರಿಂದಲೂ ಮುಡಾ ಕಚೇರಿಯಲ್ಲೂ ಕರ್ತವ್ಯ ನಿರ್ವಹಣೆ
- ಮೂಲತಃ ಪಾಂಡವಪುರ ತಾಲೂಕು ಬೇವಿನಕುಪ್ಪೆ ಗ್ರಾಮದವನಾದ ಈತ ಮೈಸೂರಿನ ವಿಜಯನಗರದ 2ನೇ ಹಂತದಲ್ಲಿ ಭವ್ಯ ಬಂಗಲೆ, ಕೋಟಿಗಟ್ಟಲೆ ಆಸ್ತಿಯ ಒಡೆಯ; ಅಲ್ಪಕಾಲದಲ್ಲೇ ಐಷಾರಾಮಿ ಜೀವನ ಭಾಗ್ಯ
- 2020ರಿಂದೀಚೆಗೆ ಮುಡಾ ಮುಖ್ಯ ಲೆಕ್ಕಾಧಿಕಾರಿ ಕಚೇರಿಯಲ್ಲಿ ಗುಮಾಸ್ತನಾಗಿದ್ದ ವೇಳೆ ಇಬ್ಬರು ಕಮಿಷನರ್‌ಗಳಿಗೆ ಶೇ.50:50ರಡಿ ನಿವೇಶನಗಳ ಪಟ್ಟಿ ಒದಗಿಸಿ ಪ್ರಭಾವಿ ಜನಪ್ರತಿನಿಧಿಗಳು, ಮಧ್ಯವರ್ತಿಗಳಿಗೆ ಪ್ರತಿಷ್ಠಿತ ಬಡಾವಣೆಗಳಲ್ಲಿ ಕೋಟ್ಯಾಂತರ ಬೆಲೆಬಾಳುವ ನಿವೇಶನ ಮಂಜೂರು ಮಾಡಿಸಿಕೊಡುತ್ತಿದ್ದನಂತೆ.
- ಈ ಹಿಂದೆ ಕಮಿಷನರ್ ಆಗಿದ್ದ ಪಿ.ಎಸ್.ಕಾಂತರಾಜು, ಕಾರ್ಯದರ್ಶಿ ಎಂ.ಕೆ.ಸವಿತಾ ರಕ್ಷಣೆ ಮಾಡಿದ್ದ 8000 ಖಾಲಿ ನಿವೇಶನಗಳ ಪಟ್ಟಿಯಲ್ಲಿದ್ದ ನಿವೇಶನ ಕಂಡ–ಕಂಡವರಿಗೆ ಹಂಚಿಕೆ ಮಾಡಲು ಸಹಕರಿಸುತ್ತಿದ್ದ ಆರೋಪ.
- ಮುಡಾ ಕಚೇರಿಯ ಎಲ್ಲಾ ವಿಭಾಗದಲ್ಲಿ ಈತನ ಪಾರುಪತ್ಯ; ಬೇಕಾದ ದಾಖಲೆ ಕ್ಷಣಾರ್ಧ ಈತನ ಕೈಯ್ಯಲ್ಲಿರುತ್ತಿತ್ತು!

ಇಡಿ ವಶದಲ್ಲಿ ಕುಮಾರ್?


ಮೈಸೂರು, ನ.12(ಆರ್‌ಕೆ)– ಮುಡಾ ಹಗರಣದ 'ಕಿಂಗ್‌ಪಿನ್' ಎಂದೇ ಹೇಳಲಾಗುತ್ತಿರುವ ಹಾಗೂ ಎರಡೂ ಸರ್ಕಾರಿ ಕಚೇರಿಗಳಲ್ಲಿ ಏಕಕಾಲದಲ್ಲಿ ಕರ್ತವ್ಯ ನಿರ್ವಹಿಸಿ ಎರಡೆರಡು ವೇತನ ಪಡೆದು ಕಾನೂನು ಉಲ್ಲಂಘಿಸಿದ ಹಿನ್ನೆಲೆಯಲ್ಲಿ ಸೇವೆಯಿಂದ ವಜಾಗೊಂಡಿರುವ ಬಿ.ಕೆ.ಕುಮಾರ್‌ನನ್ನು ಜಾರಿ ನಿರ್ದೇಶನಾಲಯ (ಇಡಿ)ದ ಅಧಿಕಾರಿಗಳು ನಾಲ್ಕು ದಿನದ ಹಿಂದೆಯೇ ವಶಕ್ಕೆ ಪಡೆದಿದ್ದಾರೆ



ಎಂದು ಹೇಳಲಾಗುತ್ತಿದೆ. ಮುಡಾದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ವೇಳೆ ಈ ಹಿಂದಿನ ಕಮಿಷನರ್‌ಗಳಿಗೆ ಖಾಲಿ ನಿವೇಶನಗಳ ಬಗ್ಗೆ ಮಾಹಿತಿ, ಅವುಗಳ ಮಂಜೂರಾತಿಗೆ ಅಗತ್ಯವಿದ್ದ ದಾಖಲೆಗಳನ್ನು ಒದಗಿಸುತ್ತಿದ್ದ ವಿಚಾರಕ್ಕೆ ಸಂಬಂಧಿಸಿದಂತೆ ಇಡಿ ಅಧಿಕಾರಿಗಳು ಮುಡಾ ಮತ್ತು ಪಾಲಿಕೆ ಕಚೇರಿಗಳಿಂದ ಮಾಹಿತಿಗಳನ್ನು ಕಲೆ ಹಾಕಿದ್ದರು. ಇದೀಗ ಮೈಸೂರು ಮಹಾನಗರಪಾಲಿಕೆ ಆಯುಕ್ತರು ● 6ನೇ ಪುಟಕ್ಕೆ

ಅಮೆರಿಕಾದಲ್ಲಿ ಮೈಸೂರಿನ ಯೋಗ ಗುರು ಶರತ್ ಜೋಯಿಸ್ ನಿಧನ

ಅಂತರರಾಷ್ಟ್ರೀಯ ಖ್ಯಾತಿಯ ಅಷ್ಟಾಂಗ ಯೋಗ ಗುರು ಪಟ್ಟಾಭಿ ಜೋಯಿಸ್ ಅವರ ಮೊಮ್ಮಗ ಶರತ್ ಜೋಯಿಸ್, ತಾತನ ಮಾರ್ಗದರ್ಶನದಲ್ಲಿ ಸಾಂಪ್ರದಾಯಿಕ ಪದ್ಧತಿಯ ಅಷ್ಟಾಂಗ ಯೋಗದ ಬಗ್ಗೆ ಮೈಸೂರು ಮತ್ತು ಪ್ರಪಂಚದಾದ್ಯಂತ ಸಹಸ್ರಾರು ವಿದ್ಯಾರ್ಥಿಗಳಿಗೆ ಯೋಗ ಕಲಿಸಿಕೊಡುತ್ತಿದ್ದರು



ಮೈಸೂರು, ನ.12 (ಆರ್‌ಕೆ)– ಅಂತರರಾಷ್ಟ್ರೀಯ ಖ್ಯಾತಿಯ ಅಷ್ಟಾಂಗ ಯೋಗಗುರು, ಮೈಸೂರು ವಿವಿ ಮೊಹಲ್ಲಾ ನಿವಾಸಿ ಶರತ್ ಜೋಯಿಸ್ (53) ಅವರು ನಿನ್ನೆ (ಸೋಮವಾರ) ಮಧ್ಯಾಹ್ನ ಅಮೆರಿಕಾದ ವರ್ಜಿನಿಯಾದಲ್ಲಿ ನಿಧನರಾಗಿದ್ದಾರೆ. ಮೂಲಗಳ ಪ್ರಕಾರ, ಶರತ್ ಅವರು ಯೋಗ ತರಬೇತಿ ನೀಡುತ್ತಿದ್ದಾಗಲೇ ಉಸಿರಾಟದ ಸಮಸ್ಯೆಯಿಂದಾಗಿ ಕುಸಿದು ಬಿದ್ದು, ಕೊನೆಯುಸಿರೆಳೆದಿದ್ದಾರೆ ಎನ್ನಲಾಗಿದೆ. ಅವರು ತಾಯಿ ಸರಸ್ವತಿ ಜೋಯಿಸ್ ● 6ನೇ ಪುಟಕ್ಕೆ

ಹುಲಿ, ಚಿರತೆ, ಆನೆ ಕಂಡರೆ ಭಯವಿಲ್ಲ...!
ಅರಣ್ಯ ಇಲಾಖೆಯವರ ಕಂಡರೆ ಭಯ...!

- ಹಾಡಿಗೆ ಬಂದ ನಾಡದೊರೆಯ ಬಳಿ ಆದಿವಾಸಿಗಳ ಆತಂಕದ ಅಳಲು; ನಾನಿದ್ದೇನೆ ಹೆದರಬೇಡಿ– ಅಭಯ
- ಆದಿವಾಸಿಗಳಿಗೆ ಪ್ರತ್ಯೇಕ ಅಭಿವೃದ್ಧಿ ನಿಗಮ ಸ್ಥಾಪನೆಗೆ ಕ್ರಮ ಕೈಗೊಳ್ಳುವುದಾಗಿಯೂ ಸಿಎಂ ಭರವಸೆ

ಹೆಚ್.ಡಿ.ಕೋಟೆ, ನ.12– ಕಾಡಿನಲ್ಲಿ ಹುಲಿ, ಚಿರತೆ, ಆನೆಗಳಿಗೆ ನಾವು ಹೆದರಲ್ಲ. ಆದರೆ, ಅರಣ್ಯ ಇಲಾಖೆ ಅಧಿಕಾರಿಗಳನ್ನು ಕಂಡರೆ ನಮಗೆ ಭಯ ಎಂದು ಆದಿವಾಸಿಗಳು ಮುಖ್ಯಮಂತ್ರಿಗಳ ಬಳಿ ತಮ್ಮ ಆತಂಕವನ್ನು ವ್ಯಕ್ತಪಡಿಸಿದರು.

ತಾಲೂಕಿನ ಕೆರೆ ಹಾಡಿಯಲ್ಲಿ ಜಿಲ್ಲಾಡಳಿತ, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ, ಜಿಪಂ ವತಿಯಿಂದ ಆಯೋಜಿಸಿದ್ದ ಆದಿವಾಸಿಗಳ ಭೇಟಿ, ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಆದಿವಾಸಿಗಳು, ಅರಣ್ಯಾಧಿಕಾರಿಗಳಿಂದ ನಮಗೆ ಸಾಕಷ್ಟು ತೊಂದರೆಯಾಗುತ್ತಿದೆ. ಅರಣ್ಯಕ್ಕೆ ಹೋಗಿ ಕಟ್ಟಿಗೆ ತರಲು ಬಿಡುವುದಿಲ್ಲ. ಅರಣ್ಯ ಪ್ರದೇಶದಲ್ಲಿ ವ್ಯವಸಾಯ ಮಾಡಲು ತೊಂದರೆ ನೀಡುತ್ತಾರೆ. ಅಲ್ಲದೇ ಮನೆ ಕಟ್ಟಲು ಅವಕಾಶ ನೀಡುವುದಿಲ್ಲ. ಕಾಡು ಪ್ರಾಣಿಗಳಿಂದ ಹಾನಿಗೊಳಗಾದರೆ ಸೂಕ್ತ ಪರಿಹಾರ ನೀಡಲು ಅರಣ್ಯಾಧಿಕಾರಿಗಳು ಸತಾಯಿಸ್ತಾರೆ. ಹಾಡಿಗೆ ಬೀದಿದೀಪ, ಕುಡಿಯುವ ನೀರು ಸೇರಿದಂತೆ ಅಗತ್ಯ ಮೂಲಸೌಕರ್ಯ ಕಲ್ಪಿಸುವಂತೆ ಮನವಿ ಸಲ್ಲಿಸಿದರೆ ನಮ್ಮ ಯಾವುದೇ ಮನವಿಗೆ ಸ್ಪಂದಿಸುವುದಿಲ್ಲ. ಅಲ್ಲದೇ ಕಾಡಂಚಿನ ಪ್ರದೇಶದಲ್ಲಿ ಅಂಗನವಾಡಿ ತೆರೆಯಲು ಅನುಮತಿ ನೀಡದ ಅಧಿಕಾರಿಗಳು ಬಾರ್ ಅಂಡ್ ರೆಸ್ಟೋರೆಂಟ್ ತೆರೆಯಲು ಮಾತ್ರ ಅನುಮತಿ ನೀಡುತ್ತಾರೆ. ಹಾಡಿ ನಿವಾಸಿಗಳಾದ ನಮ್ಮ ಮೇಲೆ ಇಲ್ಲಸಲ್ಲದ ಕಳ್ಳತನದ ಆರೋಪ ಹೊರಿಸುವ ಮೂಲಕ ಕಾಡಿನಿಂದ ನಮ್ಮನ್ನು ಹೊರಹಾಕಲು ಪ್ರಯತ್ನಿಸುತ್ತಿದ್ದಾರೆ ಎಂದು ಆರೋಪಿಸಿದ ಅವರು, ನಮಗೆ ಹುಲಿ, ಚಿರತೆ ಕಂಡರೆ ಭಯವಾಗುವುದಿಲ್ಲ. ಸದ್ಯ ಅರಣ್ಯಾಧಿಕಾರಿಗಳನ್ನು ಕಂಡರೆ ಭಯವಾಗುತ್ತದೆ ಎಂದು ಅಳಲು ತೋಡಿಕೊಂಡರು.

ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯನವರು, ನೀವು ಯಾವುದೇ ಕಾರಣಕ್ಕೂ ಅರಣ್ಯಾಧಿಕಾರಿಗಳಿಗೆ ಹೆದರುವ ಅವಶ್ಯಕತೆ ಇಲ್ಲ. ನಿಮಗೆ ಎಲ್ಲಾ ರೀತಿಯ ಮೂಲಸೌಕರ್ಯ ಕಲ್ಪಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಒಂದು ವೇಳೆ ಅಧಿಕಾರಿಗಳು ತೊಂದರೆ ನೀಡಿದರೆ ನೀವು ನೇರವಾಗಿ ● 6ನೇ ಪುಟಕ್ಕೆ



ಹೆಚ್.ಡಿ.ಕೋಟೆ ತಾಲೂಕಿನ ಕೆರೆ ಹಾಡಿ ಆದಿವಾಸಿಗಳ ಭೇಟಿ, ಸಂವಾದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆದಿವಾಸಿ ಮಕ್ಕಳ ಜೊತೆ ಹೆಜ್ಜೆ ಹಾಕಿದರು. ಈ ವೇಳೆ ಸಂಸದ ಸುನೀಲ್ ಬೋಸ್, ಶಾಸಕ ಅನಿಲ್, ಎಂಎಲ್‌ಸಿ ಡಿ.ತಿಮ್ಮಯ್ಯ, ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ಸೇರಿದಂತೆ ಇನ್ನಿತರರಿದ್ದರು.

ಉಪ ಸಮರದ ಕ್ಲೈಮ್ಯಾಕ್ಸ್

ಚನ್ನಪಟ್ಟಣ, ಶಿಗ್ಗಾಂವಿ, ಸಂಡೂರು ವಿಧಾನಸಭಾ ಕ್ಷೇತ್ರಗಳಲ್ಲಿ ಇಂದು ಮತದಾನ

ಬೆಂಗಳೂರು: ಚನ್ನಪಟ್ಟಣ, ಶಿಗ್ಗಾಂವಿ, ಸಂಡೂರು ವಿಧಾನಸಭಾ ಕ್ಷೇತ್ರಗಳಲ್ಲಿ ಬುಧವಾರ ಮತದಾನ ನಡೆಯಲಿದೆ. ಬೆಳಗ್ಗೆ 7 ರಿಂದ ಸಂಜೆ 6 ಗಂಟೆಯವರೆಗೆ ವೋಟಿಂಗ್ ನಡೆಯಲಿದ್ದು, ಅಭ್ಯರ್ಥಿಗಳ ಭವಿಷ್ಯ ಮತಪೆಟ್ಟಿಗೆ ಸೇರಲಿದೆ.

ಶಾಂತಿಯುತ ಮತದಾನಕ್ಕೆ ಮೂರೂ ಕ್ಷೇತ್ರಗಳಲ್ಲಿ ಜಿಲ್ಲಾಡಳಿತ ಸಕಲ ಸಿದ್ಧತೆ ಜೊತೆಗೆ ಸೂಕ್ತ ಬಂದೋಬಸ್ತ್ ಕೈಗೊಂಡಿದೆ. ಮತ ಪೆಟ್ಟಿಗೆಗಳು ಹಾಗೂ ಚುನಾವಣಾ ಸಾಮಗ್ರಿಯನ್ನು ವಿತರಿಸುವ ಪ್ರಮುಖ ಘಟ್ಟವಾಗಿರುವ ಮಸ್ಟರಿಂಗ್ ಕಾರ್ಯ ಮಂಗಳವಾರ ನಡೆಯಿತು. ಬಳಿಕ ಎಲ್ಲ ಚುನಾವಣಾ ಸಿಬ್ಬಂದಿ ಮತಗಟ್ಟೆಗಳತ್ತ ತೆರಳಿದ್ದಾರೆ.



ನಿಖಿಲ್ ಕುಮಾರಸ್ವಾಮಿ



ಯೋಗೇಶ್ವರ್

ಚನ್ನಪಟ್ಟಣ ವಿಧಾನಸಭಾ ಕ್ಷೇತ್ರ: ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿ ಪ್ರಮುಖವಾಗಿ ಕಾಂಗ್ರೆಸ್‌ನಿಂದ ಸಿ.ಪಿ.ಯೋಗೇಶ್ವರ ಮತ್ತು ಎನ್‌ಡಿಎ ಅಭ್ಯರ್ಥಿಯಾಗಿ ನಿಖಿಲ್ ಕುಮಾರಸ್ವಾಮಿ ಮಧ್ಯೆ ನೇರ ಪೈಪೋಟಿ ಏರ್ಪಟ್ಟಿದೆ. ಈ ಕ್ಷೇತ್ರ ವ್ಯಾಪ್ತಿಯಲ್ಲಿ 276 ಮತಗಟ್ಟೆಗಳಿದ್ದು, ಅದರಲ್ಲಿ 62 ನಗರ ವ್ಯಾಪ್ತಿ ಹಾಗೂ 214 ಗ್ರಾಮಾಂತರ ಪ್ರದೇಶದಲ್ಲಿ ಸ್ಥಾಪಿಸಲಾಗಿದೆ.

ಚನ್ನಪಟ್ಟಣ ಕ್ಷೇತ್ರದಲ್ಲಿ ಒಟ್ಟು 2,32,949 ಮತದಾರರಿದ್ದು, ಅವರಲ್ಲಿ 1,12,324 ಪುರುಷ ಹಾಗೂ 1,20,617 ಮಹಿಳಾ ಮತದಾರರಿದ್ದಾರೆ. 8 ಜನ ತೃತೀಯಲಿಂಗಿಗಳಿದ್ದಾರೆ. 85 ವರ್ಷಕ್ಕೂ ಮೇಲ್ಪಟ್ಟ ಒಟ್ಟು 1,613 ಮತದಾರರಲ್ಲಿ 612 ಪುರುಷರು ಹಾಗೂ 1,001 ಮಹಿಳೆಯರಿದ್ದಾರೆ. 3,011 ಜನ ದಿವ್ಯಾಂಗರಲ್ಲಿ 1,669 ಪುರುಷ ಹಾಗೂ 1,342 ಮಹಿಳಾ ಮತದಾರರಿದ್ದಾರೆ. ಇನ್ನು 8,338 ಯುವ ಮತದಾರರಿದ್ದಾರೆ. ಜೊತೆಗೆ 47 ಸೇವಾ ಮತದಾರರು ಮತಹಕ್ಕು ಹೊಂದಿದ್ದಾರೆ. ● 6ನೇ ಪುಟಕ್ಕೆ

ಮುಡಾದಲ್ಲಿ 50:50ರ ನಿವೇಶನ ಹಂಚಿಕೆ ಹಗರಣ
ನ್ಯಾ. ದೇಸಾಯಿ ಆಯೋಗ ಮುಡಾ ಭೇಟಿ

- ಹಗರಣಕ್ಕೆ ಸಂಬಂಧಿಸಿದಂತೆ ಖುದ್ದು ಅಧಿಕಾರಿಗಳಿಂದ ಮಾಹಿತಿ ಸಂಗ್ರಹ
- ಅಗತ್ಯವಿರುವಂತಹ ಹೆಚ್ಚುವರಿ ದಾಖಲೆಗಳ ದಿನವಿಡೀ ಜಾಲಾಟ

ಮೈಸೂರು, ನ.12 (ಆರ್‌ಕೆ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಲ್ಲಿ ಶೇ. 50:50ರ ಅನುಪಾತದಡಿ ನಡೆದಿರುವ ನಿವೇಶನ ಹಂಚಿಕೆ ಹಗರಣದ ತನಿಖೆಗೆ ರಾಜ್ಯ ಸರ್ಕಾರ ನೇಮಿಸಿರುವ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಪಿ.ಎನ್. ದೇಸಾಯಿ ಆಯೋಗವು ಇಂದು ನಾಲ್ಕು ತಿಂಗಳ ನಂತರ ಮುಡಾ ಕಚೇರಿಗೆ ಭೇಟಿ ನೀಡಿ, ಕಡತಗಳ ಪರಿಶೀಲನೆ ನಡೆಸಿತು.

ಭಾರಿ ಭ್ರಷ್ಟಾಚಾರದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಕಳೆದ ನಾಲ್ಕು ತಿಂಗಳ ಹಿಂದೆ ನ್ಯಾ.ದೇಸಾಯಿ ಅವರ ನೇತೃತ್ವದಲ್ಲಿ ರಚಿಸಿದ್ದ ಆಯೋಗವು ಬೆಂಗಳೂರಿನ ಕುಮಾರಕೃಪಾ ಅತಿಥಿಗೃಹದಲ್ಲಿ ಕಚೇರಿ ತೆರೆದು ತನಿಖೆ ಆರಂಭಿಸಿತ್ತು. ವಿಚಾರಣೆ ವೇಳೆ ಅವರ ನಿರ್ದೇಶನದಂತೆ ಮುಡಾ ಅಧಿಕಾರಿಗಳು, ಕಡತಗಳ ದಾಖಲಾತಿಗಳ ಜೆರಾಕ್ಸ್ ಪ್ರತಿಗಳನ್ನು ತನಿಖಾ ಆಯೋಗಕ್ಕೆ ಸಲ್ಲಿಸುತ್ತಿದ್ದರು. ನ್ಯಾ.ದೇಸಾಯಿ ಅವರು ತಮ್ಮ ಸಿಬ್ಬಂದಿಗಳೊಂದಿಗೆ ಇಂದು ಬೆಳಗ್ಗೆ 10 ಗಂಟೆಗೆ ಬೆಂಗಳೂರಿನಿಂದ ಮೈಸೂರಿಗೆ ಆಗಮಿಸಿ ನಜರ್‌ಬಾದ್‌ನ ಸರ್ಕಾರಿ ಅತಿಥಿಗೃಹದಲ್ಲಿ ಅಲ್ಪ ವಿಶ್ರಾಂತಿ, ಉಪಾಹಾರ ಸೇವನೆ ಬಳಿಕ ಬೆಳಗ್ಗೆ 10.50 ಗಂಟೆಗೆ ಜೆಎಲ್‌ಬಿ ರಸ್ತೆಯಲ್ಲಿರುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಕಚೇರಿಗೆ ಆಗಮಿಸಿದರು.

ವಿಷಯ ತಿಳಿದಿದ್ದ ಮುಡಾ ಆಯುಕ್ತ ಎ.ಎನ್. ರಘುನಂದನ್ ಅವರು ಪುಷ್ಪಗುಚ್ಛ ನೀಡಿ ಆಯೋಗದ ಮುಖ್ಯಸ್ಥರ ಬರಮಾಡಿಕೊಂಡು ತಮ್ಮ ಕಚೇರಿಗೆ ಕರೆದೊಯ್ದು ಕೆಲ ಸಮಯ ಸಮಾಲೋಚನೆ ನಡೆಸಿದರು. ದೇಸಾಯಿ ಅವರ ನಿರ್ದೇಶನದಂತೆ ಬೆಳಗ್ಗೆ 11.30 ಗಂಟೆಗೆ ಮುಡಾ ಸಭಾಂಗಣದಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದು, 2020ರಿಂದೀಚೆಗೆ ಭೂ ಸ್ವಾಧೀನ ಪ್ರಕ್ರಿಯೆಗಳನ್ನು ಪೂರ್ಣಗೊಳಿಸದೆ, ಭೂ ಮಾಲೀಕರಿಗೆ ● 6ನೇ ಪುಟಕ್ಕೆ



ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಪಿ.ಎನ್.ದೇಸಾಯಿ ಅವರು ಮಂಗಳವಾರ ಮುಡಾ ಕಚೇರಿಗೆ ಭೇಟಿ ನೀಡಿದರು.

ನಕ್ಕರೆ ಅದೇ ಸ್ವರ್ಗ

ಹೆಂಡತಿ : ಏನ್ರೀ ಕಲ್ಲು ಇದ್ದ ಹಾಗೇ ಇದ್ದೀರಾ?
ಗಂಡ : ಹೂಕಣೇ, ಅಕ್ಕೀಲಿ ಕಲ್ಲನ್ನು
ಸೋಸಿ ಹಾಕಂದ್ರೆ ಹಾಗೇ ಬೇಯ್ಸಿ
ಹಾಕ್ತೀಯಲ್ಲ ಅದನ್ನು ತಿಂದು ಕಲ್ಲಿದ್ದಂಗೆ ಇದ್ದೀನಿ.

ಮೈಸೂರು ಮಿತ್ರ

ಬುಧವಾರ, 13 ನವೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ನೀರಿನ ಸಾಗರ ದಾಟಲು ತೆಪ್ಪ ಇರಬೇಕು. ಸಂಸಾರದ ಸಾಗರ ದಾಟಲು ತೆಪ್ಪಗೆ ಇರಬೇಕು. – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹುಣಸೆ ಹುಳಿಯೆಂದು ಅಂಬಡೆ ತಿಂದ ಹಾಗೆ.

ನಿಮ್ಮ ಪತ್ರಗಳು

ರಷ್ಯಾ ಅಧ್ಯಕ್ಷ ಪುಟಿನ್ ಹೇಳಿಕೆ ಸ್ವಾಗತಾರ್ಹ

ಮಾನ್ಯರೆ,

ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಭಾರತ 'ಸೂಪರ್ ಪವರ್' (ಉನ್ನತ ರಾಷ್ಟ್ರ) ಎಂಬ ಮಾನ್ಯತೆ ಅಥವಾ ಪಟ್ಟವನ್ನು ಪಡೆಯಲು ಎಲ್ಲಾ ರೀತಿಯಿಂದಲೂ ಅರ್ಹವಾಗಿದೆ ಎಂದು ಇತ್ತೀಚೆಗೆ ಹೇಳಿರುವುದು ಸ್ವಾಗತಾರ್ಹವಾಗಿದೆ. ಇಡೀ ವಿಶ್ವದಲ್ಲೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ನಮ್ಮ ದೇಶದ ಆರ್ಥಿಕತೆ ಇತರ ದೇಶಗಳಿಗೂ ಮಾದರಿಯಾಗಿದೆ. ಡಿಜಿಟಲ್ ಕ್ಷೇತ್ರದಲ್ಲಿನ ಸಾಧನೆ ಕೂಡ ಅಷ್ಟೇ ಗಮನಾರ್ಹವಾಗಿದೆ. ಪ್ರಸ್ತುತ ವಿಶ್ವದ ಐದನೇ ಬಲಾಢ್ಯ ಆರ್ಥಿಕ ಶಕ್ತಿಯಾಗಿರುವ ಭಾರತ ಕೆಲವೇ ವರ್ಷಗಳಲ್ಲಿ ಪ್ರಪಂಚದ ಮೂರನೇ ಬಲಾಢ್ಯ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಲಿರುವುದಾಗಿ ವಿಶ್ವದ ಆರ್ಥಿಕ ತಜ್ಞರು ಈಗಾಗಲೇ ವಿಶ್ಲೇಷಿಸಿದ್ದಾರೆ. ಅಮೇರಿಕಾ, ರಷ್ಯಾ, ಚೈನಾ ಮುಂತಾದ ಬಲಾಢ್ಯ ದೇಶಗಳ ಜೊತೆ ಭಾರತದ ರಾಜತಾಂತ್ರಿಕ ಸಂಬಂಧಗಳು ಸಮಾಧಾನಕರವಾಗಿವೆ.

ಇಡೀ ವಿಶ್ವದಲ್ಲೇ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ದೇಶ ಕೂಡ ನಮ್ಮದಾಗಿದೆ. ಭಾರತದ ಪ್ರಜಾತಂತ್ರ ವ್ಯವಸ್ಥೆ ಹಲವಾರು ಸವಾಲುಗಳ ನಡುವೆಯೂ ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿದೆ. ಕೊರೊನಾ ಸೋಂಕು ಇಡೀ ವಿಶ್ವವನ್ನೇ ಆವರಿಸಿದಾಗ ಭಾರತ ಕ್ಷಿಪ್ರಗತಿಯಲ್ಲಿ ತನ್ನದೇ ಆದ ಲಸಿಕೆಗಳನ್ನು ತಯಾರಿಸಿ, ಕೋಟ್ಯಾಂತರ ಜನರ ಜೀವವನ್ನು ಉಳಿಸುವಲ್ಲಿ ಯಶಸ್ವಿಯಾಗಿತ್ತಲ್ಲದೇ ನಮ್ಮ ದೇಶದ ಲಸಿಕೆಗಳನ್ನು ಬೇರೆ ದೇಶಗಳಿಗೂ ಸರಬರಾಜು ಮಾಡಿತ್ತು. ಅಲಿಪ್ತ ರಾಷ್ಟ್ರಗಳ ಒಕ್ಕೂಟದಲ್ಲಿ ಮುಂಚೂಣಿಯಲ್ಲಿರುವ ಭಾರತ, ವಿಜ್ಞಾನ ಮತ್ತು ತಂತ್ರಜ್ಞಾನ, ಕೃಷಿ, ರಕ್ಷಣಾ ಮುಂತಾದ ಕ್ಷೇತ್ರಗಳಲ್ಲಿ ಗಮನಾರ್ಹ ಸಾಧನೆ ಮಾಡಿದೆ.

ಅಂತರರಾಷ್ಟ್ರೀಯ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಸಹ ಭಾರತ ದಶಕಗಳ ಕಾಲದಿಂದ ಶ್ರಮಿಸುತ್ತಿದೆ. ಭಾರತದ ಶಾಂತಿ ಪಾಲನಾ ಪಡೆಗಳು ಶ್ರೀಲಂಕಾ ಸೇರಿದಂತೆ ಬೇರೆ ಬೇರೆ ದೇಶಗಳಿಗೆ ತೆರಳಿ ತಮ್ಮ ಸೇವೆ ಸಲ್ಲಿಸುತ್ತಿವೆ. ಇಡೀ ವಿಶ್ವಭೂಪಟದಲ್ಲಿ ಭಾರತದ ಸ್ಥಾನ ಮಾನ ಪ್ರಜ್ವಲಿಸುತ್ತಿದೆ. ಈ ಹಿನ್ನೆಲೆಯಲ್ಲಿ ಭಾರತಕ್ಕೆ ಸೂಪರ್ ಪವರ್ ಎಂಬ ಸ್ಥಾನಮಾನ ನೀಡಲು ಕಾಲ ಪಕ್ವವಾಗಿದೆ. ಅಷ್ಟೇ ಅಲ್ಲದೇ ವಿಶ್ವಸಂಸ್ಥೆಯ ಭದ್ರತಾ ಸಮಿತಿಯಲ್ಲಿ ಭಾರತಕ್ಕೆ ಶಾಶ್ವತ ಸದಸ್ಯ ಸ್ಥಾನಮಾನ (permanent member status) ನೀಡಲು ಬಲಾಢ್ಯ ರಾಷ್ಟ್ರಗಳು ಈಗಲಾದರೂ ಸಹಕರಿಸಬೇಕಾಗಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.

ಜಗನ್ಮೋಹನ ಅರಮನೆಯಲ್ಲಿ ಎಕೋ ಹಾವಳಿ!!

ಮಾನ್ಯರೇ,



ಮೈಸೂರಿನ ಹೃದಯ ಭಾಗದಲ್ಲಿರುವ ಹಾಗೂ ರಾಜವಂಶಕ್ಕೆ ಸೇರಿರುವ ಹೆಸರಾಂತ ಜಗನ್ಮೋಹನ ಅರಮನೆಯಲ್ಲಿ ಇತ್ತೀಚೆಗೆ ಎಕೋ (ಪ್ರತಿಧ್ವನಿ) ಜಾಸ್ತಿಯಾಗಿದೆ. ಮೊನ್ನೆ ನಿನಾದ್ ಮ್ಯೂಸಿಕಲ್ ಟ್ರಸ್ಟ್ ಹಾಗೂ ಪ್ರಸನ್ನ ಫಿಲಂ ಹಿಟ್ಸ್ ಗ್ರೂಪ್‌ನವರು ಆಯೋಜಿಸಿದ್ದ ಅಂಬಿ–ವಿಷ್ಣು ಉತ್ಸವದಲ್ಲಿ ಅನೇಕ ಗೊಂದಲಗಳು ಕಂಡುಬಂದವು. ಮೊದಲನೆಯದಾದ ಕಾರ್ಯಕ್ರಮ ತಾಂತ್ರಿಕ ದೋಷದಿಂದ ಸರಿಯಾದ ಸಮಯಕ್ಕೆ ಶುರು ಆಗದೇ ಒಂದು ಗಂಟೆ ವಿಳಂಬವಾಯಿತು. ಅದಾದ ನಂತರ ಪ್ರಾರಂಭವಾದ ಕಾರ್ಯಕ್ರಮ ಯಾರು ಯಾವ ಭಾಷೆಯಲ್ಲಿ ಹಾಡುತ್ತಿದ್ದಾರೆ ಎಂಬ ಗೊಂದಲ ಪ್ರೇಕ್ಷಕರಿಗೆ ಉಂಟಾಯಿತು. ಲೈವ್ ಕಾರ್ಯಕ್ರಮವಾದ್ದರಿಂದ ಸಂಗೀತ ವಾದ್ಯಕ್ಕೂ, ಗಾಯಕರಿಗೂ ಹೊಂದಾಣಿಕೆಯೇ ಇರಲಿಲ್ಲ. ಪ್ರೇಕ್ಷಕರು ಗೊಂಬೆಗಳಂತೆ ಕುಳಿತು ಕಾರ್ಯಕ್ರಮ ವೀಕ್ಷಿಸಬೇಕಾಯಿತು. ಆಯೋಜಕರು ಮೊದಲೇ ಇದನ್ನೆಲ್ಲಾ ನೋಡಿಕೊಂಡು ಪೂರ್ವ ತಯಾರಿ ನಡೆಸಿರಬೇಕು. ಒಂದು ಉತ್ತಮ ಕಾರ್ಯಕ್ರಮ ಎಂದು ತಿಳಿದು ಪ್ರೇಕ್ಷಕರು ಬಿಡುವು ಮಾಡಿಕೊಂಡು ಇಂತಹ ಕಾರ್ಯಕ್ರಮಗಳಿಗೆ ಬರುತ್ತಾರೆ. ಆದರೆ ಈ ರೀತಿ ಆಗಿ ಬಿಟ್ಟರೆ ಸಾಕಷ್ಟು ಬೇಸರ ಉಂಟಾಗುವುದು ಸಹಜ. ಇದೆಲ್ಲದರ ನಡುವೆ ಇಲ್ಲಿನ ಶೌಚಾಲಯ ಯಾವಾಗಲೂ ಬೀಗ ಹಾಕಿರುತ್ತದೆ. ಪುರುಷರು ಹೊರಗಡೆ ಕತ್ತಲಿನಲ್ಲಿ ಮೂತ್ರ ವಿಸರ್ಜನೆಗೆ ಹೋಗಬೇಕು. ವಯಸ್ಸಾದವರು ಏನಾದರೂ ಬಿದ್ದರೆ ಏನು ಗತಿ? ಒಟ್ಟಿನಲ್ಲಿ ಇಲ್ಲಿನ ವ್ಯವಸ್ಥೆ ಸದ್ಯದ ಪರಿಸ್ಥಿತಿಯಲ್ಲಿ ಏನೂ ಸರಿ ಇಲ್ಲದಂತಾಗಿದೆ. ರಾಜವಂಶಕ್ಕೆ ಸೇರಿರುವ ಈ ಪುರಾತನ ಸಭಾಂಗಣವನ್ನು ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಒಮ್ಮೆ ಇಲ್ಲಿಗೆ ಭೇಟಿ ನೀಡಿ, ಮುತುವರ್ಜಿ ವಹಿಸಿ ಏನೇನು ಮಾರ್ಪಾಟುಗಳನ್ನು ಮಾಡಬೇಕೋ ಅದನ್ನು ಮಾಡಿಕೊಟ್ಟರೆ ಮುಂದಿನ ದಿನಗಳಲ್ಲಿ ಈ ಸಭಾಂಗಣ ಉತ್ತಮ ವೇದಿಕೆಯಲ್ಲಿ ಹೊರಹೊಮ್ಮುತ್ತದೆ.

– ನಾಗೇಶ್, ಹಿರಿಯ ನಾಗರಿಕ, ಮೈಸೂರು

ಕಳ್ಳರು ಕಂದಾಯ ಕಟ್ಟುವ ಕಾಲ ಬರಬಹುದು

ಮಾನ್ಯರೆ,

ಎಲ್ಲರೂ ಕಳ್ಳ ಕಾಕರೆ ತುಂಬಿರುವ ಈ ಮಂತ್ರಿ ಮಂಡಲದ ಕಾಂಗ್ರೆಸ್ ಸರ್ಕಾರದಲ್ಲಿ ಕಳ್ಳತನ, ಕೊಲೆ, ಸುಲಿಗೆ, ದರೋಡೆಗಳು ಮಿತಿ ಇಲ್ಲದೆ ನಡೆಯುತ್ತಿವೆ.

ಸರ್ಕಾರವನ್ನೇ ಸ್ಥಗಿತಗೊಳಿಸಿ ಎಲ್ಲಾ ಸಚಿವರು ಚುನಾವಣೆಯಲ್ಲಿ ನಿರತರಾಗಿರುವ ಈ ಸಂದರ್ಭದಲ್ಲಿ ಎಲ್ಲಿಯೂ ಕಾಣಿಸಿಕೊಳ್ಳದೆ ತಮ್ಮ ಗೃಹದಲ್ಲಿಯೇ ವಿಶ್ರಾಂತಿಯಲ್ಲಿರುವ ಗೃಹ ಸಚಿವರ ನಿರ್ಲಕ್ಷ್ಯ ಎಷ್ಟು ಮಿತಿ ಮೀರಿದೆ ಎಂದರೆ ಬೆಂಗಳೂರಿನ ಲಗ್ಗೆರೆಯ ಲಕ್ಷ್ಮಿ ನರಸಿಂಹಸ್ವಾಮಿ ಲೇಔಟ್‌ನಲ್ಲಿ ಎರಡೇ ದಿನಗಳಲ್ಲಿ ಹಾಡುಹಗಲೇ 10 ಮನೆ ಕಳ್ಳತನಗಳು ಆಗಿರುವ ಬಗ್ಗೆ ಮಾಧ್ಯಮದಲ್ಲಿ ವರದಿಯಾಗಿದೆ.

ಈ ಮಟ್ಟಿಗೆ ನಿರ್ಲಕ್ಷ್ಯತನ ತೋರುತ್ತಿರುವ ಈ ಕಾಂಗ್ರೆಸ್ ಸರ್ಕಾರದಲ್ಲಿ ಸಾಮಾನ್ಯ ಜನರಿಗೆ ಜೀವಕ್ಕೂ, ಅವರ ಆಸ್ತಿಗಳಿಗೂ ಭದ್ರತೆ ಇಲ್ಲದಂತಾಗಿದೆ.

ಬಹುಶಃ ಭ್ರಷ್ಟಾಚಾರದಿಂದ ಖಜಾನೆಯ ಹಣವನ್ನೆಲ್ಲ ಲೂಟಿ ಮಾಡಿದ ಈ ಸರ್ಕಾರಕ್ಕೆ ಮುಂದಿನ ಗ್ಯಾರಂಟಿ ಯೋಜನೆಗಳನ್ನು ಮುಂದುವರಿಸಲು ಸಾಧ್ಯವಾಗದೆ ಮುಂದಿನ ಬಜೆಟ್ ಮಂಡನೆಯಲ್ಲಿ ಕಳ್ಳತನಕ್ಕೂ ಕಂದಾಯವನ್ನು ನಿಗದಿಪಡಿಸಬೇಕೆಂದು ಮುಖ್ಯಮಂತ್ರಿಗಳು ತೀರ್ಮಾನಿಸಿಕೊಂಡಿರಬಹುದು.

ಕೇಂದ್ರ ಸರ್ಕಾರವು ಯುವಕರಿಗೆ ಅಪ್ರೆಂಟಿಷಿಪ್ ಜಾಬ್ ಎಂಬ ಯೋಜನೆಯ ಮೂಲಕ ಆನ್‌ಲೈನ್ ಪೋರ್ಟಲ್ ತೆರೆದು ನಿರುದ್ಯೋಗಿ ಯುವಕರಿಗೆ ಕೆಲಸಕ್ಕೆ ಜೋಡಿಸುತ್ತಿರುವ ಇದೇ ಸಂದರ್ಭದಲ್ಲಿ ಇತ್ತ ರಾಜ್ಯದಲ್ಲಿ ಹಾಡುಹಗಲೇ ಯುವಕರಿಂದಲೇ ಕಳ್ಳತನ ಹೆಚ್ಚಾಗುತ್ತಿರುವುದು ನಮ್ಮ ರಾಜ್ಯದ ದುರದೃಷ್ಟಕರ ಸಂಗತಿ. ಮುಖ್ಯಮಂತ್ರಿ, ಮಂತ್ರಿಗಳಿಂದಿಡಿದು ಸಾಮಾನ್ಯ ಜನರೂ ಇಲ್ಲಿ ಕಳ್ಳತನ ಮಾಡುತ್ತಿರುವುದರಿಂದ ಮಾಜಿ ವಕೀಲರಾದ ಹಾಲಿ ಮುಖ್ಯಮಂತ್ರಿಗಳು ಕರ್ನಾಟಕದಲ್ಲಿ ಕಳ್ಳತನವನ್ನು ಕಾನೂನಾತ್ಮಕವಾಗಿ ಪರವಾನಗಿ ಕೊಡುವುದಾಗಿ ಘೋಷಿಸಿದರೂ ಆಶ್ಚರ್ಯವಿಲ್ಲ.


–ಪರಮಾನಂದ.ಎಂ.ಎಸ್, ರಾಜ್ಯ ಕಾರ್ಯದರ್ಶಿ, ಎಸ್ ಸಿ ಮೋರ್ಚಾ, ಬಿಜೆಪಿ



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ಕನ್ನಡದ ಆದಿಕವಿ ಪಂಪ



ಕನ್ನಡ ಸಾಹಿತ್ಯದ ಆದಿಯುಗ ಆರಂಭವಾಗುವುದು ಜೈನ ಕವಿಗಳಿಂದ. ಕ್ರಿ.ಶ. ಹತ್ತನೆಯ ಶತಮಾನದಲ್ಲಿದ್ದ ನಮ್ಮ ಆದಿಕವಿ ಪಂಪ. ಐತಿಹಾಸಿಕ ಕಾಲಮಾನದಿಂದ ಮಾತ್ರವಲ್ಲ, ಕವಿತೆಯ ಗುಣದಿಂದಲೂ ಅವನು ಮೊದಲನೆಯ ಸ್ಥಾನವನ್ನು ಪಡೆದಿದ್ದಾನೆ. ಕವಿತಾಗುಣಾರ್ಣವ ಎಂಬ ಅವನ ಪ್ರಶಸ್ತಿ ಕೇವಲ ಹೊಗಳಿಕೆಯ ಮಾತಲ್ಲ, ವಾಸ್ತವದಲ್ಲೂ ಅವನು ಕವಿತೆಯ ಗುಣಗಳ ಸಮುದ್ರವೇ ಆಗಿದ್ದಾನೆ. ಪ್ರಪಂಚದ ಯಾವುದೇ ಭಾಷೆಯ ಶ್ರೇಷ್ಠ ಕೃತಿಗಳ ಜೊತೆಗೆ ಸಮಾನಸ್ಕಂದವಾಗಿ ನಿಲ್ಲಬಲ್ಲವು. ಪಂಪನ ಎರಡು ಕೃತಿಗಳಾದ **ಆದಿ ಪುರಾಣ** ಮತ್ತು **ವಿಕ್ರಮಾರ್ಜುನ ವಿಜಯ**. ಎರಡೂ ಚಂಪೂಕೃತಿಗಳು. ಮೊದಲನೆಯದು ಜೈನ ಧರ್ಮದ ಪ್ರಥಮ ತೀರ್ಥಂಕರರ ಕಥೆಯನ್ನು ಹೇಳುತ್ತದೆ. ಎರಡನೆಯದು ಮಹಾಭಾರತದ ಕಥೆಯನ್ನು ಅರ್ಜುನನಿಗೆ ಪ್ರಾಶಸ್ತ್ಯವನ್ನು ಕೊಟ್ಟು ವರ್ಣಿಸುತ್ತದೆ.

ಪಂಪನ ಎರಡು ಕೃತಿಗಳನ್ನು ನೋಡಿದಾಗ ತಟ್ಟನೆ ಹೊಳೆಯುವುದು ಅವನ ಭಾಷಾ ಪಾಂಡಿತ್ಯ. ಅವನಿಗೆ ಕನ್ನಡದಲ್ಲೂ, ಸಂಸ್ಕೃತದಲ್ಲೂ ಸಮಾನವಾದ ಪ್ರಭುತ್ವವಿದ್ದುದು ಸ್ಪಷ್ಟ. ಜೊತೆಗೆ ಜೈನರಿಗೆ ಪವಿತ್ರ ಭಾಷೆಯಾದ ಪ್ರಾಕೃತದಲ್ಲಿ ಅವನ ಜ್ಞಾನ ಆಳವಾಗಿತ್ತು. ಪ್ರಾಯಶಃ ತೆಲುಗನ್ನೂ ಅವನು ಚೆನ್ನಾಗಿ ತಿಳಿದಿರಬೇಕು. ಈ ಯಾವ ಭಾಷೆಯಲ್ಲಾದರೂ ಕವಿತಾರಚನೆಯನ್ನು ಮಾಡಬಹುದಾಗಿದ್ದ ಪಂಪನು ಕನ್ನಡದಲ್ಲಿ ಎರಡು ಮಹಾಕೃತಿಗಳನ್ನು ರಚಿಸಿದ್ದು ಕನ್ನಡಿಗರ ಸುಕೃತ. ಇಂತಹ ಮಹಾಕವಿಯ ಪ್ರತಿಭೆ ಅತಿಶಯವಾಗಿ ಬೆಳೆಯಲು ಆಶ್ರಯದಾತನೂ ಬೇಕು. ಅರಿಕೇಸರಿ ಎಂಬ ರಾಜನು ಆಶ್ರಯದಾತನಾಗಿ ಪಂಪನನ್ನು ಬೆಳೆಸಿ ಘೋಷಿಸಿದುದುದರಿಂದ ಇಬ್ಬರು ಅಮರರಾದರು.

ಪಂಪನು ಲೇಖನಿಯಲ್ಲಿ ಮಾತ್ರ ಹೆಗ್ಗಳಿಕೆಯನ್ನು ಪಡೆದವನಲ್ಲ, ಖಡ್ಗವನ್ನು ಹಿಡಿದು ಶತ್ರುಗಳನ್ನು ಮರ್ದಿಸುವುದರಲ್ಲೂ ಅಗ್ರಣಿಯಾಗಿದ್ದನು. ವಿಕ್ರಮಾರ್ಜುನ ವಿಜಯದಲ್ಲಿ ಇದನ್ನು ಪಂಪನೇ ಸೂಚಿಸಿದ್ದಾನೆ–

ಪಂಪಂ ಧಾತ್ರೀವಲಯ ನಿ
ಲಿಂಪಂ ಚತುರಂಗಬಳಭಯಂಕರಣಂ ನಿ
ಷ್ಕಂಪಂ ಲಲಿತಾಲಂಕಾರ
ಣಂ ಪಂಚಶರೈಕರೂಪ ನಪಗತ ಪಾಪಂ॥

ಯುದ್ಧದಲ್ಲಿ ಪರಾಕ್ರಮವನ್ನು ತೋರಿಸಿದ ಈ ಕವಿಯೋಧನಿಗೆ ಅರಿಕೇಸರಿಯ ಆಸ್ಥಾನದಲ್ಲಿ ಉನ್ನತ ಸ್ಥಾನ ದೊರಕಿದುದರಲ್ಲಿ ಆಶ್ಚರ್ಯವಿಲ್ಲ. ಪಂಪನಿಗೆ ಆ ಅರಿಕೇಸರಿಯಲ್ಲಿ ಹೆಚ್ಚಿನ ಆದರ. ಅವನನ್ನೂ ಅರ್ಜುನನ್ನೂ ಸಮೀಕರಿಸಿ ಅವನು ಬಣ್ಣಿಸಿದ್ದಾನೆ–

ವಿಪುಲಯಶೋವಿತಾನಗುಣಮಿಲ್ಲದನಂ
ಪ್ರಭುಮಾಡಿ ಪೂರ್ವಭೂ
ಮಿಪರ ಪದಂಗಳಂ ಪುಗಿಸಿ ಪೊಲಿಪರೀತನುದಾತ್ತಪೂರ್ವಭೂ
ಮಿಪರುಮನೊಳ್ಪಿನೊಳ್ ತಗುಳೆ ವಂದೊಡೆಯೀ
ಕಥೆಯಾಳ್ ತಗುಳ್ಚಿ ಪೋ
ಲಿಪೊಡೆನಗಳ್ತಿಯಾದುದು
ಗುಣಾರ್ಣವಭೂಭುಜನಂ ಕಿರೀಟಿಯೊಳ್॥

ಗುಣಾರ್ಣವಭೂಭುಜ ಎಂದರೆ ಅರಿಕೇಸರಿ, ಕಿರೀಟಿ ಎಂದರೆ ಅರ್ಜುನ. ಹೀಗೆ ಆಶ್ರಯದಾತನನ್ನು ಕಥಾನಾಯಕನೊಡನೆ ಸಮೀಕರಿಸುವುದು ಕನ್ನಡ ಕವಿಗಳ ವೈಶಿಷ್ಟ್ಯ. ಪಂಪನಲ್ಲಿದ್ದ ಕೃತಜ್ಞತೆಗೆ ಇದು ಶ್ರೇಷ್ಠ ಸಾಕ್ಷಿ. ಅರಿಕೇಸರಿ ಪಂಪನಿಗೆ ಧರ್ಮಾಪುರವೆಂಬ ಅಗ್ರಹಾರವನ್ನು ದಾನ ಮಾಡಿ ಶಾಸನವನ್ನು ಬರೆಸಿದ್ದನು.

ಪಂಪನ ಪೂರ್ವಜರು ವೇದವೇದಾಂಗ ಪಾರಂಗತರಾಗಿದ್ದ ಬ್ರಾಹ್ಮಣರು. ಪಂಪನ ತಂದೆ ಭೀಮಪಯ್ಯ, ಪಿತಾಮಹ (ತಾತ) ಕುಮಾರಯ್ಯ. ಪಂಪನ ತಾಯಿ ಅಬ್ಬಣಬ್ಬೆ–ಧರ್ಮಗಳಲ್ಲಿ ಅಹಿಂಸೆಯನ್ನು ಎತ್ತಿಹಿಡಿದ ಜೈನ ಧರ್ಮವೇ ಶ್ರೇಷ್ಠವೆಂದು ಭೀಮಪಯ್ಯನು ಜೈನಧರ್ಮವನ್ನು ಅವಲಂಬಿಸಿದನು. ಪಂಪನ ತಮ್ಮ ಜನವಲ್ಲಭ.

ಪಂಪನ ವ್ಯಕ್ತಿತ್ವ:

ಸಾಮಾನ್ಯವಾಗಿ ಕವಿಗಳ ವ್ಯಕ್ತಿತ್ವದ ಪರಿಚಯ ನಮಗೆ ಸಿಕ್ಕುವುದಿಲ್ಲ. ವಾಲ್ಮೀಕಿ, ಕಾಳಿದಾಸ, ಕುಮಾರವ್ಯಾಸ, ಲಕ್ಷ್ಮೀಶ ಹೇಗಿದ್ದರೋ ನಮಗೆ ತಿಳಿಯದು. ಆದರೆ ಪಂಪನ ಬಗೆಗೆ ಆತನ ರೂಪವನ್ನು ವರ್ಣಿಸುವ ಪದ್ಯಗಳು ಅವನ ಕೃತಿಗಳಲ್ಲೇ ಉಪಲಭ್ಯವಾಗಿರುವುದು ವಿಶೇಷ.

ಆದಿಪುರಾಣದಲ್ಲಿ –

ಕದಳೀಗರ್ಭಶ್ಯಾಮಂ
ಮೃದುಕುಟಿಲ ಶಿರೋರುಹಂ ಸರೋರುಹವದನಂ
ಮೃದುಮಧ್ಯಮತನು ಹಿತಮಿತ
ಮೃದವಚನಂ ಲಲಿತ ಮಧುರ ಸುಂದರ ವೇಷಂ ॥

ಮುಂತಾದ ಪದ್ಯಗಳು ಪಂಪನ ಸ್ವರೂಪವನ್ನು ತಿಳಿಸುತ್ತದೆ. ಸ್ತ್ರೀಸುಖದಲ್ಲಿ ಅವನು ಅನಾಸಕ್ತನಾಗಿರಲಿಲ್ಲ.

ವನಿತಾಕಟಾಕ್ಷಕುವಲಯ
ವನಚಂದ್ರಂ ಯುವತಿ ಜಘನಕಾಂಚೀರತ್ನಂ
ಸ್ತನಭರವಿನಮ್ರಗಣಿಕಾ
ಸ್ತನತಟಹಾರಂ ಸರಸ್ವತೀಮಣಿಹಾರಂ ॥

ಇತ್ಯಾದಿ ಪದ್ಯಗಳು ಅವನು ಲೋಕ ಸುಖ ವಿಮುಖನಲ್ಲ ಎಂದು ಸೂಚಿಸುತ್ತದೆ. ಅವನು ಜೀವನದಲ್ಲಿರಿಸಿಕೊಂಡಿದ್ದ ನೀತಿ ಸಿದ್ಧಾಂತವನ್ನು ಕಾವ್ಯದಲ್ಲಿ ಬರುವ ಹಲವು ಪದ್ಯಗಳು ತಿಳಿಸುತ್ತವೆ. ಉದಾಹರಣೆಗೆ –

ಪುಸಿಯುದುದು ಪರಾಂಗನೆಗಾ
ಟಿಸದುಡು ಕೊಲ್ಲದುದು ಮೋಹಮಿಲ್ಲದುದರಿವಂ
ಮೊಸಯಿಸುವುದು ವೈರಾಗ್ಯದ
ದೆಸೆಗೆಸುಪುದು ಧರ್ಮಮ್ ಅದರ ತಡೆವುದ ಧರ್ಮಂ॥

"ಹುಸಿಯನ್ನು ಎಂದರೆ ಸುಳ್ಳನ್ನು ಹೇಳದಿರುವುದು ಧರ್ಮ. ಪರಾಂಗನೆಗೆ ಎಂದರೆ ಇನ್ನೊಬ್ಬರ ಹೆಂಡತಿಗೆ ಆಸೆ ಪಡದಿರುವುದು ಧರ್ಮ. ಯಾವ ಜೀವವನ್ನೂ ಕೊಲ್ಲದೆ ಅಹಿಂಸೆಯನ್ನಾಚರಿಸುವುದು ಧರ್ಮ. ಮೋಹಕ್ಕೆ ಒಳಗಾಗದಿರುವುದು ಧರ್ಮ. ಜ್ಞಾನವನ್ನು ಪಡೆದುಕೊಳ್ಳುವುದು ಧರ್ಮ. ವೈರಾಗ್ಯದ ದಿಕ್ಕಿನ ಕಡೆಗೆ ತೆರಳುವುದು ಧರ್ಮ. ಇವುಗಳಿಗೆ ವಿರುದ್ಧವಾಗಿ ನಡೆಯುವುದು, ಕಡೆಗೆ ತೆರಳುವುದು ಧರ್ಮ. ಇವುಗಳಿಗೆ ವಿರುದ್ಧವಾಗಿ ನಡೆಯುವುದು, ಇವುಗಳನ್ನು ತಡೆಯುವುದು ಅಧರ್ಮ." ಪಂಪನದಿವ್ಯ ವ್ಯಕ್ತಿತ್ವವನ್ನು ಅರಿಯಲು ಬೇರೇನು ಬೇಕು? ಧರ್ಮದ ಹಿರಿಮೆಯನ್ನು ತಿಳಿಸುವುದಕ್ಕಾಗಿ ಪಂಪನು ಮೊದಲನೆಯ ತೀರ್ಥಂಕರನಾದ ಆದಿನಾಥನ ಕಥೆಯನ್ನು ಹೇಳುವ ಆದಿಪುರಾಣವನ್ನು ರಚಿಸಿದನು.

ಪಂಪನು ನಾನಾಶಾಸ್ತ್ರ ಪ್ರವೀಣನಾಗಿದ್ದನೆಂಬುದು ಅವನ ಕಾವ್ಯಗಳನ್ನೋದುವ ವಿದ್ವಾಂಸರಿಗೆ ಸ್ಪಷ್ಟವಾಗುತ್ತದೆ. ಆದಿಪುರಾಣದ ಒಂಬತ್ತನೆಯ ಆಶ್ವಾಸದಲ್ಲಿ ಬರುವ ನೀಲಾಂಜನೆಯ ನೃತ್ಯದ ವರ್ಣನೆ ಪಂಪನ ನಾಟ್ಯಶಾಸ್ತ್ರ ಪಾರಂಗತತ್ವಕ್ಕೆ ಸಾಕ್ಷಿಯಾಗಿದೆ.

ಭಾರತಿ ಸಾತ್ವತಿಕೃಶಿಕಿ
ಯಾರಭಟಿಯುಮೆಂಬ ವೃತ್ತಿಯೊಳ್ ರಸಮಂ ಸಂ
ಚಾರಿಸುವ ಭಾವಮಂ ವಿ
ಸ್ತಾರಿಸುವ ಬೆಡಂಗು ಬೇರೆ ನೀಲಾಂಜನೆಯಾ ॥

ಮುಂತಾದ ಪದ್ಯಗಳನ್ನು ಶಾಸ್ತ್ರದ ಜ್ಞಾನವಿಲ್ಲದವರು ರಚಿಸಲು ಸಾಧ್ಯವೇ?

ಭರತಾಗಮದೊಳ್ ಮೂವ
ತ್ತೆರಡನೆ ನೆಗಳ್ದಂಗಹಾರಮುಂ ನೂರೆಂಟುಂ
ಕರಣಮುಮನ್ ಅವಳ ಡವಕೆಯ
ಪರಿಚಾರಿಕೆಯರಿಗುಮ್ ಆಕೆಗವು ತೊಡರ್ವೆಡೆಯೇ॥

ಎಂಬಲ್ಲಿ ಭರತನಾಟ್ಯ ಶಾಸ್ತ್ರದಲ್ಲಿ ಹೇಳಿರುವ ಮೂವತ್ತೆರಡು ಅಂಗಹಾರಗಳೂ ನೂರೆಂಟು ಕರಣಗಳೂ ನೀಲಾಂಜನೆಯ ಪರಿಚಾರಿಕೆಗೂ ತಿಳಿದಿರುವಾಗ ಆಕೆಗೆ ಅವು ಯಾವ ಮಹಾವಿಷಯ ಎಂದು ಕವಿ ಹೇಳಿದ್ದಾನೆ. ಅವನ ಶಾಸ್ತ್ರಜ್ಞಾನ ಎಷ್ಟು ಗಂಭೀರವಾದುದೆಂಬುದಿಲ್ಲಿ ಸ್ಪಷ್ಟ.

ವಿಕ್ರಮಾರ್ಜುನ ವಿಜಯವಂತೂ ಲೋಕಪ್ರಸಿದ್ಧ. ಇದನ್ನು ಪಂಪಭಾರತವೆಂದೂ ಕರೆಯುತ್ತಾರೆ. ಇದರಲ್ಲಿ ಪಂಪನ ಪ್ರತಿಭೆ ಮುಗಿಲನ್ನು ಮುಟ್ಟಿದೆ. ಮಹಾಭಾರತದ ಕಥೆಯನ್ನು ಕನ್ನಡದಲ್ಲಿ ಪಂಪನೇ ಹೇಳಬೇಕೆಂದು ಪಂಡಿತರೆಲ್ಲರೂ ಕೋರಿದರು. ಅದರಿಂದ ಈ ಕಥೆಯನ್ನು ನಾನು ಹೇಳುವೆನು ಎಂದು ಪಂಪನು ಗ್ರಂಥಾದಿಯಲ್ಲಿ ಹೇಳಿದ್ದಾನೆ.

ಕತೆ ಪಿರಿದಾದೊಡು ಕತೆಯ ಮೆಯ್ಗಿಡಲೀಯದೆ ಮುಂ ಸಮಸ್ತ ಭಾ
ರತಮನಪೂರ್ವಮಾಗೆ ಸಲೆ ಪೇಳ್ದ ಕವೀಶ್ವರರಿಲ್ಲ ವರ್ಣಕಂ
ಕತೆಯೊಳೊಡಂಬಡು ಪಡೆಯೆ ಪೇಳ್ವೊಡೆ ಪಂಪನೆ ಪೇಳ್ಗುಮೆಂದು ಪಂ
ಡಿತರೆ ತಗುಳ್ದು ಬಿಚ್ಚಳಿಸೆ ಪೇಳಲೊಡರ್ಚಿದನೀ ಪ್ರಂಥಮಂ॥

ಎಂಬುದು ಅವನ ವಿನಯಪೂರ್ಣವಾದ ಮಾತು. ಇದರಲ್ಲಿ ಅರ್ಜುನನೇ ನಾಯಕನಾದುದರಿಂದ ಕುರುಕ್ಷೇತ್ರಯುದ್ಧವು ಮುಗಿದ ಮೇಲೆ ಅರ್ಜುನನಿಗೇ ಪಟ್ಟಾಭಿಷೇಕ. ಅವನ ಜೊತೆಯಲ್ಲಿ ಮಹಾದೇವಿಯಾಗಿ ಪಟ್ಟದರಾಣಿಯಾಗಿ ಅಭಿಷಿಕ್ತಳಾಗುವವಳು ಸುಭದ್ರೆ.

'ಆಗಳ್ ರಾಜ್ಯಾಭಿಷೇಕದನಂತರದೊಳ್
ಧರ್ಮನಂದನಂ ವಾಯುನಂದನಂ
ದೇವಕೀನಂದನನ್ ಅಶ್ವಿನೀನಂದನರಯ್ವರುಮ್
ಅನೇಕ ಮಂಗಳಾಭರಣಾ
ಲಂಕೃತಶರೀರರ್ ಅರಿಕೇಸರಿಯಂ
ಕೇಸರಿವಿಷ್ಟರದೊಳ್ ಕುಳ್ಳಿರಿಸಿ ಪಂಚರತ್ನ
ಶಿಖಾವಿರಾಜ ಮಾನಮಪ್ಪ ಪುಟ್ಟಮನೆತ್ತಿ
ಯಾದವವಂಶ ಸಂಭೂತೆಯುಮ್
ಅನೇಕ ಲಕ್ಷಣೋಪೇತೆಯುಮ್ ಅಪ್ಪ
ಸುಭದ್ರೆಗೆ ಮಹಾದೇವಿ ಪಟ್ಟಮಂ
ಕಟ್ಟಿದಾಗಳ್' ಎಂದು ಪಂಪನು
ಈ ಸಂದರ್ಭವನ್ನು ವರ್ಣಿಸಿದ್ದಾನೆ

ಮಹಾಭಾರತದ ಪಾತ್ರಗಳಲ್ಲಿ ಯಾವುವು ಯಾವ ಗುಣಕ್ಕಾಗಿ ಕೀರ್ತಿಯನ್ನು ಪಡೆದಿವೆಯೆಂದು ಪಂಪನು ಕಾವ್ಯದ ಕೊನೆಯಲ್ಲಿ ತಿಳಿಸಿದ್ದಾನೆ.

ಚಲದೊಳ್ ದುರ್ಯೋಧನಂ ನನ್ನಿಯೊಳಿನತನಯಂ
ಗಂಡಿನೊಳ್ ಭೀಮಸೇನಂ
ಬಲದೊಳ್ ಮದ್ರೇಶನ್ ಅತ್ಯುನ್ನತಿಯೊಳ್
ಅಮರಸಿಧೂದ್ಭವಂ ಚಾಪವಿದ್ಯಾ
ಬಲದೊಳೆ ಕುಂಭಾದ್ಭವಂ ಸಾಹಸದ ಮಹಿಮೆಯೊಳ್
ಫಲ್ಗುಣಂ ಧರ್ಮದೊಳ್‌ನಿ
ರ್ಮಲಚಿತ್ತಂ ಧರ್ಮ ಪುತ್ರಂ ಮಿಗಿಲಿವರ್ಗಳಿನೀ
ಭಾರತಂ ಲೋಕಪೂಜ್ಯಂ॥

ಛಲ ಹಿಡಿದು ಸಾಧಿಸುವುದರಲ್ಲಿ ದುರ್ಯೋಧನ, ಸತ್ಯ ವಾಕ್ಯದಲ್ಲಿ ಕರ್ಣ, ಗಂಡುತನದಲ್ಲಿ ಭೀಮ, ಶಕ್ತಿಯಲ್ಲಿ ಶಲ್ಯ, ಉನ್ನತಿಯಲ್ಲಿ ಗಂಗಾಪುತ್ರ ಭೀಷ್ಮ, ಧನುರ್ವಿದ್ಯೆಯಲ್ಲಿ ದ್ರೋಣ, ಸಾಹಸದಲ್ಲಿ ಅರ್ಜುನ, ಧರ್ಮದಲ್ಲಿ ಧರ್ಮರಾಜ, ಇವರನ್ನೆಲ್ಲ ಒಳಗೊಂಡ ಭಾರತ ಜಗತ್ಪೂಜ್ಯ.

ಇದನ್ನೆಲ್ಲ ತಿರುಳುಗನ್ನಡದಲ್ಲಿ ಬರೆದಿದ್ದೇನೆ. ಇದು ಪುಲಿಗೆರೆ ಎಂಬ ಊರಿನವರ ಕನ್ನಡ ಎಂದಿದ್ದಾನೆ ಪಂಪ.

ರಾಜದ್ರಾಜಕಮೆನಿಸಿದ
ಸಾಜದ ಪುಲಿಗೆರೆಯ ತಿರುಳ್ ಕನ್ನಡದೊಳ್ ನಿ
ವ್ಯಾಜದೆಸಕದೊಳೆ ಪುದಿದೊಂ
ದೋಜೆಯ ಬಲದಿನಿಯ ಕವಿತೆ ಪಂಪನ ಕವಿತೆ ॥

ಆದಿಪುರಾಣದಲ್ಲಿ ವಿಕ್ರಮಾರ್ಜುನ ವಿಜಯದ ಹೆಸರಿನಲ್ಲಿ, ಆದರೆ ವಿಕ್ರಮಾರ್ಜುನ ವಿಜಯದಲ್ಲಿ ಆದಿಪುರಾಣದ ಬಗೆಗೆ ಪಂಪನು ಹೇಳಿದ್ದಾನೆ.

ಬೆಳಗುವೆನಿಲ್ಲಿ ಲೌಕಿಕಮನಲ್ಲಿ ಜಿನಾಗಮಮಂ ಸಮಸ್ತ ಭೂ
ತಳಕೆ ಸಮಸ್ತಭಾರತಮುಮ್ ಆದಿಪುರಾಣುಮುಮ್ ಎಂದು ಮೆಯ್ಯಸಂ
ಗೊಳುತಿರೆ ಪೂಣ್ದು ಪೂಣ್ದ ತೆರದೊಂದುಗಿಂಗಳೊಳೊಂದು ಮೂರು
ತಿಂಗಳೊಳೆ ಸಮಾಪ್ತಿಯಾದುದೆನೆ ಬಣ್ಣಿಸಿದಂ ಕವಿತಾಗುಣಾರ್ಣವಂ॥

ಇದರಿಂದ ಮೊದಲು ಆದಿಪುರಾಣವನ್ನು ರಚಿಸಿ ಅನಂತರ ವಿಕ್ರಮಾರ್ಜುನ ವಿಜಯವನ್ನು ಪಂಪನು ರಚಿಸಿರಬೇಕು. ಇಂತಹ ಮಹಾಕವಿಯನ್ನು ಪಡೆದ ಕನ್ನಡ ನಾಡು ಧನ್ಯ.

ಕೇಂದ್ರ ಸಚಿವ ಕುಮಾರಸ್ವಾಮಿ ವಿರುದ್ಧ ನಿಂದನಾತ್ಮಕ ಹೇಳಿಕೆ

ಸಚಿವ ಜಮೀರ್ ಸಂಪುಟದಿಂದ ಕೈಬಿಡಲು ಒಕ್ಕಲಿಗರ ಸಂಘ ಆಗ್ರಹ

ಬೆಂಗಳೂರು,ನ.12(ಕೆಎಂಶಿ)–ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರನ್ನು 'ಕರಿಯ ಕುಮಾರಸ್ವಾಮಿ' ಎನ್ನುವ ಮೂಲಕ ನಿಂದನಾತ್ಮಕ ಭಾಷೆ ಬಳಸಿರುವ ಸಚಿವ ಜಮೀರ್ ಅಹಮದ್ ಖಾನ್ ಅವರನ್ನು ಸಂಪುಟದಿಂದ ಕೈಬಿಡುವಂತೆ ರಾಜ್ಯ ಒಕ್ಕಲಿಗರ ಸಂಘ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಆಗ್ರಹಿಸಿದೆ.

ಜಮೀರ್ ಅವರು ಬಳಸಿರುವ ಭಾಷೆಯಿಂದ ಕುಮಾರಸ್ವಾಮಿ ಅವರಿಗೆ ಮಾತ್ರ ಅಪಮಾನ ಮಾಡಿಲ್ಲ. ಇಡೀ ಒಕ್ಕಲಿಗ ಜನಾಂಗಕ್ಕೆ ಮಾಡಿರುವ ಅವಹೇಳನವಾಗಿದೆ. ನಾಡಿನ ಜನರಿಗೂ ಅಪಮಾನ ಮಾಡಿದಂತೆ. ಎರಡು ಬಾರಿ ಕರ್ನಾಟಕ ಮುಖ್ಯಮಂತ್ರಿಯಾಗಿದ್ದವರ ಬಗ್ಗೆ ಆಡಿರುವ ಮಾತುಗಳು ಸಚಿವರಾದವರಿಗೆ ಶೋಭೆ ತರುವುದಿಲ್ಲ.

ಸಭ್ಯತೆಯ ಎಲ್ಲೆ ಮೀರಿ ಮಾತನಾಡುವ ಈ ವ್ಯಕ್ತಿ, ಸಚಿವ ಸ್ಥಾನದಲ್ಲಿ ಮುಂದುವರೆಯಬಾರದು. ಒಕ್ಕಲಿಗ ಜನಾಂಗದ ಸರ್ವೋಚ್ಚ ನಾಯಕ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ ಕುಟುಂಬದ ಬಗ್ಗೆಯೂ



ಜಮೀರ್ ಲಘುವಾಗಿ ಮಾತನಾಡಿರುವುದನ್ನು ಸಂಘ ತೀವ್ರವಾಗಿ ಖಂಡಿಸಿದೆ.

ಚನ್ನಪಟ್ಟಣ ಉಪಚುನಾವಣೆಯಲ್ಲಿ ಕಳೆದ ಭಾನುವಾರದಂದು ಜಮೀರ್ ಅವರು, ಚುನಾವಣಾ ಪ್ರಚಾರ ಭಾಷಣ ಮಾಡುವಾಗ ಉರ್ದು ಭಾಷೆಯಲ್ಲಿ ಕುಮಾರಸ್ವಾಮಿ ಅವರ ಬಣ್ಣದ ಬಗ್ಗೆ ಮಾತನಾಡಿ ಜನಾಂಗೀಯ ನಿಂದನೆ ಮಾಡಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ, ಇದನ್ನು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ ಎಂದಿದೆ. ಜಮೀರ್ ಅಹಮದ್ ಅವರು ರಾಜಕೀಯವಾಗಿ ಯಾರಿಗೂ ನೋವಾಗದಂತೆ ಟೀಕೆ–ಟಿಪ್ಪಣಿ ಮಾಡಲು ಅಭ್ಯಂತರವಿಲ್ಲ, ಆದರೆ, ಸಾರ್ವಜನಿಕ ಜೀವನದಲ್ಲಿ ಇದ್ದು, ವ್ಯಕ್ತಿಗತ, ಸಮಾಜದ ಹಿತಕ್ಕೆ ಧಕ್ಕೆಯಾಗುವಂತೆ, ಕೇಂದ್ರ ಸಚಿವರ ವರ್ಣದ ಬಗ್ಗೆ ನಿಂದನಾತ್ಮಕವಾಗಿ ಮಾತನಾಡಿರುವುದು ಸಚಿವರಾದವರ ಘನತೆಗೆ ಸರಿಯಾದುದಲ್ಲ. ತಮ್ಮ ಹೇಳಿಕೆಯನ್ನು ಮಾಧ್ಯಮಗಳ ಮುಂದೆ ಮತ್ತೆ ಸಮರ್ಥನೆ ಮಾಡಿಕೊಂಡಿರುವುದನ್ನು ನೋಡಿದರೆ ಬಾಯಿ ತಪ್ಪಿನಿಂದ ಆಡಿರುವ ಮಾತಲ್ಲ, ಉದ್ದೇಶಪೂರ್ವಕವಾಗಿ ಆಡಿರುವುದಾಗಿದೆ ಎಂದೆನಿಸುತ್ತದೆ. ನಮ್ಮ ಜನಾಂಗದ ನಾಯಕರಾದ ಕುಮಾರಸ್ವಾಮಿ ಹಾಗೂ ದೇವೇಗೌಡ ಅವರ ಕುಟುಂಬದ ಬಗ್ಗೆ ಅವಮಾನಕರ ಭಾಷೆ ಬಳಸಿರುವುದಕ್ಕೆ ಸಾರ್ವಜನಿಕವಾಗಿ ಕ್ಷಮೆ ಯಾಚಿಸಬೇಕು ಹಾಗೂ ಇನ್ನು ಮುಂದೆ ಮಾತನಾಡುವಾಗ ಸೌಜನ್ಯದ ಎಲ್ಲೆ ಮೀರದಂತೆ ಎಚ್ಚರ ವಹಿಸಬೇಕು ಎಂದು ಒತ್ತಾಯಿಸಿದೆ. ಜಮೀರ್ ಅವರು ಕೂಡಲೇ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಸಮಸ್ತ ಒಕ್ಕಲಿಗ ಜನಾಂಗದ ಪರವಾಗಿ ಒತ್ತಾಯಿಸುವುದಾಗಿ ಸಂಘ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದೆ.

'ವಿಕಸಿತ ಭಾರತ ನಿರ್ಮಾಣದಲ್ಲಿ ಸಹಕಾರ ಸಂಸ್ಥೆಗಳ ಪಾತ್ರ' ಕುರಿತು ಸಹಕಾರ ಸಪ್ತಾಹ

ಮೈಸೂರು, ನ.12(ಜಿಎ)–ರಾಷ್ಟ್ರೀಯ ಸಹಕಾರ ಯೂನಿಯನ್ ಹಾಗೂ ರಾಜ್ಯ ಸಹಕಾರ ಮಹಾ ಮಂಡಳ ವತಿಯಿಂದ ನ.14ರಿಂದ 20ರವರೆಗೆ ಮೈಸೂರು ಜಿಲ್ಲೆಯ ವಿವಿಧೆಡೆ 'ವಿಕಸಿತ ಭಾರತ ನಿರ್ಮಾಣದಲ್ಲಿ ಸಹಕಾರ ಸಂಸ್ಥೆಗಳ ಪಾತ್ರ' ಕುರಿತು ಸಹಕಾರ ಸಪ್ತಾಹ ನಡೆಯಲಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಹೆಚ್.ವಿ.ರಾಜೀವ್ ಈ ವಿಷಯ ತಿಳಿಸಿ, ನ.14ರಂದು ನಗರದ ಜಿಲ್ಲಾ ಸಹಕಾರ ಯೂನಿಯನ್ ಸಭಾಂಗಣದಲ್ಲಿ, 15ರಂದು ನಂಜನಗೂಡಿನ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ, 16ರಂದು ಕೆ.ಆರ್.ನಗರದ ಪಿಎಲ್‌ಡಿ ಬ್ಯಾಂಕ್ ರೈತರ ಸಮುದಾಯ ಭವನದಲ್ಲಿ, 17ರಂದು ನಗರದ ಜಿಲ್ಲಾ ಸಹಕಾರ ಯೂನಿಯನ್ ಸಭಾಂಗಣದ್ಲಲಿ, 18ರಂದು ಟಿ.ನರಸೀಪುರದ ಮೈಮುಲ್ ಉಪ ಕಚೇರಿಯಲ್ಲಿ, 19ರಂದು ಹುಣಸೂರಿನ ಕನಕ ಭವನದ ಆವರಣದಲ್ಲಿ, 20ರಂದು ಹೆಚ್.ಡಿ.ಕೋಟೆ ತಾಲೂಕಿನ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ವಿವಿಧ ವಿಷಯಗಳ ಮೇಲೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಉಪನಿಬಂಧಕರಾದ ಆರ್.ಮಂಜುನಾಥ್, ಸದಾನಂದ್, ಪ್ರಶಾಂತ್, ಭೈರಪ್ಪ, ಚಂದ್ರಶೇಖರ್, ಮಹದೇವ್ ಉಪಸ್ಥಿತರಿದ್ದರು.

ಯುವನಿಧಿ ನೋಂದಣಿಗೆ ಅರ್ಜಿ ಆಹ್ವಾನ

ಮೈಸೂರು: 2024–25ನೇ ಸಾಲಿನಲ್ಲಿ ಪದವಿ, ಡಿಪ್ಲೊಮಾ ಉತ್ತೀರ್ಣರಾದ ವಿದ್ಯಾರ್ಥಿಗಳು, ಪದವಿ, ಡಿಪ್ಲೊಮ ನಂತರ ಕನಿಷ್ಠ 6 ತಿಂಗಳ ಅವಧಿವರೆಗೆ ಸರ್ಕಾರಿ, ಖಾಸಗಿ ಉದ್ಯೋಗ ಹೊಂದಿಲ್ಲದವರು, ಸ್ವಯಂ ಉದ್ಯೋಗ ಹೊಂದಿಲ್ಲದವರು, ಉನ್ನತ ವಿದ್ಯಾಭ್ಯಾಸ ಮುಂದು ವರೆಸದೇ ಇರುವವರು, ಕರ್ನಾಟಕದಲ್ಲಿ ವಾಸವಿರುವ (ಕನಿಷ್ಠ 6 ವರ್ಷಗಳವರೆಗೆ ಪದವಿ, ಡಿಪ್ಲೊಮಾದವರೆಗೆ ಅಧ್ಯಯನ ಮಾಡಿದವರು), ಯುವನಿಧಿ ಯೋಜನೆ ಪ್ರಯೋಜನವನ್ನು ಪಡೆಯಬಹುದಾಗಿದೆ. ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ, ಡಿಪ್ಲೊಮ ಪ್ರಮಾಣ ಪತ್ರಗಳು ನೋಂದಣಿಗೆ ಕಡ್ಡಾಯವಾಗಿದ್ದು, ಅಭ್ಯರ್ಥಿ ಗಳು https://sevasindhugs.karnataka.gov.in, ಕರ್ನಾಟಕ ಒನ್, ಬೆಂಗಳೂರು ಒನ್, ಗ್ರಾಮ ಒನ್ ಮತ್ತು ಬಾಪೂಜಿ ಸೇವಾ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಸಂಖ್ಯೆಯಲ್ಲಿ ನಿರುದ್ಯೋಗ ಅಭ್ಯರ್ಥಿಗಳು ನೋಂದಾಯಿಸಿಕೊಂಡು ಇದರ ಪ್ರಯೋಜನ ಪಡೆದುಕೊಳ್ಳಬಹುದು. ಮಾಹಿತಿಗೆ ಸಹಾಯವಾಣಿ ಸಂ: 1800–5999918, 8748984360, 9036356 862, 9113 982513, 8217485689 ಸಂಪರ್ಕಿಸಿ.

ಹೆಚ್.ವಿ.ರಾಜೀವ್ ಸ್ನೇಹ ಬಳಗದಿಂದ ತುಳಸಿ ಗಿಡ ವಿತರಣೆ...



ಮೈಸೂರಿನ ಪ್ರಸನ್ನ ಶಿವಲಿಂಗೇಶ್ವರ ಸ್ವಾಮಿ ದೇವಾಲಯದ ಮುಂದೆ ಹೆಚ್.ವಿ.ರಾಜೀವ್ ಸ್ನೇಹ ಬಳಗದ ಆರ್.ಕುಮಾರ್ ನೇತೃತ್ವದಲ್ಲಿ ಸಾವಿರಾರು ತುಳಸಿ ಮತ್ತು ಬೆಟ್ಟದನಲ್ಲಿ ಕಾಯಿ ಗಿಡಗಳನ್ನು ವಿತರಿಸಲಾಯಿತು. ಹುಡ್ಕೋ ಕುಮಾರ್, ಜೆ.ಆರ್.ರಂಗಯ್ಯ, ಬಿ.ಪಿ.ಪುಟ್ಟಸ್ವಾಮಿ, ಎಲ್.ಲೋಕೇಶ್, ಶೈಲೆಂದರ್, ಅರವಿಂದ, ಎಸ್.ಪಿ.ತ್ಯಾಗರಾಜ್, ಬಿ.ಶ್ರೀಕಾಂತ್ ಹಾಗೂ ರೇವಣ್ಣ ಇನ್ನಿತರರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ

ನ.18ಕ್ಕೆ ಕನಕದಾಸ ಜಯಂತಿ

ಮೈಸೂರು, ನ.12– ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮೈಸೂರು ಸಂತ ಶ್ರೀ ಕನಕದಾಸರ ಜಯಂತೋತ್ಸವ ಸಮಿತಿ ಮೈಸೂರು ಇವರ ಸಂಯುಕ್ತಾಶ್ರಯದಲ್ಲಿ ದಾಸಶ್ರೇಷ್ಠ ಸಂತ ಕವಿ ಶ್ರೀ ಕನಕದಾಸರ ಜಯಂತಿ ಯನ್ನು ನವೆಂಬರ್ 18 ರಂದು ಬೆಳಿಗ್ಗೆ 11:30 ಗಂಟೆಗೆ ಕರ್ನಾಟಕ ಕಲಾಮಂದಿರದಲ್ಲಿ ಆಯೋಜಿಸಲಾಗಿದೆ.



ಮೈಸೂರಿನ ಶ್ರೀ ಕಾಗಿನೆಲೆ ಕನಕ ಗುರು ಪೀಠದ ಶ್ರೀ. ಶಿವಾನಂದ ಪುರಿ ಸ್ವಾಮೀಜಿಗಳ ದಿವ್ಯ ಸಾನಿಧ್ಯದಲ್ಲಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಹಾಗೂ ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕೆ ಖಾತೆ ಸಚಿವರಾದ ಹೆಚ್. ಡಿ. ಕುಮಾರಸ್ವಾಮಿ ಘನ ಉಪಸ್ಥಿತಿಯಲ್ಲಿ, ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಸಮಾಜ ಕಲ್ಯಾಣ ಇಲಾಖೆಯ ಸಚಿವರಾದ ಡಾ.ಹೆಚ್.ಸಿ ಮಹದೇವಪ್ಪನವರು ಕಾರ್ಯಕ್ರಮದ ಉದ್ಘಾಟನೆ ಮಾಡಲಿದ್ದು, ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕರಾದ ಕೆ.ಹರೀಶ್ ಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಪಶು ಸಂಗೋಪನೆ ಮತ್ತು ರೇಷ್ಮೆ ಇಲಾಖೆ ಸಚಿವರಾದ ಕೆ.ವೆಂಕಟೇಶ್, ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ನಿಗಮದ ಅಧ್ಯಕ್ಷರು ಹಾಗೂ ಹೆಚ್.ಡಿ ಕೋಟೆ ವಿಧಾನಸಭಾ ಕ್ಷೇತ್ರದ ಶಾಸಕರಾದ ಅನಿಲ್ ಕುಮಾರ್. ಸಿ, ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ಅಧ್ಯಕ್ಷರಾದ ಎ.ಬಿ ರಮೇಶ್ ಬಂಡಿ ಸಿದ್ದೇಗೌಡ ಹಾಗೂ ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾದ ಡಾ.ಪುಷ್ಪ ಅಮರನಾಥ್ ಹಾಗೂ ಬೆಂಗಳೂರಿನ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ.ಮಾನಸ ಅವರು ಗೌರವ ಉಪಸ್ಥಿತರಿರಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಶಾಸಕರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ಚಾಮರಾಜನಗರ ಲೋಕಸಭಾ ಕ್ಷೇತ್ರದ ಶಾಸಕರಾದ ಸುನಿಲ್ ಬೋಸ್ ಅವರು ಆಗಮಿಸಲಿದ್ದಾರೆ.

ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಶಾಸಕರಾದ ತನ್ವೀರ್ ಸೇಠ್, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಜಿ.ಟಿ ದೇವೇಗೌಡ, ಕೃಷ್ಣ ರಾಜನಗರ ವಿಧಾನಸಭಾ ಶಾಸಕರಾದ ರವಿಶಂಕರ್ ಡಿ, ಕೃಷ್ಣರಾಜ ವಿಧಾನ ಸಭಾ ಕ್ಷೇತ್ರದ ಶಾಸಕರಾದ ಟಿ.ಎಸ್. ಶ್ರೀವತ್ಸ, ನಂಜನಗೂಡು ವಿಧಾನಸಭಾ ಕ್ಷೇತ್ರದ ಶಾಸಕರಾದ ದರ್ಶನ್ ಧ್ರುವನಾರಾಯಣ್, ಹುಣಸೂರು ವಿಧಾನಸಭಾ ಕ್ಷೇತ್ರದ ಶಾಸಕರಾದ ಜಿ.ಡಿ ಹರೀಶ್ ಗೌಡ ಹಾಗೂ ವಿಧಾನ ಪರಿಷತ್ ಸದಸ್ಯರುಗಳಾದ ಹೆಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ.ಮಾದೇಗೌಡ, ಯತೀಂದ್ರ.ಎಸ್ ಮತ್ತು ವಿವೇಕಾನಂದ.ಎಸ್ ಅವರು ಸಮಾರಂಭದ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷರಾದ ಅಯೂಬ್ ಖಾನ್, ಕಾವೇರಿ ಜಲಾನಯನ ಯೋಜನೆಯ ಅಚ್ಚುಕಟ್ಟು ಪ್ರಾಧಿಕಾರದ ಅಧ್ಯಕ್ಷರಾದ ಮರಿಸ್ವಾಮಿ ಅವರು ಕಾರ್ಯಕ್ರಮದಲ್ಲಿ ಭಾಗವಹಿಸುವರು ಹಾಗೂ ಮೈಸೂರಿನ ಹಿರಿಯ ಸಾಹಿತಿಗಳಾದ ಪ್ರೊ. ಸಿ. ನಾಗಣ್ಣ ಅವರು ಉಪನ್ಯಾಸ ನೀಡಲಿದ್ದಾರೆ.

ವಿಶ್ವ ಪರಂಪರೆ ಸಪ್ತಾಹ: ವಿವಿಧ ಸ್ಪರ್ಧೆ ಆಯೋಜನೆ

ಮೈಸೂರು, ನ.12– ವಿಶ್ವ ಪರಂಪರೆ ಸಪ್ತಾಹದ ಅಂಗವಾಗಿ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಹಾಗೂ ಮೈಸೂರು ಸ್ಕೂಲ್ ಆಫ್ ಆರ್ಕಿಟೆಕ್ಚರ್ ವಿದ್ಯಾಸಂಸ್ಥೆಯ ಸಹಯೋಗದೊಂದಿಗೆ ನವೆಂಬರ್ 19 ರಿಂದ 25 ರವರೆಗೆ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆಗಳನ್ನು ಹಾಗೂ ವಸ್ತುಪ್ರದರ್ಶನವನ್ನು ಆಯೋಜಿಸಲಾಗಿದೆ.

ನೈಸರ್ಗಿಕ ಪರಂಪರೆ, ಪಾರಂಪರಿಕ ಸ್ಮಾರಕ ಹಾಗೂ ಪಾರಂಪರಿಕ ಕಲೆ ಎಂಬುದು ಸ್ಪರ್ಧೆಯ ವಿಷಯಗಳಾಗಿದ್ದು, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿರುವ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯಲ್ಲಿ ಕಾರ್ಯಕ್ರಮ ನಡೆಯಲಿದೆ. ನವೆಂಬರ್ 22 ರಂದು ಪಿ.ಯು.ಸಿ. ಹಾಗೂ ನವೆಂಬರ್ 23 ರಂದು 8 ನೇ ತರಗತಿಯಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಬೆಳಗ್ಗೆ 9 ಗಂಟೆಗೆ ನೊಂದಣಿ ನಡೆಯಲಿದ್ದು, ಬೆಳಗ್ಗೆ 9:45 ರಿಂದ 11 ಗಂಟೆಯವರೆಗೆ ಚಿತ್ರಕಲೆ, ಬೆಳಗ್ಗೆ 11:30 ರಿಂದ ಮಧ್ಯಾಹ್ನ 12:30 ರವರೆಗೆ ಸ್ಕೆಚಿಂಗ್ (ರೇಖಾ ಚಿತ್ರ), ಕನ್ನಡ ಹಾಗೂ ಇಂಗ್ಲೀಷ್ ಭಾಷೆಯಲ್ಲಿ ರಸಪ್ರಶ್ನೆಯಲ್ಲಿ ಮೊದಲ ಸುತ್ತು (ಬರವಣಿಗೆ) ಬೆಳಗ್ಗೆ 10:30 ರಿಂದ 11:30 ರವರೆಗೆ, ಕೊನೆಯ ಸುತ್ತು (ಮೌಖಿಕ) ಮಧ್ಯಾಹ್ನ 12:15 ರಿಂದ 1:30 ರವರೆಗೆ ನಡೆಯಲಿದೆ.


ಛಾಯಾಗ್ರಹಣ ಸ್ಪರ್ಧೆಯಲ್ಲಿ ನವೆಂಬರ್ 22ರ 11:59 ರಾತ್ರಿಯವರಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಇಮೇಲ್ ವಿಳಾಸ social@msa.edu.in, ವಿದ್ಯಾರ್ಥಿಗಳು ಶೀರ್ಷಿಕೆ, ಕ್ಯಾಮೆರಾ, ಮೊಬೈಲ್, ಫೋಟೋದ ದಿನಾಂಕ, ಶೂಟಿಂಗ್ ಮೋಡ್, ಶಟರ್ ವೇಗ, ಅಪೆರ್ಚುರ್ ವ್ಯಾಲ್ಯೂ, ಫೋಕಲ್ ಲೆಂತ್, ISO ವೇಗ, ಫ್ಲ್ಯಾಶ್‌ನ ಸ್ವರೂಪ ಡೇಟಾವನ್ನು ಸಲ್ಲಿಸಬೇಕು. ಸಾಫ್ಟ್ ಕಾಪಿ ಫಾರ್ಮ್ಯಾಟ್ ಗರಿಷ್ಠ ಗಾತ್ರ 10MB ಮತ್ತು 150 dpi ಅಥವಾ ಹೆಚ್ಚಿನ ರೆಸಲ್ಯೂಶನ್ ಹೊಂದಿರುವ JPEG ಫಾರ್ಮ್ಯಾಟ್ ಹೊಂದಿರಬೇಕು.

ಭಾಗವಹಿಸುವ ವಿದ್ಯಾರ್ಥಿಗಳು ಹಾಗೂ ಶಿಕ್ಷಕ ವೃಂದದವರು ತಮ್ಮ ಹೆಸರು, ವಿಳಾಸ ಹಾಗೂ ದೂರವಾಣಿ ಸಂಖ್ಯೆಗಳನ್ನು ವೆಬ್‌ಸೈಟ್ www.msa.edu.in ಮೂಲಕ ಅಥವಾ ಮುರಳೀಧರ್ ಕಾಳಾಚಾರ್ ಅವರ ದೂ.ಸಂ: 9113870169 ಸಂಖ್ಯೆಗೆ ಕರೆ ಮಾಡಿ ನೋಂದಾಯಿಸಿ ಕೊಳ್ಳಬಹುದು. ನ.25 ರಂದು ಬೆಳಗ್ಗೆ 10:30 ಗಂಟೆಗೆ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ ಆವರಣದ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯಲ್ಲಿ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಗುವುದು. ಮಾಹಿತಿಗಾಗಿ ಕಛೇರಿ ದೂ.ಸಂ: 0821–2424671 ಹಾಗೂ ಉಪ ನಿರ್ದೇಶಕ (ಪರಂಪರೆ) ಡಾ.ಸಿ.ಎನ್.ಮಂಜುಳಾ ಮೊ: 83102 50733 ಮತ್ತು ಪ್ರಥಮ ದರ್ಜೆ ಸಹಾಯಕ ಶಶಿಧರ.ಎಸ್ ಮೊ. ಸಂ: 7349057976 ಸಂಪರ್ಕಿಸಬಹುದು.

ಇಂದಿನಿಂದ ಉಚಿತ ಆರೋಗ್ಯ ಶಿಬಿರ

ಮೈಸೂರು, ನ.12– 7ನೇ ರಾಷ್ಟ್ರೀಯ ಪ್ರಕೃತಿ ಚಿಕಿತ್ಸಾ ದಿನಾಚರಣೆ ಪ್ರಯುಕ್ತ ಬೃಂದಾವನ ಬಡಾವಣೆಯಲ್ಲಿರುವ ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಬೋಧಕ ಆಸ್ಪತ್ರೆಯ ವತಿಯಿಂದ 'ಪ್ರಕೃತಿ ಚಿಕಿತ್ಸಾ ಸಪ್ತಾಹ' ದ ಅಂಗವಾಗಿ ನವೆಂಬರ್ 13 ರಿಂದ 19 ರವರೆಗೆ ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ಏಳು ದಿನಗಳ ಉಚಿತ ಆರೋಗ್ಯ ಶಿಬಿರವನ್ನು ಏರ್ಪಡಿಸಲಾಗಿದ್ದು, ಸ್ಥೂಲಕಾಯ, ಅಧಿಕ ರಕ್ತದೊತ್ತಡ, ಮಧುಮೇಹ, ಅಸ್ಥಿ ಸಂಧಿವಾತ ವ್ಯಾದಿಗಳಿಗೆ ಪ್ರಕೃತಿ ಚಿಕಿತ್ಸೆ ಹಾಗೂ ಯೋಗ ಚಿಕಿತ್ಸಾ ಪದ್ಧತಿಗಳಿಂದ ಚಿಕಿತ್ಸೆಯನ್ನು ನೀಡಲಾಗುವುದು. ಸಾರ್ವಜನಿಕರು ಇದರ ಸದುಪಯೋಗವನ್ನು ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಸಂಚಾಲಕರ ದೂ.ಸಂ: 9535415399, 0821–2512121 ಅಥವಾ 0821–2410120 ಅನ್ನು ಸಂಪರ್ಕಿಸಬಹುದು ಎಂದು ಎಂದು ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಬೋಧನಾ ಆಸ್ಪತ್ರೆಯ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.





ಕುಮಾರಸ್ವಾಮಿ, ದೇವೇಗೌಡರ ವಿರುದ್ಧ ಅವಹೇಳನಕಾರಿ ಹೇಳಿಕೆ

ಸಚಿವ ಜಮೀರ್ ಅಹಮದ್ ವಿರುದ್ಧ ಜಿಲ್ಲೆಯಲ್ಲಿ ಭಾರಿ ಆಕ್ರೋಶ

ರಸ್ತೆ ತಡೆ, ವ್ಯಾಪಕ ಖಂಡನೆ, ರಾಜೀನಾಮೆಗೆ ಆಗ್ರಹ



ಪಾಂಡವಪುರ ಪಟ್ಟಣದ ಐದು ದೀಪ ವೃತ್ತದಲ್ಲಿ ಜೆಡಿಎಸ್–ಬಿಜೆಪಿ ಕಾರ್ಯಕರ್ತರು ಸಚಿವ ಜಮೀರ್ ಅಹಮದ್ ಹೇಳಿಕೆ ಖಂಡಿಸಿ, ಪ್ರತಿಭಟನೆ ನಡೆಸಿದರು.

ಮಂಡ್ಯ, ನ.12– ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಮತ್ತು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡಿರುವ ಸಚಿವ ಜಮೀರ್ ಅಹಮದ್ ವಿರುದ್ಧ ಜಿಲ್ಲೆಯಲ್ಲಿ ಭಾರಿ ಆಕ್ರೋಶ ವ್ಯಕ್ತವಾಗಿದ್ದು, ಪ್ರತಿಭಟನೆ, ರಸ್ತೆತಡೆ, ಖಂಡನೆಗಳು ಕೇಳಿ ಬಂದಿವೆ.


ಪಾಂಡವಪುರದಲ್ಲಿ ಪ್ರತಿಭಟನೆ, ರಸ್ತೆ ತಡೆಗಳು ನಡೆದರೆ, ಶಾಸಕರು, ಮಾಜಿ ಶಾಸಕರು ಮತ್ತು ಮುಖಂಡರು ಜಮೀರ್ ಅಹಮದ್ ವಿರುದ್ಧ ಹರಿಹಾಯ್ದಿದ್ದಾರೆ. ಚನ್ನಪಟ್ಟಣದಲ್ಲಿ ಚುನಾವಣಾ ಪ್ರಚಾರದ ವೇಳೆ ಜಮೀರ್ ಅಹಮದ್, ಕೇಂದ್ರ ಸಚಿವ ಕುಮಾರಸ್ವಾಮಿ ಮತ್ತು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡಿದ್ದೇ ಇದಕ್ಕೆ ಕಾರಣವಾಗಿದೆ.

ಪಾಂಡವಪುರ: ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿರುವ ಜಮೀರ್ ಅಹಮದ್ ವಿರುದ್ಧ ಪಟ್ಟಣದಲ್ಲಿ ಜೆಡಿಎಸ್–ಬಿಜೆಪಿ ಕಾರ್ಯಕರ್ತರು ಮಂಗಳವಾರ ರಸ್ತೆತಡೆದು ಪ್ರತಿಭಟನೆ ನಡೆಸಿದರು.

ಪಟ್ಟಣದ ಐದು ದೀಪ ವೃತ್ತದಲ್ಲಿ ಜಮಾಯಿಸಿದ ಜೆಡಿಎಸ್–ಬಿಜೆಪಿ ಕಾರ್ಯಕರ್ತರು, ಶ್ರೀರಂಗಪಟ್ಟಣ–ಜೇವರ್ಗಿ ಮುಖ್ಯರಸ್ತೆ ತಡೆದು ಮಾನವ ಸರಪಳಿ ನಿರ್ಮಿಸಿ, ಸಚಿವ ಜಮೀರ್ ವಿರುದ್ಧ ಘೋಷಣೆ ಕೂಗಿ, ಆಕ್ರೋಶ ವ್ಯಕ್ತಪಡಿಸಿದರು. ಸಚಿವ ಜಮೀರ್ ಅಹಮದ್ ಅವನೊಬ್ಬ ಅಯೋಗ್ಯ ಮಂತ್ರಿ, ಇಂತಹ ಸಚಿವರನ್ನು ಸಂಪುಟದಿಂದ ವಜಾಗೊಳಿಸಿ, ದೇಶದಿಂದ ಗಡಿಪಾರು ಮಾಡಬೇಕೆಂದು ಒತ್ತಾಯಿಸಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವ ಮಾಜಿ ಶಾಸಕ ಸುರೇಶ್ ಗೌಡ.



ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿರುವ ಶಾಸಕ ಎ.ಮಂಜು.

ಜೆಡಿಎಸ್ ಅಧ್ಯಕ್ಷ ಎಸ್.ಮಲ್ಲೇಶ್, ಬಿಜೆಪಿ ಅಧ್ಯಕ್ಷ ಧನಂಜಯ್ ಮಾತನಾಡಿ, ಸಚಿವ ಜಮೀರ್ ಅಹಮದ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ರಾಜೀನಾಮೆಗೆ ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಪುರಸಭೆ ಅಧ್ಯಕ್ಷೆ ಜ್ಯೋತಿಲಕ್ಷ್ಮಿ ಉಪಾಧ್ಯಕ್ಷ ಅಶೋಕ್, ಟಿಎಪಿಸಿಎಂಎಸ್ ಅಧ್ಯಕ್ಷ ಡಿ.ಶ್ರೀನಿವಾಸ್, ನಿರ್ದೇಶಕ ರಾಮಕೃಷ್ಣ, ಪುರಸಭೆ ಸದಸ್ಯರಾದ ಗಿರೀಶ್, ಸೋಮಶೇಖರ್, ಕೃಷ್ಣ, ಡಿಸಿಸಿ ಬ್ಯಾಂಕ್ ನಿರ್ದೇಶಕರಾದ ಗುರುಸ್ವಾಮಿ, ಚಲುವರಾಜ್, ಹಳೇಬೀಡು ಗ್ರಾಪಂ ಅಧ್ಯಕ್ಷ ಧನಂಜಯ್, ಮುಖಂಡರಾದ ಪಿ.ಎಸ್.ಲಿಂಗರಾಜು, ಸಗಾಯಂ, ಹೊಸಕೋಟೆಪುಟ್ಟಣ್ಣ, ಚಿಕ್ಕಾಡೆ ರಾಜಪ್ಪ, ಎಸ್.ಎನ್.ನಾರಾಯಣಗೌಡ, ಬಿ.ಎಸ್.ಜಯರಾಮು, ಶಿವಕುಮಾರ್, ರವಿಕರ, ಮಾಣಿಕ್ಯನಹಳ್ಳಿ ಅಶೋಕ್, ಕೆ.ಬೆಟ್ಟಹಳ್ಳಿ ಮನು, ಮಂಚೇಗೌಡ, ಅಶ್ವಥ್ ಕುಮಾರೇಗೌಡ, ಸಿದ್ದೇಗೌಡ, ಚಿಕ್ಕಮರಳಿ ಚಂದ್ರಶೇಖರ್, ಬಿಜೆಪಿ ಮುಖಂಡರಾದ ಕಾಂತರಾಜ್, ಆನಂದ್, ಚಿಕ್ಕಣ್ಣ, ನವೀನ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ಮಂಡ್ಯ: ಕೇಂದ್ರ ಸಚಿವ ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ವರ್ಣದ ಬಗ್ಗೆ ಮಾತ ನಾಡಿರುವ ಸಚಿವ ಜಮೀರ್ ಅಹ್ಮದ್ ಕೂಡಲೇ ಕ್ಷಮೆಯಾಚಿಸಬೇಕು. ಜೊತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಕೂಡಲೇ ಜಮೀರ್ ರಾಜೀನಾಮೆ ಪಡೆಯಬೇಕೆಂದು ಮಾಜಿ ಶಾಸಕ ಕೆ.ಸುರೇಶ್‌ಗೌಡ ಒತ್ತಾಯಿಸಿದರು.

ಮಂಗಳವಾರ ನಗರದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಹೆಚ್ಡಿಕೆ ಬಗ್ಗೆ ಅವಹೇಳನಕಾರಿಯಾದ ಪದ ಬಳಕೆ ಮಾಡಿರುವ ಸಚಿವ ಜಮೀರ್ ಅಹಮದ್ ಖಾನ್ ಹೇಳಿಕೆ ಖಂಡನಾರ್ಹ. ಚನ್ನಪಟ್ಟಣ ಉಪ ಚುನಾವಣೆ ಪ್ರಚಾರ ಸಂದರ್ಭದಲ್ಲಿ ನಮ್ಮ ನಾಯಕರ ಬಗ್ಗೆ ಕಾಂಗ್ರೆಸ್ ಸಚಿವರು ವರ್ಣಭೇದ ನೀತಿ ತೋರುವ ರೀತಿ ಹೇಳಿಕೆ ಕೊಟ್ಟಿರುವುದು ಸರಿಯಲ್ಲ. ಅವರು ತಮ್ಮ ಮಿತಿಯನ್ನು ಅರಿತು ಮಾತನಾಡಬೇಕು ಎಂದು ತಾಕೀತು ಮಾಡಿದರು.

ಮಾಜಿ ಶಾಸಕ ಅನ್ನದಾನಿ ಮಾತನಾಡಿ, ದೇವರ ಮೇಲೆ ಪ್ರಮಾಣ ಮಾಡ್ತೇನೆ. ಒಂದು ದಿನ ಕೂಡ ಕುಮಾರಸ್ವಾಮಿ ಜಮೀರ್ ಅವರನ್ನು ಕುಳ್ಳ ಅಂತ ಕರೆದಿಲ್ಲ, ಅವರಿಬ್ಬರು ಆತ್ಮೀಯವಾಗಿದ್ದರು. ಆದರೆ ವೈಯಕ್ತಿಕವಾಗಿ ನಿಂದಿಸುವ ಪದ ಬಳಕೆಯನ್ನು ಕುಮಾರಸ್ವಾಮಿ ಅವರು ಮಾಡಿಲ್ಲ. ಅದಕ್ಕೆ ನಾನೇ ಸಾಕ್ಷಿ ಎಂದು ಹೇಳಿದರು.

ಚನ್ನಪಟ್ಟಣ ಬಹಿರಂಗ ಪ್ರಚಾರ ಮುಕ್ತಾಯವಾಗಿದೆ. ಕಾಂಗ್ರೆಸ್ ಸಚಿವರ ಉದ್ಧಟತನಕ್ಕೆ ಚನ್ನಪಟ್ಟಣದ ಜನತೆ ತಕ್ಕ ಉತ್ತರ ಕೊಡುತ್ತಾರೆ. ನಿಖಿಲ್ ಗೆಲ್ಲಿಸಲು ಜನರು ಬೆಂಬಲ ಇದೆ 30 ಸಾವಿರ ಮತಗಳ ಅಂತರದಿಂದ ನಿಖಿಲ್ ಗೆಲ್ಲುತ್ತಾರೆ. ನಾಳೆ ನಡೆಯುವ ಮತ ಚಲಾವಣೆಯಲ್ಲಿ ಜಮೀರ್‌ಗೆ ಸರಿಯಾದ ಉತ್ತರವನ್ನು ಮತದಾರರು ನೀಡುತ್ತಾರೆ ಎಂದು ಹೇಳಿದರು.

ರಾಜಕೀಯವಾಗಿ ಬೆಳೆಸಿದ ಗೌಡರ ವಿರುದ್ಧ ಜಮೀರ್ ಹೇಳಿಕೆ ಸರಿಯಲ್ಲ: ರಾಜಕೀಯದ ಅರಿವೇ ಇಲ್ಲದ ವ್ಯಕ್ತಿಯನ್ನು ಬೆಂಗಳೂರಿನ ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರಕ್ಕೆ ಕರೆತಂದು ಚುನಾವಣೆಗೆ ನಿಲ್ಲಿಸಿ, ಶಾಸಕ, ಮಂತ್ರಿಯನ್ನಾಗಿ ಮಾಡಿ, ಅಲ್ಪಸಂಖ್ಯಾತ ಸಮುದಾಯದ ದೊಡ್ಡ ನಾಯಕನನ್ನಾಗಿ ಮಾಡಿದ ಮುತ್ಸದ್ಧಿ ರಾಜಕಾರಣಿ ಹೆಚ್.ಡಿ.ದೇವೇಗೌಡರ ಬಗ್ಗೆ ಜಮೀರ್ ಅಹ್ಮದ್‌ಖಾನ್ ಮಾತನಾಡಿರುವ ಶೈಲಿ ಸರಿಯಲ್ಲ ಎಂದು ಅರಕಲಗೂಡು ಕ್ಷೇತ್ರದ ಜೆಡಿಎಸ್ ಶಾಸಕ ಎ.ಮಂಜು ಕಿಡಿಕಾರಿದರು.

ಮಂಗಳವಾರ ಮಂಡ್ಯದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಸಚಿವ ಜಮೀರ್ ಅಹಮದ್ ಮಾತನಾಡುವ ಭಾಷೆ ಬದಲಿಸಿಕೊಳ್ಳಬೇಕು. ದೇವೇಗೌಡರು ದಲಿತ ನಾರಾಯಣ ಎಂಬ ಕಾರ್ಯಕ್ರಮದ ಮೂಲಕ ಜಮೀರ್ ಅಹಮದ್ ಅವರನ್ನು ಶಾಸಕರನ್ನಾಗಿ ಮಾಡಿದರು. ಈ ಕೆಲಸ ಆಗದಿದ್ದರೆ, ಅವರು ಇಂದು ಶಾಸಕ, ಸಚಿವರಾಗುವ ಅವಕಾಶ ದೊರೆಯುತ್ತಿರಲಿಲ್ಲ, ಅವರ ಮೂಲ ಕಸುಬಿನಲ್ಲೇ ಉಳಿಯುತ್ತಿದ್ದರು ಎಂದು ಹೇಳಿದರು.

ಕುಮಾರಸ್ವಾಮಿ ಬಗ್ಗೆ ಮಾತನಾಡುವಾಗ ನಾಲಿಗೆ ಮೇಲೆ ಹಿಡಿತ ಇರಲಿ: ರವಿಕುಮಾರ್



ಮಂಡ್ಯ: ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರನ್ನು ಕರಿಯಾ ಎಂದು ಕರೆದಿರುವ ಸಚಿವ ಜಮೀರ್ ಅಹ್ಮದ್ ಖಾನ್ ವಿರುದ್ಧ ಸ್ವಪಕ್ಷದಲ್ಲೇ ಆಕ್ರೋಶ ವ್ಯಕ್ತವಾಗಿದೆ. ಎಚ್.ಡಿ.ಕುಮಾರಸ್ವಾಮಿ ಬಗ್ಗೆ ಮಾತನಾಡುವಾಗ ನಾಲಿಗೆ ಮೇಲೆ ಹಿಡಿತ ಇರಲಿ ಎಂದು ಕಾಂಗ್ರೆಸ್ ಶಾಸಕ ಗಣಿಗ ರವಿಕುಮಾರ್ ಎಚ್ಚರಿಕೆ ನೀಡಿದ್ದಾರೆ. ಚನ್ನಪಟ್ಟಣ ಉಪಚುನಾವಣೆಯ ಕಾಂಗ್ರೆಸ್ ಪ್ರಚಾರ ಸಭೆ ವೇಳೆ ಹೆಚ್.ಡಿ.ಕುಮಾರಸ್ವಾಮಿ ವಿರುದ್ಧ ಮಾತಿನ ಭರದಲ್ಲಿ ಸಚಿವ ಜಮೀರ್ ಅಹ್ಮದ್ ಖಾನ್, ಕುಮಾರಸ್ವಾಮಿ ಅವರ ಬಣ್ಣದ ಬಗ್ಗೆ ಮಾತನಾಡಿದ್ದು ಇದು ರಾಷ್ಟ್ರಮಟ್ಟದಲ್ಲಿ ವಿವಾದ ಹುಟ್ಟುಹಾಕಿದೆ. ಹೆಚ್.ಡಿ. ಕುಮಾರಸ್ವಾಮಿಯವರನ್ನು ಕರಿಯ ಎಂದು ಕರೆಯುವ ಮೂಲಕ ಜಮೀರ್ ಸಂಕಷ್ಟಕ್ಕೆ ಸಿಲುಕಿದ್ದಾರೆ. ಜಮೀರ್ ಹೇಳಿಕೆ ಕುರಿತಂತೆ ಪ್ರತಿಕ್ರಿಯಿಸಿದ ಶಾಸಕ ಗಣಿಗ ರವಿಕುಮಾರ್ ಜಮೀರ್ ಈ ರೀತಿ ಹೇಳಿರುವುದು ಅವರ ಘನತೆಗೆ ಶೋಭೆ ತರುವುದಿಲ್ಲ ಎಂದು ಕಿಡಿಕಾರಿದರು.

ಕುಮಾರಸ್ವಾಮಿ ಅವರ ಬಣ್ಣದ ಕುರಿತು ಜಮೀರ್ ಮಾತನಾಡಿರೋದು ದೊಡ್ಡ ತಪ್ಪು ಎಂದು ಗಣಿಗ ರವಿಕುಮಾರ್ ಹೇಳಿದ್ದಾರೆ. ಯಾರೇ ಆಗಲಿ ಯಾವುದೇ ವ್ಯಕ್ತಿಯನ್ನು ಅವರ ಬಣ್ಣದಿಂದ ಹೀಯಾಳಿಸಬಾರದು. ಕರಿಯಣ್ಣ, ಕುಳ್ಳಣ್ಣ ಅಂತ ವೈಯಕ್ತಿಕವಾಗಿ ಮಾತನಾಡಿಕೊಳ್ಳುತ್ತಿದ್ದೆವು ಅಂತ ಜಮೀರ್ ಹೇಳಿದ್ದಾರೆ. ಆದರೆ ಸಾರ್ವಜನಿಕವಾಗಿ ಯಾಕೆ ಇಂತಹ ಹೇಳಿಕೆ ನೀಡಬೇಕು ಎಂದರು. ಚುನಾವಣೆ ಸಂದರ್ಭದಲ್ಲಿ ಟೀಕೆ ಟಿಪ್ಪಣಿ ಸಹಜ. ಟೀಕೆ ಟಿಪ್ಪಣಿ ಮೇಲೆ ಚುನಾವಣೆ ನಿರ್ಧಾರವಾಗಲ್ಲ ಎಂದರು.

ದೇಗುಲದ ಗೇಟ್ ಬಿದ್ದು ಮಗು ಸಾವು

ಮುಜರಾಯಿ ಇಲಾಖೆ ವಿರುದ್ಧ ಆಕ್ರೋಶ



ಮಂಡ್ಯ,ನ.12– ದೇಗುಲದ ಗೇಟ್ ಬಿದ್ದು ಐದು ವರ್ಷದ ಮಗು ದುರ್ಮರಣಕ್ಕೀಡಾಗಿರುವ ಹೃದಯ ವಿದ್ರಾವಕ ಘಟನೆ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕು ಹುಂಜನಕೆರೆ ಗ್ರಾಮದಲ್ಲಿ ಸಂಭವಿಸಿದೆ.

ಶ್ರೀರಂಗಪಟ್ಟಣ ತಾಲೂಕಿನ ಹುಂಜನಕೆರೆ ಗ್ರಾಮದ ಹೆಚ್.ಎಸ್.ಜಿಷ್ಣು(5) ಮೃತ ಮಗುವಾಗಿದ್ದು, ಹುಂಜನಕೆರೆ ಗ್ರಾಮದ ಚನ್ನಕೇಶವ ದೇಗುಲದಲ್ಲಿ ಈ ದುರ್ಘಟನೆ ಸಂಭವಿಸಿದೆ.

ನಿನ್ನೆ ಕಾರ್ತಿಕ ಸೋಮವಾರದ ಅಂಗವಾಗಿ ಕುಟುಂಬದೊಂದಿಗೆ ಗ್ರಾಮದ ಚನ್ನಕೇಶವ ದೇಗುಲಕ್ಕೆ ತೆರಳಿದ್ದಾಗ ಈ ವೇಳೆ ದೇಗುಲದ ಗೇಟ್ ಜಿಷ್ಣು ಮೇಲೆ ಬಿದ್ದು ತೀವ್ರ ಗಾಯಗಳಾಗಿವೆ. ತಕ್ಷಣ ಮಂಡ್ಯ ಮಿಮ್ಸ್ ಆಸ್ಪತ್ರೆಗೆ ಪೋಷಕರು ಮಗುವನ್ನು ದಾಖಲಿಸಿದ್ದಾರೆ. ಆದರೆ ಮಂಗಳವಾರ ಮಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಮಗು ಸಾವನ್ನಪ್ಪಿದೆ.

ಘಟನೆ ಸಂಬಂಧ ಅರಕೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮುಜರಾಯಿ ಇಲಾಖೆ ವಿರುದ್ಧ ಪೋಷಕರು, ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಮುಜರಾಯಿ ಇಲಾಖೆಗೆ ಸೇರಿದ್ದ ಚನ್ನಕೇಶವ ದೇಗುಲದ ಗೇಟ್ ಮುರಿದು ಬಹಳ ದಿನಗಳಾದರೂ ದುರಸ್ತಿ ಮಾಡದೆ ನಿರ್ಲಕ್ಷ್ಯ ತೋರಿದ್ದಾರೆ. ಮುಜರಾಯಿ ಇಲಾಖೆ ನಿರ್ಲಕ್ಷ್ಯದಿಂದ ಮಗು ಸಾವು ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಅಕ್ರಮ ಆಸ್ತಿ ಗಳಿಕೆ ಆರೋಪ

ಮೈಸೂರು ಪಾಲಿಕೆ ವಲಯ ಆಯುಕ್ತನ ಮನೆ ಮೇಲೆ ಲೋಕಾಯುಕ್ತ ದಾಳಿ





ಶ್ರೀರಂಗಪಟ್ಟಣ, ನ.12– ಅಕ್ರಮ ಆಸ್ತಿಗಳಿಕೆ ಆರೋಪದ ಹಿನ್ನೆಲೆಯಲ್ಲಿ ಮೈಸೂರು ಮಹಾನಗರ ಪಾಲಿಕೆ ವಲಯ ಆಯುಕ್ತ ಡಿ.ನಾಗೇಶ್ ಮನೆ ಮೇಲೆ ಲೋಕಾಯುಕ್ತ ದಾಳಿ ನಡೆಸಿ, ದಾಖಲೆಗಳ ಪರಿಶೀಲನೆ ನಡೆಸಿದೆ.

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ಹಾಗೂ ಶಿವಮೊಗ್ಗ ನಿವಾಸದ ಮೇಲೆ ಲೋಕಾಯುಕ್ತ ಪೊಲೀಸರು ಏಕಕಾಲಕ್ಕೆ ದಾಳಿ ನಡೆಸಿದ್ದು, ಈ ಹಿಂದೆ ಮಂಡ್ಯದ ಶ್ರೀರಂಗಪಟ್ಟಣ, ಮೈಸೂರು ಜಿಲ್ಲೆಯ ಟಿ.ನರಸೀಪುರದಲ್ಲಿ ತಹಸೀಲ್ದಾರ್ ಆಗಿದ್ದ ನಾಗೇಶ್, ಸದ್ಯ ಮೈಸೂರು ಮಹಾನಗರ ಪಾಲಿಕೆ ವಲಯ ಆಯುಕ್ತರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ತಹಸೀಲ್ದಾರ್ ಆಗಿದ್ದಾಗ ಶ್ರೀರಂಗಪಟ್ಟಣದ ಡಾಲರ್ಸ್ ಕಾಲೋನಿಯಲ್ಲಿ ನಾಗೇಶ್ ಅಪಾರ್ಟ್‌ಮೆಂಟ್ ನಿರ್ಮಿಸುತ್ತಿದ್ದರು.

ಪಟ್ಟಣದ ಡಾಲರ್ಸ್ ಕಾಲೋನಿ ನಿವಾಸ ಹಾಗೂ ಅಪಾರ್ಟ್‌ಮೆಂಟ್ ಮೇಲೆ ದಾಳಿ ನಡೆಸಿರುವ ಪೊಲೀಸರು, ದಾಖಲೆಗಳನ್ನು ಪರಿಶೀಲನೆ ನಡೆಸಿದ್ದಾರೆ. ಮೈಸೂರು ಲೋಕಾಯುಕ್ತ ಪೊಲೀಸರ ನೇತೃತ್ವದಲ್ಲಿ ಈ ಕಾರ್ಯಾಚರಣೆ ನಡೆಸಲಾಗಿದೆ.

ಮೂರನೇ ಪುಟದಿಂದ

'ಕಿಂಗ್‌ಪಿನ್' ಬಿ.ಕೆ.ಕುಮಾರ್ ಸೇವೆಯಿಂದ ವಜಾ

ಕ್ರಿಮಿನಲ್ ಕೇಸ್ ದಾಖಲಿಸಲು ಬಾಕಿ ಇರಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಪಾಲಿಕೆ ಸೇವೆಯಿಂದ ವಜಾಗೊಳಿಸಿ ಆದೇಶ ಹೊರಡಿಸಿದ್ದಾರೆ.

ಸದರಿ ಸಮಿತಿ ನೀಡಿದ ವರದಿಯಂತೆ ಎರಡೂ ಕಚೇರಿಗಳಿಂದ ಒದಗಿಸಿರುವ ವೈಯಕ್ತಿಕ ಮಾಹಿತಿಯನ್ನು ಪರಿಶೀಲಿಸಿದಾಗ ಹೆಸರು, ತಂದೆ ಹೆಸರು, ಆಧಾರ್ ಸಂಖ್ಯೆ ಎಲ್ಲವೂ ಕುಮಾರ್ ಅವರದ್ದೇ ಎಂದು ದೃಢಪಟ್ಟಿದ್ದು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಟೆಂಡರ್ ಆಹ್ವಾನಿಸುವಾಗ ಒದಗಿಸುವ ನೌಕರರು ಬೇರೊಂದು ಕಡೆ ಕರ್ತವ್ಯ ನಿರ್ವಹಿಸಬಾರದು ಎಂದು ಷರತ್ತು ವಿಧಿಸಲಾಗಿರುತ್ತದೆ. ಆದರೆ ಸದರಿ ನೌಕರ ಎರಡೂ ಕಡೆ ಕರ್ತವ್ಯ ನಿರ್ವಹಿಸಿ ವೇತನ ಪಡೆಯುವುದು ಕಾನೂನು ಉಲ್ಲಂಘನೆ. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬಹುದು ಎಂದು ಸಮಿತಿಯು ಅಭಿಪ್ರಾಯಪಟ್ಟಿದ್ದನ್ನು ಇಲ್ಲಿ ಸ್ಮರಿಸಬಹುದು.

ಮುಡಾ ನಿವೇಶನ ಹಗರಣದ ಕಿಂಗ್‌ಪಿನ್: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ದ್ವಿತೀಯ ದರ್ಜೆ ಸಹಾಯಕನಾಗಿ ಕೆಲಸ ಮಾಡುತ್ತಿದ್ದ ಬಿ.ಕೆ. ಕುಮಾರ್ ಈ ಹಿಂದಿನ ಮುಡಾ ಕಮಿಷನರ್‌ಗಳಿಗೆ ಅತ್ಯಂತ ಆತ್ಮೀಯನಾಗಿದ್ದು, ಅವರ ಆಣತಿಯಂತೆ ಕಚೇರಿ ಅಭಿಲೇಖಾಲಯ (ರೆಕಾರ್ಡ್ ರೂಂ), ವಿಶೇಷ ಭೂಸ್ವಾಧೀನಾಕಾರಿ, ಕಾರ್ಯದರ್ಶಿ ಕಚೇರಿ, ಎಲ್ಲಾ ಒಂಭತ್ತು ವಲಯ ಕಚೇರಿಗಳ ವಲಯಾಧಿಕಾರಿಗಳು, ಲೆಕ್ಕ ಶಾಖೆ, ವಿಶೇಷ ತಹಸೀಲ್ದಾರ್ ಕಚೇರಿಗಳಿಂದ ಅಗತ್ಯ ದಾಖಲೆಗಳ ಕಡತಗಳನ್ನು ನೇರವಾಗಿ ತಂದು ಕೊಡುತ್ತಿದ್ದ ಭೂಪ ಎಂದು ಮುಡಾ ಕಚೇರಿ ಮೂಲಗಳು ತಿಳಿಸಿವೆ.

ಆತ ಎರಡೂ ಕಡೆ ಕೆಲಸ ಮಾಡಲು ಪ್ರಭಾವಿ ರಾಜಕಾರಣಿಗಳು, ಅಧಿಕಾರಿಗಳು ಪ್ರಮುಖವಾಗಿ ಆತನಿಗೆ ನೆರವಾಗಿದ್ದರು. ಹಾಗಾಗಿ ಅವರ ಋಣ ತೀರಿಸಲು ಅವರು ಕೇಳಿದ ಮಾಹಿತಿ, ದಾಖಲೆಗಳನ್ನು ಒದಗಿಸುತ್ತಿದ್ದ. ಹಾಗೆಯೇ ಶೇ.50:50ರ ಅನುಪಾತದಡಿ ಪ್ರತಿಷ್ಠಿತ ಬಡಾವಣೆಗಳ ಬೆಲೆಬಾಳುವ ನಿವೇಶನಗಳನ್ನು ಅವರಿಗೆ ಮಂಜೂರು ಮಾಡಲು ಈತ ಸಹಕರಿಸುತ್ತಿದ್ದ. ಹಾಗಾಗಿ ಆತನಿಗೆ ಭಾರೀ ಕಮಾಯಿ ಬರುತ್ತಿತ್ತು. ಇಲ್ಲದಿದ್ದಲ್ಲಿ ಸಾಧಾರಣ ದ್ವಿತೀಯ ದರ್ಜೆ ಸಹಾಯಕ, ಮೈಸೂರಿನ ವಿಜಯನಗರ 2ನೇ ಹಂತದಲ್ಲಿ ಭಾರೀ ಮನೆ ನಿರ್ಮಿಸಲು ಸಾಧ್ಯವಾಗುತ್ತಿತ್ತೆ ಎಂದು ಮುಡಾದಲ್ಲೇ ಪ್ರಶ್ನಿಸುತ್ತಿದ್ದಾರೆ.

ಪ್ರಮುಖ ರಾಜಕಾರಣಿಗಳ ಜೊತೆ ಸ್ವಂತ ಊರಿಗೆ: ಸಾಮಾನ್ಯ ರೈತಾಪಿ ಕುಟುಂಬದಲ್ಲಿ ಜನಿಸಿದ ಬಿ.ಕೆ.ಕುಮಾರ್ ಪಿಯುಸಿ ತನಕ ಓದಿ, ಪಾಂಡವಪುರದ ವಾಣಿಜ್ಯ ವಿದ್ಯಾಶಾಲೆಯೊಂದರಲ್ಲಿ ಟೈಪ್‌ರೈಟಿಂಗ್ ಕಲಿತಿದ್ದ. ಅಷ್ಟರಲ್ಲಿ ಮೈಸೂರು ಮಹಾನಗರಪಾಲಿಕೆಯಲ್ಲಿ ಕೆಲಸ ಸಿಕ್ಕಿದೆ ಎಂದು ಊರಿನವರಿಗೆ ಹೇಳಿ, ಟೀಕು–ಟಾಕಾಗಿ ಮೈಸೂರಿಗೆ ಬರುತ್ತಿದ್ದ. ಕೆಲವೇ ತಿಂಗಳಲ್ಲೇ ಮೈಸೂರಿನಲ್ಲಿ ಬಾಡಿಗೆ ಮನೆ ಹಿಡಿದು ನೆಲೆಸಿ, ಹಬ್ಬ–ಹರಿದಿನಗಳಲ್ಲಿ ಸ್ವಂತ ಊರಾದ ಬೇವಿನಕುಪ್ಪೆ ಗ್ರಾಮಕ್ಕೆ ಮೈಸೂರಿನ ಪ್ರಭಾವಿ ರಾಜಕಾರಣಿಗಳೊಂದಿಗೆ ತೆರಳಿ ನಾನು ದೊಡ್ಡ ದೊಡ್ಡ ವ್ಯಕ್ತಿಗಳ ಸಂಪರ್ಕದಲ್ಲಿರುವುದನ್ನು ಶೋ ಮಾಡುತ್ತಿದ್ದ ಎಂದು ಆತನ ಜೊತೆ ಓದುತ್ತಿದ್ದ ಗೆಳೆಯರು ತಿಳಿಸುತ್ತಾರೆ. ಕೇವಲ ಐದಾರು ವರ್ಷಗಳ ನಂತರ ಆತನ ಆದಾಯ, ಐಷಾರಾಮಿ ಜೀವನ ಕಂಡು ಗ್ರಾಮಸ್ಥರೇ ನಿಬ್ಬೆರಗಾಗಿದ್ದರು. ತಾನು ಮೈಸೂರಲ್ಲಿ ಅಪಾರ ಆಸ್ತಿ ಸಂಪಾದಿಸಿದ್ದೇನೆ ಎಂದೂ ಹೇಳಿಕೊಳ್ಳುತ್ತಿದ್ದ ಎಂದು ಈಗ ಗ್ರಾಮದಲ್ಲಿ ಮಾತನಾಡಿಕೊಳ್ಳುತ್ತಿದ್ದಾರೆ.

8000 ನಿವೇಶನಗಳ ಮಾಹಿತಿ ಪಟ್ಟಿ ಇತ್ತು: ಮೈಸೂರು ನಗರದಾದ್ಯಂತ ಮುಡಾಗೆ ಸೇರಿದ ಸುಮಾರು 8000 ಖಾಲಿ ನಿವೇಶನಗಳ ಈ ಹಿಂದಿನ ಮುಡಾ ಆಯುಕ್ತ ಪಿ.ಎಸ್.ಕಾಂತರಾಜು ಹಾಗೂ ಕಾರ್ಯದರ್ಶಿ ಎಂ.ಕೆ.ಸವಿತಾ ರಕ್ಷಣೆ ಮಾಡಿದ್ದರು. ಅವರು ಸಿದ್ಧಪಡಿಸಿದ್ದ ನಿವೇಶನ ಪಟ್ಟಿಯನ್ನು ತನ್ನ ಬಳಿ ಇರಿಸಿಕೊಂಡಿದ್ದ ಕುಮಾರ್, ನಂತರ ಬಂದ ಕಮಿಷನರ್‌ಗಳಿಗೆ ಖಾಲಿ ಇರುವ ಆಯಕಟ್ಟಿನ ನಿವೇಶನಗಳ ಮಾಹಿತಿಯನ್ನು ಒದಗಿಸಿ, ಪೂರಕ ದಾಖಲೆಗಳನ್ನೂ ನೀಡುತ್ತಿದ್ದ. ಈತನ ಆ ನಿಷ್ಠೆಯಿಂದಾಗಿ ಕಮಿಷನರ್‌ಗಳು ಈತನಿಗೆ ಮುಡಾ ಕಚೇರಿಯಲ್ಲಿ ಸಂಪೂರ್ಣ ಸ್ವತಂತ್ರ ನೀಡಿ ಯಾವ ಶಾಖೆಗಾದರೂ ನೇರವಾಗಿ ಹೋಗಿ ದಾಖಲೆಗಳನ್ನು ತರುವ ಅಧಿಕಾರವನ್ನು ನೀಡಿದ್ದರು ಎಂದು ಮುಡಾ ಅಧಿಕಾರಿಗಳು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಕುಮಾರ್ ಪ್ರಭಾವಿ ಕೂಡ ಆಗಿದ್ದ: ಸಂಸ್ಥೆಯ ಉನ್ನತ ಅಧಿಕಾರಿಗಳೇ ಈತನ ಕೈಗೊಂಬೆಯಾಗಿದ್ದರಿಂದ ದ್ವಿತೀಯ ದರ್ಜೆ ಸಹಾಯಕನಾಗಿದ್ದ ಕುಮಾರ್ ಮುಡಾ ಕಚೇರಿಯಲ್ಲಿ 'ಪ್ರಭಾವಿ'ಯಾಗಿದ್ದ. ಪ್ರತಿಯೊಬ್ಬರೂ ಆತನಿಗೆ ಸ್ಪೆಷಲ್ ರೆಸ್ಪೆಕ್ಟ್ ಕೊಡುತ್ತಿದ್ದರು. ಮೈಸೂರಿನ ಬಹುತೇಕ ರಾಜಕಾರಣಿಗಳಿಗೆ ಈತ ಎರಡೂ ಕಡೆ ಕೆಲಸ ಮಾಡುತ್ತಿರುವುದು, ಮುಡಾ ಶೇ.50:50ರ ಅನುಪಾತದಡಿ ನಿವೇಶನ ಹಂಚಿಕೆಯ ಕಿಂಗ್‌ಪಿನ್ ಎಂದು ತಿಳಿದಿದ್ದರೂ ಸೊಲ್ಲೆತ್ತದೆ ತಮ್ಮ ಕೆಲಸಗಳನ್ನು ಆತನಿಂದ ಮಾಡಿಸಿಕೊಳ್ಳುತ್ತಿದ್ದರು. ಆದರೆ ಓರ್ವ ಎಂಎಲ್‌ಸಿ ಮಾತ್ರ ಆತನ ವಿರುದ್ಧ ಸರ್ಕಾರಕ್ಕೆ ಪತ್ರ ಬರೆದು ಕ್ರಮ ವಹಿಸುವಂತೆ ಮನವಿ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಕೋಟ್ಯಾಂತರ ರೂ. ಆಸ್ತಿ ಒಡೆಯ!: ಮುಡಾ ಹಾಗೂ ಪಾಲಿಕೆ ಕಚೇರಿಗಳ ಮಾಹಿತಿ ಪ್ರಕಾರ ಶೇ.50:50ರ ಅನುಪಾತದಡಿ ನಿವೇಶನ ಹಂಚಿಕೆ, ಲೆಕ್ಕ ಶಾಖೆಯಲ್ಲಿ ಕೆಲ ಬಿಲ್ಲುಗಳ ಪಾವತಿ ಸೇರಿದಂತೆ ಇನ್ನಿತರ ಪ್ರಕ್ರಿಯೆಗಳಲ್ಲಿ ನೇರವಾಗಿ ಭಾಗಿಯಾಗಿರುವ ಬಿ.ಕೆ.ಕುಮಾರ್, ಕೋಟ್ಯಾಂತರ ರೂ. ಆಸ್ತಿಯ ಒಡೆಯ ಎಂದು ಹೇಳಲಾಗುತ್ತಿದೆ. ಆದರೆ ನೋಡಲು ಸಾಮಾನ್ಯರಲ್ಲಿ ಸಾಮಾನ್ಯರಂತೆ ಕಾಣುವ ಈತ, ಮಹಾ ಪ್ರಭಾವಿ ಎಂದು ಯಾರೂ ನಂಬಲಾರರು. ಒಬ್ಬ ದ್ವಿತೀಯ ದರ್ಜೆ ಸಹಾಯಕ, ಅದರಲ್ಲೂ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುವವ ಇಷ್ಟೊಂದು ಆಸ್ತಿ ಗಳಿಸಲು ಹೇಗೆ ಸಾಧ್ಯವಾಯಿತು ಎಂಬ ಪ್ರಶ್ನೆ ಮುಡಾ ಕಚೇರಿ ವಲಯದಲ್ಲಿ ನಿತ್ಯವೂ ಕೇಳಿಬರುತ್ತಿದೆ.

ವಶದಲ್ಲಿ ಕುಮಾರ್?

2024ರ ನವೆಂಬರ್ 6ರಂದು ಕ್ರಿಮಿನಲ್ ಕೇಸ್ ದಾಖಲಿಸುವುದನ್ನು ಬಾಕಿ ಇರಿಸಿ, ಆತನನ್ನು ಕೆಲಸದಿಂದ ವಜಾಗೊಳಿಸಿ ಆದೇಶ ಹೊರಡಿಸುತ್ತಿದ್ದಂತೆ, ಕಳೆದ ನಾಲ್ಕು ದಿನಗಳ ಹಿಂದಷ್ಟೇ ಇಡಿ ಅಧಿಕಾರಿಗಳು ಮೈಸೂರಿನ ವಿಜಯನಗರ 2ನೇ ಹಂತದ ಮನೆಯಿಂದ ಕುಮಾರ್‌ನನ್ನು ಕರೆದೊಯ್ದು ವಿಚಾರಣೆ ನಡೆಸುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ. ಈ ಹಿಂದೆ ಈತನ ಕರ್ಮಕಾಂಡದ ಬಗ್ಗೆ ಓರ್ವ ಎಂಎಲ್‌ಸಿ ಹಾಗೂ ಇತರ ನೌಕರರು ಜಾರಿ ನಿರ್ದೇಶನಾಲಯಕ್ಕೆ ದೂರು ಸಲ್ಲಿಸಿದ್ದರ ಹಿನ್ನೆಲೆಯಲ್ಲಿ ಸದ್ದಿಲ್ಲದೆ ಆತನ ಬಗ್ಗೆ ಮಾಹಿತಿ ಪಡೆದಿದ್ದ ಅಧಿಕಾರಿಗಳು, ಆತ ಕೆಲಸದಿಂದ ವಜಾಗೊಂಡಿರುವುದರಿಂದ ಇದೀಗ ವಶಕ್ಕೆ ಪಡೆದು ಬೆಂಗಳೂರಿನಲ್ಲಿ ತೀವ್ರವಿಚಾರಣೆಗೆ ಒಳಪಡಿಸಿದ್ದಾರೆ ಎನ್ನಲಾಗಿದೆ

ಅರಣ್ಯ ಇಲಾಖೆಯವರ ಕಂಡರೆ ಭಯ...!

ನನಗೆ ಪತ್ರ ಬರೆಯಿರಿ. ನಾನು ನಿಮಗೆ ತೊಂದರೆ ನೀಡುವ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುವುದಾಗಿ ಭರವಸೆ ನೀಡಿ, ಆದಿವಾಸಿ ಮಕ್ಕಳ ಜೊತೆ ಹೆಜ್ಜೆ ಹಾಕಿದರು. ಅಲ್ಲದೇ ನಿಮ್ಮ ಮಕ್ಕಳಿಗೆ, ಉತ್ತಮ ಶಿಕ್ಷಣ ಕೊಡಿಸುವ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ ಎಂದು ಸಲಹೆ ನೀಡಿದರು.

ಪ್ರತ್ಯೇಕ ಅಭಿವೃದ್ಧಿ ನಿಗಮಕ್ಕೆ ಕ್ರಮ: ಆದಿವಾಸಿಗಳಿಗೆ ಪ್ರತ್ಯೇಕ ಅಭಿವೃದ್ಧಿ ನಿಗಮ ಸ್ಥಾಪನೆಗೆ ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಎಸ್‌ಟಿ ಮೀಸಲಾತಿಯಲ್ಲಿ ಆದಿವಾಸಿಗಳಿಗೆ ಒಳ ಮೀಸಲಾತಿ ನೀಡಲು ಯಾವುದೇ ಅವಕಾಶ ಇಲ್ಲ. ಮುಂದಿನ ದಿನಗಳಲ್ಲಿ ಸಮಿತಿ ರಚಿಸಿ ಅಧ್ಯಯನ ನಡೆಸಿ ಒಳ ಮೀಸಲಾತಿ ಜಾರಿಗೆ ಕೇಂದ್ರಕ್ಕೆ ಶಿಫಾರಸ್ಸು ಮಾಡಲಾಗುವುದು ಎಂದರು.

ವನ್ಯಜೀವಿ ಕಾನೂನನ್ನು ಅಧ್ಯಯನ ಮಾಡಿ ಆದಿವಾಸಿಗಳಿಗೆ ಯಾವ ರೀತಿಯ ಸೌಲಭ್ಯ ಒದಗಿಸಬಹುದು ಎಂಬುದರ ಬಗ್ಗೆ ಅಧ್ಯಯನ ನಡೆಸಿ ವರದಿ ನೀಡಲು ಓರ್ವ ಉನ್ನತ ಅಧಿಕಾರಿ ನೇಮಿಸಲಾಗುವುದು ಎಂದರು. ಕೆರೆ ಹಾಡಿಯ ರವಿ, ಹಾಡಿಯಲ್ಲಿ ಕುಡಿಯುವ ನೀರು ಮತ್ತು ಮನೆಗಳನ್ನು ಕಟ್ಟಲು ನಮಗೆ ಅವಕಾಶ ಕಲ್ಪಿಸುತ್ತಿಲ್ಲ ಎಂದು ಆದಿವಾಸಿಗಳು ಆರೋಪಿಸಿದಾಗ ಮುಖ್ಯಮಂತ್ರಿಗಳು ಅರಣ್ಯ ಇಲಾಖೆ ಅಧಿಕಾರಿಗಳು ಆದಿವಾಸಿಗಳ ಕುಡಿಯುವ ನೀರಿಗೆ ಹಾಗೂ ಮನೆ ನಿರ್ಮಾಣಕ್ಕೆ ಯಾವುದೇ ತೊಂದರೆ ನೀಡಬಾರದು. ಅರಣ್ಯ ಕಾನೂನಿಗೆ ಅನುಗುಣವಾಗಿ ಕುಡಿಯುವ ನೀರು, ಮನೆ ಕಟ್ಟಲು ಅನುವು ಮಾಡಿಕೊಡಲಾಗುವುದು ಎಂದು ತಿಳಿಸಿದರು. ಮಾಳದ ಹಾಡಿಯ ಆದಿವಾಸಿ ಸೋಮೇಶ್ ಮಾತನಾಡಿ, ಹಾಡಿಯಲ್ಲಿ ನಾವು ಮೂರರಿಂದ ನಾಲ್ಕು ಎಕರೆಯಲ್ಲಿ ವ್ಯವಸಾಯ ಮಾಡುತ್ತಾ ಅನುಭವದಲ್ಲಿ ಇದ್ದೇವೆ. ಆದರೆ ನಮಗೆ ಒಂದು ಗುಂಟೆ ಎರಡು ಗುಂಟೆ ಜಾಗ ಮಾತ್ರ ನೀಡಿದ್ದಾರೆ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿಗಳು ಈ ಬಗ್ಗೆ ವನ್ಯಜೀವಿ ಮಂಡಳಿ ಸಭೆ ಕರೆದು ಚರ್ಚಿಸಲಾಗುವುದು ಎಂದರು.

> **2020 ರಲ್ಲಿ 2 ಕೋಟಿ ವೆಚ್ಚದ ಕುಡಿಯುವ ನೀರಿನ ಕಾಮಗಾರಿಗೆ ಹಣ ಬಿಡುಗಡೆಯಾಗಿತ್ತು. ಆದರೆ ಇಲ್ಲಿ ಅರಣ್ಯ ಇಲಾಖೆಯ ಕಾನೂನಿನ ತೊಡಕಿನಿಂದಾಗಿ ಅದು ವಾಪಸ್ಸಾಗಿದೆ. ಅಲ್ಲದೇ 16 ಅಂಗನವಾಡಿ ಮಂಜೂರಾದರೂ ಸಹ ನಿರ್ಮಾಣ ಮಾಡಲು ಸಾಧ್ಯವಾಗಿಲ್ಲ. ಆದಿವಾಸಿಗಳಿಗೆ ನಿಗಮದ ಅವಶ್ಯಕತೆ ಇರುವುದರಿಂದ ಬುಡಕಟ್ಟು ಹೋರಾಟಗಾರ ಬಿರ್ಸಾ ಮುಂಡಾ ಅಭಿವೃದ್ಧಿ ನಿಗಮ ಸ್ಥಾಪಿಸಬೇಕು.**
> **– ಅನಿಲ್, ಶಾಸಕ.**

ಆದಿವಾಸಿ ಮುಖಂಡ ಕಾಳಕಲ್ಕರ್ ಮಾತನಾಡಿ, ಪ್ರೊ.ಅಸಾದಿ ಅವರ 34 ಶಿಫಾರಸ್ಸುಗಳ ವರದಿಯನ್ನು ಸಚಿವ ಸಂಪುಟದಲ್ಲಿ ಅನುಷ್ಠಾನಗೊಳಿಸಬೇಕು. ರಾಜ್ಯದ ಪಶ್ಚಿಮ ಘಟ್ಟ ವ್ಯಾಪ್ತಿಗೆ ಬರುವ 42 ತಾಲೂಕುಗಳಿಂದ 1500 ಬುಡಕಟ್ಟು ಆದಿವಾಸಿ ವಾಸ ಸ್ಥಳಗಳಲ್ಲಿ 70 ಸಾವಿರಕ್ಕೂ ಹೆಚ್ಚಿನ ಆದಿವಾಸಿ ಕುಟುಂಬಗಳು ನೆಲೆಸಿವೆ. ಸಮುದಾಯಕ್ಕೆ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಅಭಿವೃದ್ಧಿ, ಆರೋಗ್ಯ, ವಸತಿ ಮತ್ತು ಮೂಲ ಸೌಕರ್ಯಗಳು ಸರಿಯಾಗಿ ದೊರೆಯುತ್ತಿಲ್ಲ. ನಾವು ಸಾಗುವಳಿ ಹೊಂದಿರುವ ಭೂಮಿಗೆ ಪಕ್ಕಾಪೋಡು ಮಾಡಿಸಬೇಕು. ಸರ್ಕಾರಿ ಮತ್ತು ಅರೆ ಸರ್ಕಾರಿ ಸಂಸ್ಥೆಗಳಲ್ಲಿ ಉದ್ಯೋಗದ ಅಸಮಾನತೆಯ ಪ್ರಾತಿನಿಧ್ಯ ಇರುವುದರಿಂದ ರಾಜ್ಯದ ಬಜೆಟ್ ಅನುದಾನದ ಜೊತೆಗೆ ಮುಖ್ಯಮಂತ್ರಿ ನಿಧಿಯಿಂದ ಆದಿವಾಸಿ ಗಳು ನೆಲೆಸಿರುವ ಹಾಡಿಯನ್ನು ಮಾದರಿ ಹಾಡಿಯನ್ನಾಗಿ ನಿರ್ಮಾಣ ಮಾಡಬೇಕು ಎಂದು ಮುಖ್ಯಮಂತ್ರಿಗಳನ್ನು ಒತ್ತಾಯಿಸಿದರು.

ಜೋಯಿಸ್ ನಿಧನ

(ಯೋಗಾಚಾರ್ಯ ಪಟ್ಟಾಭಿ ಜೋಯಿಸ್ ಅವರ ಪುತ್ರಿ), ತಂದೆ ರಂಗಸ್ವಾಮಿ, ಪತ್ನಿ ಶೃತಿ ಜೋಯಿಸ್, ಪುತ್ರ ಸಾಂಭವ್ ಜೋಯಿಸ್, ಪುತ್ರಿ ಶ್ರಾದ್ಧಾ ಜೋಯಿಸ್ ಹಾಗೂ ಅಪಾರ ಶಿಷ್ಯ ಸಮೂಹ, ಸಂಬಂಧಿಕರು ಮತ್ತು ಸ್ನೇಹಿತರನ್ನು ಅಗಲಿದ್ದಾರೆ. ಶರತ್ ಅವರು ವಿವಿ ಮೊಹಲ್ಲಾದ ಮನೆಯಲ್ಲಿ ಪತ್ನಿ ಮತ್ತು ಪುತ್ರನೊಂದಿಗೆ ವಾಸವಾಗಿದ್ದರು. ಅವರ ಪೋಷಕರು ಗೋಕುಲಂನಲ್ಲಿ ನೆಲೆಸಿದ್ದರು. ಶರತ್ ಅವರ ಪುತ್ರಿ ಅಮೆರಿಕದಲ್ಲಿ ಉನ್ನತ ವ್ಯಾಸಂಗ ಮಾಡುತ್ತಿದ್ದಾರೆ.

ಮೈಸೂರಿನ ಹೆಬ್ಬಾಳಿನಲ್ಲಿರುವ ಇನ್‌ಫೋಸಿಸ್ ಟೆಕ್ನಾಲಜಿ ಬಳಿ ಇರುವ ತಮ್ಮ ಶರತ್ ಯೋಗ ಸೆಂಟರ್‌ನಲ್ಲಿ ಯೋಗ ತರಗತಿ ಮಾಡುತ್ತಿದ್ದ ಶರತ್ ಜೋಯಿಸ್ ಅವರು, ಈ ತಿಂಗಳ ಅಂತ್ಯದಲ್ಲಿ ಅಮೆರಿಕದಿಂದ ಮೈಸೂರಿಗೆ ಆಗಮಿಸಿ ಡಿಸೆಂಬರ್ 1ರಿಂದ ಯೋಗ ತರಬೇತಿಯನ್ನು ಆರಂಭಿಸುವ ಕಾರ್ಯಕ್ರಮ ನಿಗದಿಯಾಗಿತ್ತು. ಅಮೆರಿಕಾದಲ್ಲಿ ಪ್ರವಾಸದಲ್ಲಿದ್ದಾಗ ಶರತ್ ಅವರು ನ್ಯೂಯಾರ್ಕ್‌ನಲ್ಲಿ ಅ.12ರಿಂದ 14ರವರೆಗೆ, ಮಿಯಾಮಿಯಲ್ಲಿ ಅ.19ರಿಂದ 24ರವರೆಗೆ ಮತ್ತು ಅ.26ರಿಂದ ಅ.31ರವರೆಗೆ ಯೋಗ ತರಬೇತಿ ನಡೆಸಿದ್ದರು ಎಂದು ಕುಟುಂಬದ ಮೂಲಗಳು ತಿಳಿಸಿವೆ. ನ.16ರಿಂದ 20ರವರೆಗೆ ಟೆಕ್ಸಾಸ್‌ನ ಸ್ಯಾನ್ ಆಂಟೋನಿಯಾದಲ್ಲಿ ಕಾರ್ಯಾಗಾರ ನಿಗದಿಯಾಗಿತ್ತು.

ಅಮೆರಿಕಾಗೆ ಪತ್ನಿ, ಪುತ್ರ ಪ್ರಯಾಣ: ಶರತ್ ಅವರ ನಿಧನದ ವಾರ್ತೆ ತಲುಪುತ್ತಿದ್ದಂತೆ ಪತ್ನಿ ಶೃತಿ ಮತ್ತು ಪುತ್ರ ಸಾಂಭವ್ ಇಂದು ಮುಂಜಾನೆ ವರ್ಜಿನಿಯಾಕ್ಕೆ ಪ್ರಯಾಣ ಬೆಳೆಸಿದ್ದು, ಶುಕ್ರವಾರ (ನ.15) ಪಾರ್ಥಿವ ಶರೀರವನ್ನು ಮೈಸೂರಿಗೆ ತರುವ ಸಾಧ್ಯತೆ ಇದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಇಂದು ಮತದಾನ

ಶಿಗ್ಗಾಂವಿ ವಿಧಾನಸಭಾ ಕ್ಷೇತ್ರ: ಶಿಗ್ಗಾಂವಿ ಕ್ಷೇತ್ರದಲ್ಲಿ ಎನ್‌ಡಿಎ ಅಭ್ಯರ್ಥಿಯಾಗಿ ಭರತ್ ಬೊಮ್ಮಾಯಿ ಮತ್ತು ಕಾಂಗ್ರೆಸ್‌ನಿಂದ ಯಾಸೀರ್ ಖಾನ್ ಪಠಾಣ್ ನಡುವೆ ನೇರ ಹಣಾಹಣಿ ಇದೆ.

ಕ್ಷೇತ್ರದ ಒಟ್ಟು ಮತದಾರರ ಸಂಖ್ಯೆ– ಕ್ಷೇತ್ರದಲ್ಲಿ ಒಟ್ಟು 2,37,525 ಮತದಾರರಿದ್ದು, ಈ ಪೈಕಿ 1,21,443 ಪುರುಷರು ಮತ್ತು 1,16,076 ಮಹಿಳೆಯರು ಹಾಗೂ ಇತರ 6 ಮತದಾರರಿದ್ದಾರೆ. ಕ್ಷೇತ್ರದ ಒಟ್ಟು 241 ಮತಗಟ್ಟೆಗಳಿದ್ದು, ಇದರಲ್ಲಿ 92 ಸೂಕ್ಷ್ಮ ಮತ್ತು 141 ಸಾಮಾನ್ಯ ಮತಟ್ಟೆಗಳಿವೆ. ಎಸ್‌ಪಿ, ಎಎಸ್‌ಪಿ, 4 ಡಿವೈಎಸ್‌ಪಿ, 12 ಸಿಪಿಐ, 24 ಪಿಎಸ್‌ಐ, 68 ಎಎಸ್‌ಐ, ಸೇರಿ 716 ಪೊಲೀಸ್ ಸಿಬ್ಬಂದಿ ಜೊತೆಗೆ 4 ಕೆಎಸ್‌ಆರ್‌ಪಿ ಮತ್ತು ಡಿಆರ್ ತುಕಡಿಗಳನ್ನು ಭದ್ರತೆಗೆ ನಿಯೋಜಿಸಲಾಗಿದೆ.

ಸಂಡೂರು ವಿಧಾನಸಭಾ ಕ್ಷೇತ್ರ: ಸಂಡೂರು ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಅನ್ನಪೂರ್ಣ ತುಕಾರಾಂ ಮತ್ತು ಎನ್‌ಡಿಎ ಅಭ್ಯರ್ಥಿಯಾಗಿ ಬಂಗಾರು ಹನುಮಂತು ಕಣದಲ್ಲಿದ್ದಾರೆ. ಇಲ್ಲಿ ಒಟ್ಟು 253 ಮತಗಟ್ಟೆಗಳನ್ನು ಸ್ಥಾಪಿಸಲಾಗಿದ್ದು, 1,215 ಅಧಿಕಾರಿ ಮತ್ತು ಸಿಬ್ಬಂದಿ ನಿಯೋಜಿಸಲಾಗಿದೆ. ಈ ಕ್ಷೇತ್ರ ವ್ಯಾಪ್ತಿಯಲ್ಲಿ ಒಟ್ಟು 2,36,100 ಮತದಾರರಿದ್ದಾರೆ. ಈ ಪೈಕಿ 1,17,789 ಪುರುಷ ಮತ್ತು 1,18,282 ಮಹಿಳೆ ಹಾಗೂ 29 ತೃತೀಯ ಲಿಂಗಿ ಮತದಾರರು ಇದ್ದಾರೆ.

ವೇತನ ಸಹಿತ ರಜೆ: ಎಲ್ಲ ರಾಜ್ಯ ಸರ್ಕಾರಿ ಕಚೇರಿಗಳಿಗೆ, ಶಾಲಾ ಕಾಲೇಜುಗಳಿಗೆ (ಅನುದಾನಿತ ಶಿಕ್ಷಣ ಸಂಸ್ಥೆ ಗಳು ಒಳಗೊಂಡಂತೆ) ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳು, ಜೀವ ವಿಮಾ ನಿಗಮ, ಹಣಕಾಸು ಸಂಸ್ಥೆಗಳು ಹಾಗೂ ಇನ್ನಿತರ ಉದ್ಯಮ ಸಂಸ್ಥೆಗಳಲ್ಲಿ ಖಾಯಂ ಆಗಿ ಅಥವಾ ದಿನಗೂಲಿ ಮೇಲೆ ಕೆಲಸ ನಿರ್ವಹಿಸುತ್ತಿರುವ ಎಲ್ಲ ಅರ್ಹ ಮತದಾರರಿಗೆ ಸೀಮಿತವಾದಂತೆ ಹಾಗೂ ಮತದಾನ ಮಾಡಲು ಅನುಕೂಲವಾಗುವಂತೆ ಒಂದು ದಿನದ ವೇತನ ಸಹಿತ ರಜೆ ಮಂಜೂರು ಮಾಡಲು ಸರ್ಕಾರ ಅಧಿಸೂಚನೆ ಹೊರಡಿಸಿದೆ.

ನ್ಯಾ. ದೇಸಾಯಿ ಆಯೋಗ ಮುಡಾ ಭೇಟಿ

ಪರಿಹಾರ ಪಾವತಿಸದೆ ವಸತಿ ಬಡಾವಣೆಗಳಿಗಾಗಿ ಬಳಸಿಕೊಂಡ ಭೂಮಿಗೆ ಪರ್ಯಾಯವಾಗಿ ಶೇ. 50:50ರ ಅನುಪಾತ, ಪ್ರೋತ್ಸಾಹದಾಯಕ ಯೋಜನೆ, ಬದಲಿಯಾಗಿ ನೀಡಿರುವ ನಿವೇಶನಗಳು ಹಾಗೂ ಹರಾಜು ಮೂಲಕ ಮಾರಾಟ ಮಾಡಿರುವ ನಿವೇಶನಗಳ ಕುರಿತಂತೆ ದಾಖಲೆಗಳನ್ನು ತರಿಸಿಕೊಂಡು, ಸಂಬಂಧಪಟ್ಟ ಅಧಿಕಾರಿಗಳಿಂದ ಮಾಹಿತಿ ಪಡೆದರು.

ಮಧ್ಯಾಹ್ನ 3.30 ಗಂಟೆಗೆ ನಜರ್‌ಬಾದ್ ಸರ್ಕಾರಿ ಅತಿಥಿ ಗೃಹದಲ್ಲಿ ಊಟ ಸೇವಿಸಿದ ಬಳಿಕ ಆಯೋಗದ ಅಧಿಕಾರಿಗಳು, ಸಂಜೆ 4.15 ಗಂಟೆಗೆ ಮತ್ತೆ ಮುಡಾ ಕಚೇರಿಯಲ್ಲಿ ದಾಖಲೆಗಳನ್ನು ಪರಿಶೀಲಿಸಿದರು. ಈ ವೇಳೆ ಹಿಂದಿನ ಮುಡಾ ಆಯುಕ್ತರು, ಅಧ್ಯಕ್ಷರು, ಸಾಮಾನ್ಯ ಸಭೆಯ ಸದಸ್ಯರು, ವಿಶೇಷ ಭೂ ಸ್ವಾಧೀನಾಧಿಕಾರಿಗಳು, ಕಾರ್ಯದರ್ಶಿಗಳು, ವಿಶೇಷ ತಹಸೀಲ್ದಾರ್‌ಗಳು, ಹಳೆಯ ಅಧಿಕಾರಿಗಳು, ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್‌ಗಳು, ಸರ್ವೆಯರ್‌ಗಳು ಹಾಗೂ ಆಯುಕ್ತರು, ಅಧ್ಯಕ್ಷರು, ಕಾರ್ಯದರ್ಶಿಗಳು, ವಿಶೇಷ ಭೂಸ್ವಾಧೀನಾಧಿಕಾರಿಗಳ ಆಪ್ತ ಸಹಾಯಕರುಗಳು ಮುಡಾ ಕಚೇರಿಯ ಅಭಿಲೇಖಾಲಯ (ರೆಕಾರ್ಡ್ ರೂಂ)ದಿಂದ ತರಿಸಿಕೊಂಡಿರುವ ನಿವೇಶನಗಳ ಹಂಚಿಕೆ ನಮೂನೆಗಳು, ಸೆಕ್ಯೂರಿಟಿ ಬಾಂಡ್‌ಗಳು ಹಾಗೂ ಕಡತಗಳಲ್ಲಿ ನಿವೇಶನ ಹಂಚಿಕೆ ಮಾಡಬಹುದೆಂದು ಶಿಫಾರಸು ಮಾಡಿರುವ ಅಧಿಕಾರಿಗಳ ಹೆಸರು, ಅವರ ಮೊಬೈಲ್ ಸಂಖ್ಯೆಗಳ ಸಮೇತ ಮಾಹಿತಿ ಪಡೆದುಕೊಂಡರು. ಈ ಸಂದರ್ಭ ಕಚೇರಿಯಲ್ಲಿ ಲಭ್ಯವಿದ್ದ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದು ವಿಚಾರಣೆ ನಡೆಸಿದ ಆಯೋಗವು, ಲಭ್ಯ ಮಾಹಿತಿಗಳೊಂದಿಗೆ ಹೇಳಿಕೆಗಳನ್ನು ದಾಖಲಿಸಿಕೊಂಡಿತು. ಅವಶ್ಯವಿದ್ದಾಗ ಖುದ್ದು ಹಾಜರಾಗಿ ದಾಖಲೆಗಳನ್ನು ಒದಗಿಸಿ, ಶೇ.50:50ರ ನಿವೇಶನ ಹಂಚಿಕೆಯಲ್ಲಿ ನಡೆದಿರುವ ಭ್ರಷ್ಟಾಚಾರದ ಸಂಬಂಧ ಸಮಜಾಯಿಷಿ ನೀಡಬೇಕೆಂದು ನ್ಯಾ. ದೇಸಾಯಿ ಆಯೋಗ ತಾಕೀತು ಮಾಡಿದೆ. ಸಂಜೆ ವೇಳೆಗೆ ಆಯೋಗ ಬೆಂಗಳೂರಿಗೆ ತೆರಳಿತು. ಆಯೋಗ ಭೇಟಿ ನೀಡಿದ ನಂತರ ಮುಡಾ ಕಚೇರಿ ಗೇಟ್ ಮತ್ತು ಪ್ರಮುಖ ದ್ವಾರಗಳನ್ನು ಬಂದ್ ಮಾಡಿಸಿ ಅಧಿಕಾರಿಗಳು, ಸಿಬ್ಬಂದಿಗಳನ್ನು ಹೊರತುಪಡಿಸಿ ಸಾರ್ವಜನಿಕರಿಗೆ ಪ್ರವೇಶ ನಿರ್ಬಂಧಿಸಲಾಗಿತ್ತು. ಸ್ಥಳದಲ್ಲಿ ವ್ಯಾಪಕ ಪೊಲೀಸ್ ಬಂದೋಬಸ್ತ್ ಮಾಡಿ, ತನಿಖೆಗೆ ಅನುವು ಮಾಡಿ ಕೊಡಲಾಗಿತ್ತು. ಆಯೋಗದ ಸದಸ್ಯರು ಬೆಂಗಳೂರಿಗೆ ತೆರಳಿದ ನಂತರ ಮನೆಗೆ ಹಿಂದಿರುಗಿದರು. ಆದರೆ ಮಾಧ್ಯಮದವರ ಭೇಟಿಗೆ, ಪ್ರತಿಕ್ರಿಯೆ ನೀಡಲು ನ್ಯಾ. ದೇಸಾಯಿ ನಿರಾಕರಿಸಿದರು.

ಉಚಿತ ಹೊಲಿಗೆ ಯಂತ್ರ, ಲ್ಯಾಪ್‌ಟಾಪ್ ವಿತರಣೆ

ಮೈಸೂರು, ನ.12– ಮೈಸೂರು ಮಹಾನಗರ ಪಾಲಿಕೆಯ ವತಿಯಿಂದ 2023–24 ಹಾಗೂ 2024–25 ನೇ ಸಾಲಿನ ಶೇ.24.10 ಪರಿಶಿಷ್ಟ ಜಾತಿ, ಪಂಗಡ ಹಾಗೂ ಪೌರಕಾರ್ಮಿಕರ ಫಲಾನುಭವಿಗಳು, ಶೇ 7.25 ಇತರೆ ಹಿಂದುಳಿದ ಬಡಜನರಿಗೆ ಮತ್ತು ಶೇ.5 ರಷ್ಟು ವಿಶೇಷ ಚೇತನ ಅಭ್ಯರ್ಥಿಗಳಿಗೆ ಉಚಿತವಾಗಿ ಹೊಲಿಗೆ ಯಂತ್ರ, ಲ್ಯಾಪ್‌ಟಾಪ್,(ಬಿ.ಇ. ವಿದ್ಯಾರ್ಥಿಗಳಿಗೆ ಮಾತ್ರ) ವಿಶೇಷ ಚೇತನರಿಗೆ ಸ್ಕೂಟರ್ ಮತ್ತು ಸ್ಮಾರ್ಟ್ ವಾಕಿಂಗ್ ಸ್ಟಿಕ್‌ಗಳನ್ನು ವಿತರಿಸಲಾಗುವುದು. ವಿಶೇಷವಾಗಿ ಕಲಾವಿದರಿಗೆ ಪ್ರೋತ್ಸಾಹ ಧನವನ್ನು ನೀಡಲಾಗುತ್ತಿದ್ದು, ಆಸಕ್ತರು ಮೈಸೂರು ಮಹಾನಗರ ಪಾಲಿಕೆಯ ವಲಯ ಕಛೇರಿಗಳಲ್ಲಿ ದೊರೆಯುವ ಅರ್ಜಿಗಳನ್ನು ಉಚಿತವಾಗಿ ಪಡೆದು ಸಲ್ಲಿಸಬಹುದು. ಸೌಲಭ್ಯಗಳಿಗೆ ಅನುಗುಣವಾಗಿ ಅಗತ್ಯ ದಾಖಲಾತಿಗಳನ್ನು ಮತ್ತು ಹೆಚ್ಚಿನ ಮಾಹಿತಿಗಾಗಿ ಮೈಸೂರು ಮಹಾನಗರ ಪಾಲಿಕೆಯ ಎಲ್ಲಾ 09 ವಲಯ ಕಚೇರಿಗಳನ್ನು ಸಂಪರ್ಕಿಸಬಹುದು ಎಂದು ಮೈಸೂರು ಮಹಾನಗರ ಪಾಲಿಕೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

2008ರ ನಂತರ ಶರತ್ ಜೋಯಿಸ್ ಅಷ್ಟಾಂಗ ಯೋಗ ಸಂಸ್ಥೆಯ ಮುಖ್ಯಸ್ಥರಾದರು



ತಮ್ಮ ತಾತ ಕೆ.ಪಟ್ಟಾಭಿ ಜೋಯಿಸ್ ಅವರೊಂದಿಗೆ ಶರತ್ ಜೋಯಿಸ್.




ವಿಶ್ವ ಖ್ಯಾತ ಪಾಪ್ ಗಾಯಕಿ ಮಡೋನಾ ಅವರೊಂದಿಗೆ ಶರತ್. ಮಡೋನಾ ಅವರು ಪಟ್ಟಾಭಿ ಜೋಯಿಸ್ ಅವರಿಂದ ಅಷ್ಟಾಂಗ ಯೋಗದ ಪ್ರಭಾವಕ್ಕೆ ಒಳಗಾಗಿದ್ದರು.

ಮೈಸೂರು: ಶರತ್ ಜೋಯಿಸ್ ಅವರು ತಮ್ಮ ತಾತನ ಅನಾರೋಗ್ಯದ ನಂತರ ವಿಶ್ವ ಪ್ರಸಿದ್ಧ ಅಷ್ಟಾಂಗ ಯೋಗ ಸಂಸ್ಥೆಯನ್ನು 2008ರಿಂದ ನಿರ್ವಹಿಸುತ್ತಿದ್ದರು. ಇವರ ತಾತ ಯೋಗಗುರು ಕೆ.ಪಟ್ಟಾಭಿ ಜೋಯಿಸ್ ಅವರು 2009ರ ಮೇ 18ರಂದು, ತಮ್ಮ 93 ವಯಸ್ಸಿನಲ್ಲಿ ಇಹಲೋಕ ತ್ಯಜಿಸಿದರು. ಕೃಷ್ಣ ಪಟ್ಟಾಭಿ ಜೋಯಿಸ್ ಅಷ್ಟಾಂಗ ಯೋಗ ಇನ್‌ಸ್ಟಿಟ್ಯೂಟ್ (ಕೆಪಿಜೆಎವೈಐ) ಅನ್ನು, ತಮ್ಮ ತಾತ ಅನಾರೋಗ್ಯಕ್ಕೆ ತುತ್ತಾದ ನಂತರ ಶರತ್ ಮುನ್ನಡೆಸುತ್ತಿದ್ದರು. ತಾತನವರ ಗರಡಿಯಲ್ಲಿ ಪಳಗಿದ್ದ ಶರತ್, ನಂತರದ ದಿನಗಳಲ್ಲಿ ಅಷ್ಟಾಂಗ ಯೋಗದ ಬಗ್ಗೆ ವಿಶ್ವ ಪ್ರಸಿದ್ಧಿಯಾಗಿದ್ದನ್ನು ಇಲ್ಲಿ ಸ್ಮರಿಸಬಹುದು.

ಅಷ್ಟಾಂಗ ಯೋಗ, ವಿಶ್ವದಾದ್ಯಂತ ಮಲ್ಟಿಮಿಲಿಯನ್ ಡಾಲರ್ ಉದ್ಯಮವಾಗಿದೆ. ಈ ವಿಧಾನದ ಯೋಗವನ್ನು ಮೈಸೂರಿನಲ್ಲಿ ಅನುಸರಿಸಿ ಪ್ರಪಂಚದಾದ್ಯಂತ ಸಹಸ್ರಾರು ವಿದ್ಯಾರ್ಥಿಗಳಿಗೆ ಯೋಗ ತರಬೇತಿ ನೀಡುತ್ತಿದ್ದ ಶರತ್ ಅವರು, ಪ್ರತಿ ವಿದ್ಯಾರ್ಥಿಗೂ ವೈಯಕ್ತಿಕ ಆಸಕ್ತಿ ಮೂಲಕ ಯೋಗ ಹೇಳಿಕೊಡುತ್ತಿದ್ದು, ಅವರ ಪ್ರಸಿದ್ಧಿಗೆ ಕಾರಣವಾಗಿತ್ತು. ಆಧುನಿಕ ಯೋಗದ ಪಿತಾಮಹ ಎಂದೆನಿಸಿದ್ದ ಟಿ.ಕೃಷ್ಣಮಾಚಾರ್ಯ ಅವರ ವಿದ್ಯಾರ್ಥಿಯಾಗಿದ್ದ ಪಟ್ಟಾಭಿ ಜೋಯಿಸ್ ಅವರು ಕಟ್ಟಿ ಬೆಳೆಸಿದ್ದ ಸಂಸ್ಥೆಯನ್ನು ಶರತ್ ಮತ್ತಷ್ಟು ವಿಶ್ವಮಾನ್ಯಗೊಳಿಸಿದ್ದು ಎಲ್ಲರ ಮೆಚ್ಚುಗೆಗೆ ಕಾರಣವಾಗಿತ್ತು.

ಸುಮಾರು 5 ಸಾವಿರಕ್ಕೂ ಹೆಚ್ಚು ಅರ್ಜಿಗಳು ಪ್ರತಿ ತಿಂಗಳು ಇವರ ತರಗತಿಗೆ ಸೇರಲು ಬರುತ್ತಿದ್ದವು. ಸುಮಾರು 350ರಿಂದ 400 ಮಂದಿ ವಿದ್ಯಾರ್ಥಿಗಳಿಗೆ ಸಂಸ್ಥೆಯಲ್ಲಿ ಅವಕಾಶ ಕಲ್ಪಿಸಿಕೊಡುತ್ತಿದ್ದ ಶರತ್, ಪ್ರತಿ ದಿನ ನಿರಂತರವಾಗಿ 7ರಿಂದ 8 ಗಂಟೆಗಳ ಕಾಲ ಕಾರ್ಯನಿರ್ವಹಿಸುತ್ತಿದ್ದರು. ಮುಂಜಾನೆ 1 ಗಂಟೆಗೇ ಎದ್ದು ತಮ್ಮ ನಿತ್ಯ ಕರ್ಮ ಮುಗಿಸಿ ಮುಂಜಾನೆ 3.30 ಗಂಟೆಗೆ ಮೊದಲ ತಂಡದ ತರಬೇತಿ ಆರಂಭಿಸುತ್ತಿದ್ದ ಅವರು, ಮೈಸೂರಿನ ಗೋಕುಲಂನಲ್ಲಿ ತಮ್ಮ ತಂದೆ-ತಾಯಿಯ ಮಾರ್ಗದರ್ಶನದಲ್ಲಿ ಕಾರ್ಯನಿರತರಾಗಿದ್ದರು. ಇವರ ಯೋಗ ತರಬೇತಿ, ಚಟುವಟಿಕೆಯಿಂದ ಆಟೋ, ಟ್ಯಾಕ್ಸಿ ಚಾಲಕರು ಹಾಗೂ ಸಣ್ಣ ಪುಟ್ಟ ಅಂಗಡಿಯವರು ಆರ್ಥಿಕವಾಗಿ ಅನುಕೂಲ ಪಡೆದುಕೊಳ್ಳಲು ಸಾಧ್ಯವಾಯಿತು ಎಂದು ಸ್ಥಳೀಯ ನಿವಾಸಿಗಳು ತಿಳಿಸಿದ್ದಾರೆ.





ಅಮೆರಿಕಾದ ಮಾಜಿ ಅಧ್ಯಕ್ಷ ಬಿಲ್ ಕ್ಲಿಂಟನ್ ಅವರ ಪತ್ನಿ ಹಾಗೂ ಮಾಜಿ ಅಮೆರಿಕ ಸ್ಟೇಟ್ ಸೆಕ್ರೆಟರಿ ಹಿಲರಿ ಕ್ಲಿಂಟನ್ ಕೂಡ ಒತ್ತಡ ನಿರ್ವಹಣೆ, ಉಸಿರಾಟದ ಸಮಸ್ಯೆ ನಿವಾರಣೆಗೆ ಶರತ್ ಜೋಯಿಸ್ ಮೂಲಕ ಅಷ್ಟಾಂಗ ಯೋಗದ ಮೊರೆ ಹೋಗಿದ್ದರು.



ಶರತ್ ಜೋಯಿಸ್ ನಡೆಸುತ್ತಿದ್ದ ಯೋಗ ತರಗತಿಗಳ ಚಿತ್ರಣ.


ಶರತ್ ಅವರು ಪ್ರಪಂಚದ ಅತ್ಯುತ್ತಮ ಯೋಗ ಟೀಚರ್ ಎನಿಸಿದ್ದರು. ಇವರು ಯೋಗ ಕ್ಷೇತ್ರಕ್ಕೆ ಇದ್ದ ವಿಶ್ವ ಮನ್ನಣೆ ಹೆಚ್ಚಿಸಿದ್ದಲ್ಲದೆ, ಕಡಿಮೆಯ ಅವಧಿಯ ಶಿಕ್ಷಕರ ತರಬೇತಿ ಪ್ರಮಾಣ ಪತ್ರ (ಟಿಟಿಸಿಎಸ್) ವನ್ನು ಹಲವು ಖಾಸಗಿ ಯೋಗ ತರಬೇತಿ ಸಂಸ್ಥೆಗಳಿಗೆ ಕಲ್ಪಿಸಿಕೊಡುತ್ತಿದ್ದರು.

ಪ್ರವಾಸೋದ್ಯಮಕ್ಕೆ ಒತ್ತಾಸೆ: ಉತ್ತಮ ಆರೋಗ್ಯವಂತರಾಗಿರಲು ಅಷ್ಟಾಂಗ ಯೋಗವನ್ನು ಎಲ್ಲಾ ವಯಸ್ಸಿನವರು ಮಾಡಬೇಕು ಎಂದು ಸಲಹೆ ನೀಡುತ್ತಿದ್ದರು. ವಿಶೇಷವಾಗಿ ಉಸಿರಾಟದ ತೊಂದರೆ ಇರುವವರು, ಅಲರ್ಜಿ ಮತ್ತು ನಾನಾ ರೀತಿಯ ಮಾಲಿನ್ಯದಿಂದ ತೊಂದರೆಗೊಳಗಾಗುವವರು ಈ ಅಭ್ಯಾಸವನ್ನು ಮಾಡಲೇಬೇಕೆಂಬುದು ಅವರ ಒತ್ತಾಸೆಯಾಗಿತ್ತು. ಮೈಸೂರಿನಲ್ಲಿ ಯೋಗ ಕಲಿಯಲು ಬರುತ್ತಿದ್ದ ವಿದೇಶಿಗರನ್ನು ಸ್ಥಳೀಯ ಪ್ರವಾಸಿ ಕೇಂದ್ರಗಳಿಗೆ ಭೇಟಿ ನೀಡುವಂತೆ ಪ್ರೇರೇಪಿಸಿ, ಶರತ್ ಜೋಯಿಸ್ ಅವರು ಆ ಮೂಲಕ ಮೈಸೂರಿನ ಪ್ರವಾಸೋದ್ಯಮದ ಸರ್ವಾಂಗೀಣ ಬೆಳವಣಿಗೆಗೂ ಕಾರಣವಾಗಿದ್ದರು. ಆಫ್ರಿಕಾ, ಏಷ್ಯಾ, ಯುರೋಪ್, ಆಸ್ಟ್ರೇಲಿಯಾ, ನಾರ್ತ್ ಅಮೆರಿಕ, ಸೌತ್ ಅಮೆರಿಕ ಸೇರಿದಂತೆ ವಿಶ್ವದ ಹಲವು ದೇಶಗಳಲ್ಲಿ ಅಷ್ಟಾಂಗ ಯೋಗ ಪ್ರಸಿದ್ಧಿಗೆ ಶರತ್ ಅವರು ಕಾರಣವಾಗಿದ್ದರು ಎನ್ನುವುದು ಹೆಮ್ಮೆಯ ವಿಷಯ.

ನಿರಂತರ ಪರಿಶ್ರಮದಲ್ಲಿ ನಂಬಿಕೆ ಇಟ್ಟಿದ್ದರು

ಒಬ್ಬ ಪೂರ್ಣ ಪ್ರಮಾಣದ ಯೋಗ ಶಿಕ್ಷಕನಾಗ ಬೇಕಾದರೆ ಅದಕ್ಕೆ ಅವಿರತ ಯೋಗಾಭ್ಯಾಸ ಮತ್ತು ಪರಿಶ್ರಮ ಇರಬೇಕೆಂಬುದರಲ್ಲಿ ನಂಬಿಕೆ ಇಟ್ಟಿದ್ದ ಶರತ್, ಹಲವು ಕಾರ್ಯಕ್ರಮಗಳಲ್ಲಿ ಯೋಗದ ಬಗ್ಗೆ ಕಾರ್ಯಾಗಾರ, ತರಬೇತಿಯನ್ನೂ ನೀಡಿ ಪ್ರಸಿದ್ಧಿಯಾಗಿದ್ದರು. ಅವರು ನಾಲ್ಕನೇ ವಯಸ್ಸಿನಲ್ಲಿದ್ದಾಗ ಟಾನ್ಸಿಲಿಟಿಸ್‌ನಿಂದ ಬಳಲುತ್ತಿದ್ದರಲ್ಲದೆ 11ನೇ ವಯಸ್ಸಿಗೆ ರುಮಾಟಿಕ್ ಜ್ವರದಿಂದಾಗಿ ಹಾಸಿಗೆ ಹಿಡಿದಿದ್ದರು. ಅಲ್ಲದೆ, 13ನೇ ವಯಸ್ಸಿಗೆ ಅವರು ಹರ್ನಿಯಾದಿಂದಾಗಿ ಕೀಲುಗಳು ಮತ್ತು ಹೃದಯದ ಬಾಧೆಗೂ ಒಳಗಾಗಿದ್ದರಂತೆ.

ಶರತ್ ನಿಧನಕ್ಕೆ ಯೋಗಾಸಕ್ತರ ಕಂಬನಿ



ಯೋಗ ಶಿಕ್ಷಕ ಶರತ್ ಜೋಯಿಸ್

ಮೈಸೂರು,ನ12(ಆರ್‌ಕೆ)- ಅಷ್ಟಾಂಗ ಯೋಗಗುರು ಶರತ್ ಜೋಯಿಸ್ ಅವರ ನಿಧನಕ್ಕೆ ಮೈಸೂರು, ಕರ್ನಾಟಕ ರಾಜ್ಯವೂ ಸೇರಿದಂತೆ ವಿಶ್ವದಾದ್ಯಂತ ಯೋಗಾಸಕ್ತರು ಹಾಗೂ ಯೋಗ ತರಬೇತಿ ಸಂಸ್ಥೆಯ ಸಿಬ್ಬಂದಿ ತೀವ್ರ ಕಂಬನಿ ಮಿಡಿದಿದ್ದಾರೆ.

ನಿಧನದ ಸುದ್ದಿ ತಿಳಿಯುತ್ತಿದ್ದಂತೆಯೇ ಮೈಸೂರಿನ ಗೋಕುಲಂ ಮತ್ತು ವಿವಿ ಮೊಹಲ್ಲಾ ನಿವಾಸದ ಬಳಿ ಸಂಬಂಧಿಕರು, ಯೋಗ ಶಿಕ್ಷಕರು, ವಿದ್ಯಾರ್ಥಿಗಳು, ಅಪಾರ ಸ್ನೇಹಿತರು ಧಾವಿಸಿ ತೀವ್ರ ಶೋಕ ವ್ಯಕ್ತಪಡಿಸುತ್ತಿದ್ದರು. ಮೈಸೂರಿನ ಫೆಡರೇಷನ್ ಆಫ್ ಯೋಗ ಕಾರ್ಯದರ್ಶಿ ಹಾಗೂ ಪರಮಹಂಸ ಯೋಗ ಮಹಾವಿದ್ಯಾಲಯದ ಅಧ್ಯಕ್ಷರಾದ ಶಿವಪ್ರಕಾಶ್ ಗುರೂಜಿ ಅವರು ಶರತ್ ಅವರ ನಿಧನಕ್ಕೆ ಅತೀವ ಸಂತಾಪ ಸೂಚಿಸಿದ್ದಾರೆ. ಶರತ್ ಜೋಯಿಸ್ ಅವರ ನಿಧನ ಯೋಗ ಸಮುದಾಯಕ್ಕೆ ಭರಿಸಲಾಗದ ನಷ್ಟ. ಅಷ್ಟಾಂಗ ಯೋಗದ ಮೂಲಕ ಪ್ರಪಂಚದಾದ್ಯಂತ ಲಕ್ಷಾಂತರ ಮಂದಿ ಯೋಗಾಸಕ್ತರನ್ನು ಸಂಪಾದಿಸಿದ್ದ ಅವರು ವಿಶ್ವಕ್ಕೆ ಯೋಗ ಮಹತ್ವ ಸಾರಿದ್ದರು. ಅವರ ಆತ್ಮಕ್ಕೆ ದೇವರು ಚಿರಶಾಂತಿ ನೀಡಲಿ. ನಿಧನದ ದುಃಖವನ್ನು ಭರಿಸುವ ಶಕ್ತಿಯನ್ನು ಕುಟುಂಬದವರಿಗೆ ಭಗವಂತ ನೀಡಲಿ ಎಂದು ಶಿವಪ್ರಕಾಶ್ ಗುರೂಜಿ ತಿಳಿಸಿದರು.

ಜಿಎಸ್‌ಎಸ್ ಯೋಗಿಕ್ ಫೌಂಡೇಷನ್‌ನ ಡಿ.ಶ್ರೀಹರಿ ಅವರು ಶರತ್ ಅವರ ನಿಧನದ ವಾರ್ತೆ ನಮಗೆ ಆಘಾತವನ್ನುಂಟು ಮಾಡಿದೆ. ಅತೀ ಚಿಕ್ಕ ವಯಸ್ಸಿನಲ್ಲೇ ಅವರು ಇಹಲೋಕ ತ್ಯಜಿಸಿರುವುದು ಇಡೀ ವಿಶ್ವಕ್ಕೆ ತುಂಬಲಾರದ ನಷ್ಟ. ಅವರ ತಾತ ಪಟ್ಟಾಭಿ ಜೋಯಿಸ್ ಅವರು ಯೋಗವನ್ನು ವಿಶ್ವ ಪ್ರಸಿದ್ಧಿಪಡಿಸಿದ್ದರಲ್ಲದೆ, ಇವರ ತಾತ ಅವರ ಯೋಗ ತರಬೇತಿಯನ್ನು ಮುನ್ನಡೆಸಿಕೊಂಡು ಬಂದಿದ್ದರು. ಅವರ ಆತ್ಮಕ್ಕೆ ಚಿರಶಾಂತಿ ಲಭಿಸಲಿ ಎಂದು ಹೇಳಿದರು.

ಚೆಲುವಾಂಬ ಆಸ್ಪತ್ರೆಯಲ್ಲಿ ಮಮತೆ ತೊಟ್ಟಿಲು ಕಾರ್ಯಕ್ರಮ



ಚೆಲುವಾಂಬ ಆಸ್ಪತ್ರೆಯಲ್ಲಿ ಮಮತೆಯ ತೊಟ್ಟಿಲು ಅನಾವರಣಗೊಳಿಸಲಾಯಿತು.

ಮೈಸೂರು, ನ.12(ಜಿಎ)-ಅಂತರರಾಷ್ಟ್ರೀಯ ದತ್ತು ಮಾಸಾಚರಣೆಯ ಅಂಗವಾಗಿ ಚೆಲುವಾಂಬ ಆಸ್ಪತ್ರೆ ಆವರಣದಲ್ಲಿ ಮಕ್ಕಳ ರಕ್ಷಣಾ ನಿರ್ದೇಶನಾಲಯ, ಶ್ರೀ ಛಾಯಾದೇವಿ ವಿಶೇಷ ದತ್ತು ಕೇಂದ್ರ ಮತ್ತು ಶ್ರೀ ಛಾಯಾದೇವಿ ಶಿಕ್ಷಣ ಮಹಾವಿದ್ಯಾಲಯ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಮತೆಯ ತೊಟ್ಟಿಲು ಅನಾವರಣಗೊಳಿಸಲಾಯಿತು.

ಈ ವೇಳೆ ಶಾಸಕ ಕೆ.ಹರೀಶ್ ಗೌಡ ಮಾತನಾಡಿ, ತಂದೆ-ತಾಯಿಯಿಂದ ಬೇರ್ಪಟ್ಟ ಮಕ್ಕಳನ್ನು ಛಾಯಾದೇವಿ ಸಂಸ್ಥೆಯಲ್ಲಿ ಪೋಷಿಸಿ, ಅವರಿಗೆ ಉತ್ತಮ ಜೀವನ ರೂಪಿಸುವಲ್ಲಿ ಸಾಕಷ್ಟು ಶ್ರಮಿಸುತ್ತಿದ್ದಾರೆ. ಇತ್ತೀಚೆಗೆ ತಿ.ನರಸೀಪುರ ಬಳಿ ಬಿಟ್ಟು ಹೋದ ಮಗುವಿಗೆ ಐಸಿಯುನಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಎಂದರು.

ಪ್ರತಿ ನಿತ್ಯ ಸಾಮಾಜಿಕ ಜಾಲತಾಣಗಳಲ್ಲಿ ಈ ರೀತಿ ಆಶ್ರಯವಿಲ್ಲದ ಮಕ್ಕಳನ್ನು ಪೋಷಿಸುತ್ತಿರುವ ಸಾಕಷ್ಟು ಸಂಸ್ಥೆಗಳು ತಮ್ಮ ಕಾರ್ಯಗಳ ಬಗ್ಗೆ ಹಂಚಿ, ಪ್ರಚಾರ ಪಡೆದುಕೊಳ್ಳುತ್ತಿದ್ದಾರೆ. ಆದರೆ, ಕೆಲವು ಸಂಸ್ಥೆಗಳು ಎಲೆಮರೆಕಾಯಿಯಂತೆ ತಮ್ಮ ಸೇವೆ ಮಾಡುತ್ತಿವೆ. ಅವರಿಗೆ ಸರ್ಕಾರದ ಸಹಕಾರವಿರಲಿವೆ. ಮಕ್ಕಳ ರಕ್ಷಣೆ ನಮ್ಮೆಲ್ಲರ ಹೊಣೆ, ಕಾನೂನು ಬದ್ಧ ದತ್ತುಗೆ ಮುಂದೆ ಬನ್ನಿ, ಸಂಕಷ್ಟದಲ್ಲಿರುವ ಮಕ್ಕಳ ಸಹಾಯವಾಣಿ 1098 ಸಂಖ್ಯೆಯನ್ನು ಸಂಪರ್ಕಿಸಿ ಎಂದು ತಿಳಿಸಿದರು.

ಮಾಜಿ ಮೇಯರ್ ಸಂದೇಶ್ ಸ್ವಾಮಿ ಮಾತನಾಡಿ, ಸಮಾಜದ ವಿವಿಧ ಕಾರಣದಿಂದ ಈ ರೀತಿಯ ತೊಟ್ಟಿಲುಗಳು ಸ್ಥಾಪನೆಯಾಗುತ್ತಿವೆ. ಇದರಿಂದ ಮಕ್ಕಳು ಬೀದಿ ಪಾಲಾಗುವುದನ್ನು ತಪ್ಪಿಸುತ್ತಿದೆ. ಈ ರೀತಿ ರಕ್ಷಣೆಯಾಗಿ ಪೋಷಣೆಗೊಂಡ ಮಕ್ಕಳು ಇಂದು ದೇಶ ವಿದೇಶಗಳಿಗೆ ತಲುಪಿ, ಉತ್ತಮ ಜೀವನ ಪಡೆದುಕೊಂಡಿದ್ದಾರೆ ಎಂದರು. ಕಾರ್ಯಕ್ರಮದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ, ಕೆಆರ್ ಆಸ್ಪತ್ರೆ ಡೀನ್ ದಾಕ್ಷಾಯಿಣಿ, ಛಾಯಾದೇವಿ ಸಂಸ್ಥೆಯ ಮುಖ್ಯಸ್ಥ ಭಾನು ಪ್ರಕಾಶ್ ಮತ್ತಿತರರು ಉಪಸ್ಥಿತರಿದ್ದರು.

ಜಮೀನು ಸ್ವಾಧೀನ ಪ್ರಕರಣ ಕೋರ್ಟಿನಲ್ಲಿದ್ದರೂ ಕಾಮಗಾರಿ

ಪ್ರಶ್ನಿಸಿದ ರೈತರಿಗೆ ಪೊಲೀಸರ ಮೂಲಕ ಬೆದರಿಕೆ

ಮೈಸೂರು, ನ.12(ಜಿಎ)-ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು ಕಡಕೊಳದಲ್ಲಿ ಸ್ವಾಧೀನ ಪಡಿಸಿಕೊಂಡಿರುವ ಜಮೀನಿನ ವಿವಾದದ ಕುರಿತು ಹೈಕೋರ್ಟ್‌ನಲ್ಲಿ ಪ್ರಕರಣವಿದ್ದರೂ ಕಾನೂನು ಉಲ್ಲಂಘಿಸಿ, ಕಾಮಗಾರಿ ನಡೆಸುತ್ತಿದ್ದು, ಇದನ್ನು ಪ್ರಶ್ನಿಸುವ ರೈತರಿಗೆ ಪೊಲೀಸರನ್ನು ಬಳಸಿಕೊಂಡು ಬೆದರಿಕೆ ಹಾಕುತ್ತಿದ್ದಾರೆ ಎಂದು ಕಾಳಿ ಬೀರೇಶ್ವರ ರೈತ ಹೋರಾಟ ಸಮಿತಿ ಅಧ್ಯಕ್ಷ ಶ್ರೀಕಂಠ ತೋಂಟೇಗೌಡ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಡಕೊಳ ಗ್ರಾಮದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು 1996ರಲ್ಲಿ ತನಗೆ ಅಗತ್ಯವಿಲ್ಲದಿದ್ದರೂ ಹೆಚ್ಚುವರಿ ಜಮೀನನ್ನು ರೈತರಿಂದ ಸ್ವಾಧೀನಪಡಿಸಿಕೊಂಡಿದೆ. ಇದಕ್ಕೆ ತಕ್ಕ ಪರಿಹಾರ ನೀಡಬೇಕೆಂಬ ನ್ಯಾಯಾಲಯದ ಆದೇಶವನ್ನೂ ಅದು ಉಲ್ಲಂಘಿಸಿದೆ. ಪ್ರಕರಣ ನ್ಯಾಯಾಲಯದಲ್ಲಿದ್ದರೂ ಕಾಮಗಾರಿ ನಡೆಸುತ್ತಿದ್ದು, ತಡೆಯಲು ಪ್ರಯತ್ನಿಸಿದರೆ, ಪೊಲೀಸರನ್ನು ಬಳಸಿಕೊಂಡು ಬೆದರಿಕೆ ಹಾಕುತ್ತಿದ್ದಾರೆ ಎಂದು ಆರೋಪಿಸಿದರು.

ನಿಗಮವು ಒಟ್ಟಾರೆ 116 ಎಕರೆ ಜಮೀನು ವಶಕ್ಕೆ ಪಡೆದಿದೆ. ಆದರೆ ಅದಕ್ಕೆ ಬೇಕಾಗಿದ್ದುದು ಕೇವಲ 10 ಎಕರೆ ಜಮೀನು ಮಾತ್ರ ಹೀಗಾಗಿ ಉಳಿದ ಎಲ್ಲಾ ಜಮೀನು ಬೀಳು ಬಿಡಲಾಗಿದೆ. ತಮಗೆ ನ್ಯಾಯಯುತವಾಗಿ ಪರಿಹಾರ ನೀಡಬೇಕೆಂದು ಕೋರಿ ನ್ಯಾಯಾಲಯಕ್ಕೆ ಹೋದಾಗ ಪರಿಹಾರ ನೀಡುವಂತೆ ಸಿವಿಲ್ ನ್ಯಾಯಾಲಯ ಆದೇಶಿಸಿದೆ. ಇದನ್ನು ಪ್ರಶ್ನಿಸಿ ಅವರು ಹೈಕೋರ್ಟ್ ಮೊರೆ ಹೋಗಿದ್ದು, ಪ್ರಕರಣದ ವಿಚಾರಣೆ ನಡೆಯುತ್ತಿದೆ. ಹೀಗಿರುವಾಗ ಕಾಮಗಾರಿ ನಡೆಸುವುದು ಬೇಡ ಎಂದು ಆಕ್ಷೇಪಿಸಿದ ರೈತರನ್ನು ಬಂಧಿಸುವುದಾಗಿ ಬೆದರಿಕೆ ಹಾಕಲಾಗುತ್ತಿದೆ. ಹೀಗಾಗಿ ಸಮಸ್ಯೆ ಬಗೆಹರಿಸದಿದ್ದರೆ ಶೀಘ್ರದಲ್ಲೇ ಕಡಕೊಳದಲ್ಲಿನ ನಿಗಮದ ಕಚೇರಿ ಬಳಿ ಆಮರಣಾಂತ ಉಪವಾಸ ಸತ್ಯಾಗ್ರಹ ಹಮ್ಮಿಕೊಳ್ಳುವುದಾಗಿ ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಕೆ.ಎನ್. ನಾಗರಾಜು, ಕಡಕೊಳ ಹರೀಶ್, ಸಿದ್ದರಾಜು, ಮಹದೇವ, ಶಂಕರ್ ಉಪಸ್ಥಿತರಿದ್ದರು.

ಸಾಲದ ಮಿತಿ ಕಡಿತ ಮಾಡದಂತೆ ನಬಾರ್ಡ್‌ಗೆ ಶಾಸಕ ಜಿ.ಟಿ.ದೇವೇಗೌಡರ ಮನವಿ

ಹಾಗೆ ಮಾಡಿದರೆ ರೈತರು ಸಂಕಷ್ಟಕ್ಕೆ ಸಿಲುಕುತ್ತಾರೆಂದು ಆತಂಕ



ಬೆಂಗಳೂರಿನ ಸಹಕಾರ ಮಹಾ ಮಂಡಳದಲ್ಲಿ ಮಂಗಳವಾರ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಮಹಾ ಮಂಡಳದ ಅಧ್ಯಕ್ಷರೂ ಆದ ಶಾಸಕ ಜಿ.ಟಿ. ದೇವೇಗೌಡರು ಮಾತನಾಡಿದರು.

ಬೆಂಗಳೂರು, ನ.12(ಬಿಎಲ್‌ಯು)- ನಬಾರ್ಡ್ ನೀಡುವ ಸಾಲದ ಮಿತಿಯನ್ನು ಕಡಿತ ಮಾಡದಂತೆ ಶಾಸಕರೂ ಆದ ರಾಜ್ಯ ಸಹಕಾರ ಮಹಾ ಮಂಡಳದ ಅಧ್ಯಕ್ಷ ಜಿ.ಟಿ.ದೇವೇಗೌಡರು ಕೇಂದ್ರ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಬೆಂಗಳೂರಿನ ಸಹಕಾರ ಮಹಾ ಮಂಡಳದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಸಾಲಿಗೆ ಹೋಲಿಸಿದರೆ 2024-25ನೇ ಸಾಲಿನಲ್ಲಿ ನಬಾರ್ಡ್ ನೀಡುವ ಬಡ್ಡಿದರದ ಸಾಲದ ಮೊತ್ತವನ್ನು ಶೇಕಡ 58ರಷ್ಟು ಕಡಿಮೆ ಮಾಡಲಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರೈತರಿಗೆ ನೀಡುವ ಕೃಷಿ ಸಾಲ, ತೋಟಗಾರಿಕೆ ಸಾಲ ಸೇರಿದಂತೆ ಇತರೆ ಸಾಲವನ್ನು 2020-21ರಲ್ಲಿ ನಬಾರ್ಡ್ 5,500 ಕೋಟಿ ನೀಡಿತ್ತು. 2021-22ರ ಸಾಲಿನಲ್ಲಿ 5,483 ಕೋಟಿ ನೀಡಿತ್ತು. 2022-23ನೇ ಸಾಲಿನಲ್ಲಿ 5,500 ಕೋಟಿ ಬಿಡುಗಡೆ ಮಾಡಿತ್ತು. 2023-24ನೇ ಸಾಲಿನಲ್ಲಿ 5,600 ಕೋಟಿ ನೀಡಿತ್ತು. ಆದರೆ ಈ ಸಾಲಿನಲ್ಲಿ ಅಂದರೆ 2024-25ರಲ್ಲಿ ಶೇ.58ರಷ್ಟು ಕಡಿತ ಮಾಡಿ, 2,340 ಕೋಟಿ ನೀಡುತ್ತಿದೆ. ಇದರಿಂದ ರೈತರು ವ್ಯವಸಾಯ ಮಾಡಲು ಕಷ್ಟವಾಗುತ್ತದೆ ಎಂದು ಜಿ.ಟಿ.ದೇವೇಗೌಡ ಅಂಕಿ ಅಂಶಗಳ ಸಹಿತ ವಿವರಿಸಿದರು.

ನಬಾರ್ಡ್ ಸಾಲದ ಮೊತ್ತ ಕಡಿತ ಮಾಡಿರುವ ಹಿನ್ನೆಲೆ ಕರ್ನಾಟಕದಲ್ಲಿ ಕೃಷಿ ಸಾಲ ವಿತರಣೆಗೆ ಹಣದ ಕೊರತೆ ಎದುರಾಗಲಿದೆ, ಕೃಷಿ ಪತ್ತಿನ ಸಹಕಾರ ಸಂಘಗಳು, ಡಿಸಿಸಿ ಬ್ಯಾಂಕ್‌ಗಳು ಮತ್ತು ರೈತರು ಸಂಕಷ್ಟಕ್ಕೆ ಸಿಲುಕುತ್ತಾರೆ ಎಂದು ಆತಂಕ ವ್ಯಕ್ತಪಡಿಸಿದ ಜಿ.ಟಿ.ದೇವೇಗೌಡರು, ಈ ಹಿನ್ನೆಲೆ ನಬಾರ್ಡ್ ಸಾಲದ ಮೊತ್ತವನ್ನು ಕಡಿತ ಮಾಡಬಾರದು ಎಂದು ಮನವಿ ಮಾಡಿದರು.

ಸಹಕಾರ ಮಹಾಮಂಡಳದ ಉಪಾಧ್ಯಕ್ಷ ಜಗದೀಶ್ ಕವಟಗಿ ಮಠ್, ಸಹಕಾರ ಸಚಿವರ ವಿಶೇಷಾಧಿಕಾರಿ ರಮಣರೆಡ್ಡಿ, ನಿರ್ದೇಶಕರಾದ ಶೇಖರಗೌಡ ಮಾಲಿ ಪಾಟೀಲ್, ಲೋಕಪ್ಪಗೌಡ, ರಾಮರೆಡ್ಡಿ, ಅಶೋಕ್, ಈರಣ್ಣ, ನಾಗರತ್ನ, ವ್ಯವಸ್ಥಾಪಕ ನಿರ್ದೇಶಕ ನವೀನ್ ಗೋಷ್ಠಿಯಲ್ಲಿದ್ದರು.

ನವೆಂಬರ್ 14ರಿಂದ ಅಖಿಲ ಭಾರತ ಸಹಕಾರ ಸಪ್ತಾಹ ಆರಂಭ

ಅಖಿಲ ಭಾರತ ಸಹಕಾರ ಸಪ್ತಾಹ ನವೆಂಬರ್ 14 ರಿಂದ 20 ರವರೆಗೆ ನಡೆಯಲಿದ್ದು, ಬೆಂಗಳೂರಿನ ಜ್ಞಾನ ಜ್ಯೋತಿ ಸಭಾಂಗಣದಲ್ಲಿ ನವೆಂಬರ್ 14ರಂದು ಸಪ್ತಾಹದ ಉದ್ಘಾಟನೆ ನಡೆಯಲಿದೆ ಎಂದು ಇದೇ ವೇಳೆ ಸಹಕಾರ ಮಹಾ ಮಂಡಳದ ಅಧ್ಯಕ್ಷರೂ ಆದ ಜಿ.ಟಿ.ದೇವೇಗೌಡರು ತಿಳಿಸಿದರು.

ಅಂದು ಚಾಲನೆ ದೊರೆಯುವ ಸಹಕಾರ ಹಬ್ಬ ನ.20ವರೆಗೆ ನಡೆಯಲಿದೆ. ನ.15ರಂದು ಚಿತ್ರದುರ್ಗದಲ್ಲಿ, ನ.16ರಂದು ಮಂಗಳೂರಿನಲ್ಲಿ ಸಹಕಾರ ಸಪ್ತಾಹ ಕಾರ್ಯಕ್ರಮ ನಡೆಯಲಿದ್ದು, ನ.17ರಂದು ಬಾಗಲಕೋಟೆಯಲ್ಲಿ ನಡೆಯುವ ಸಹಕಾರ ಸಪ್ತಾಹ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸುವರು ಎಂದು ಹೇಳಿದರು.

ತರುವಾಯ ನ.18 ರಂದು ಬೀದರ್‌ನಲ್ಲಿ, ನ.19ರಂದು ಮಂಗಳೂರಿನಲ್ಲಿ ಸಹಕಾರ ಸಪ್ತಾಹ ಕಾರ್ಯಕ್ರಮ ನಡೆಯಲಿದ್ದು, ನ.20ರಂದು ಬೆಳಗಾವಿಯಲ್ಲಿ ಸಮಾರೋಪಗೊಳ್ಳಲಿದೆ. ಈ ವೇಳೆ ಸಹಕಾರ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಸಾಧಕರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ಹೇಳಿದರು.

ಗುಜರಾತ್‌ನ ಖೈರಾ ಜಿಲ್ಲೆಯಲ್ಲಿ ಸಚಿವ ತ್ರಿಭುವನ್ ದಾಸ್ ಪಟೇಲ್ ಎನ್‌ಡಿಡಿಬಿ ಪ್ರಾರಂಭ ಮಾಡಿದರು. ಇದಕ್ಕೆ ಅಧ್ಯಕ್ಷರಾಗುವಂತೆ ಡಾ.ವರ್ಗಿಸ್ ಅವರಲ್ಲಿ ಮನವಿ ಮಾಡಿಕೊಂಡಾಗ, ಸಹಕಾರ ಕ್ಷೇತ್ರದಲ್ಲಿ ಸರ್ಕಾರದ ಹಸ್ತಕ್ಷೇಪ ಇಲ್ಲದಿದ್ದರೆ ಮಾತ್ರ ಇದನ್ನು ಒಪ್ಪುವುದಾಗಿ ಷರತ್ತು ವಿಧಿಸಿದರು. ಆದರೆ ಇತ್ತೀಚಿನ ದಿನಗಳಲ್ಲಿ ಸಹಕಾರ ಕ್ಷೇತ್ರದಲ್ಲಿ ಸರ್ಕಾರದ ಹಸ್ತಕ್ಷೇಪ ಹೆಚ್ಚಾಗಿದೆ ಎಂದು ಜಿ.ಟಿ.ದೇವೇಗೌಡರು ಬೇಸರ ವ್ಯಕ್ತಪಡಿಸಿದರು.

ಕೇಂದ್ರ ಸಚಿವರಾಗಿದ್ದ ಎಂ.ವಿ. ಕೃಷ್ಣಪ್ಪ, ಕೆಎಂಎಫ್ ಪ್ರಾರಂಭ ಮಾಡಿದರು. ಹಾಲೆಂಡ್‌ನಿಂದ ಹಡಗಿನಲ್ಲಿ ಹಸುಗಳನ್ನು ತರಿಸಿ ಹೈನುಗಾರಿಕೆಗೆ ಉತ್ತೇಜನ ನೀಡಿ ರೈತರ ಬಾಳಿಗೆ ಬೆಳಕಾದರು ಎಂದು ಇದೇ ವೇಳೆ ಶಾಸಕ ಜಿ.ಟಿ.ದೇವೇಗೌಡರು ಸ್ಮರಿಸಿದರು.

ದೇಶ - ವಿದೇಶ

ವೋಕ್ ಮನಸ್ಥಿತಿಯ ವೈರಸ್‌ನಿಂದ ನನ್ನ ಮಗ ಹಾಳಾದ: ಎಲಾನ್ ಮಸ್ಕ್!



ನ್ಯೂಯಾರ್ಕ್: ಬಿಲಿಯನೇರ್ ಎಲಾನ್ ಮಸ್ಕ್ ತಮ್ಮ ಮಕ್ಕಳ ಪೈಕಿ ಓರ್ವ ಮಗ ಲಿಂಗಪರಿವರ್ತನೆಯಾಗಿರುವುದರ ಬಗ್ಗೆ ಪ್ರತಿಕ್ರಿಯೆ ನೀಡಿದ್ದಾರೆ. ವಿವಿಯೆನ್ ಜೆನ್ನಾ ವಿಲ್ಸನ್ ಲಿಂಗಪರಿವರ್ತನೆಯಾಗಿರುವ ಎಲಾನ್ ಮಸ್ಕ್ ಪುತ್ರನಾಗಿದ್ದಾರೆ. ಆಕೆ ಇತ್ತೀಚೆಗೆ ಪೂರ್ಣಗೊಂಡ ಅಮೇರಿಕಾ ಅಧ್ಯಕ್ಷೀಯ ಚುನಾವಣೆಯಲ್ಲಿ ಡೊನಾಲ್ಡ್ ಟ್ರಂಪ್ ಗೆಲುವಿನ ಬಗ್ಗೆ ಮಾತನಾಡುತ್ತಾ, ಟ್ರಂಪ್ ಅಧಿಕಾರ ವಹಿಸಿಕೊಳ್ಳುವ ಅಮೇರಿಕಾದಲ್ಲಿ ನನಗೆ ಭವಿಷ್ಯ ಕಾಣುತ್ತಿಲ್ಲ ಎಂದು ಹೇಳಿದ್ದರು. ನಾನು ಸ್ವಲ್ಪ ಸಮಯದವರೆಗೆ ಯೋಚಿಸುತ್ತಿದ್ದೆ, ಆದರೆ ನಿನ್ನೆ ನನಗೆ ಆ ಯೋಚನೆ ದೃಢವಾಗಿದೆ. ನನಗೆ ಅಮೇರಿಕಾದಲ್ಲಿ ಭವಿಷ್ಯ ಇಲ್ಲದಿರುವುದು ಸ್ಪಷ್ಟವಾಗುತ್ತಿದೆ ಎಂದು ವಿವಿಯೆನ್ ಜೆನ್ನಾ ವಿಲ್ಸನ್ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಿದ್ದರು. ಟ್ರಾನ್ಸ್-ವಿರೋಧಿ ನಿಯಮಗಳು ಮತ್ತು ಮತದಾರರಲ್ಲಿ ಟ್ರಂಪ್‌ಗೆ ಅಚಲವಾದ ಬೆಂಬಲದ ಕುರಿತ ಕಳವಳಗಳನ್ನು ಜೆನ್ನಾ ವಿಲ್ಸನ್ ಉಲ್ಲೇಖಿಸಿದ್ದಾರೆ. ಲಿಂಗಪರಿವರ್ತಿತ ತಮ್ಮ ಮಗನ ಪೋಸ್ಟ್‌ಗೆ ಪ್ರತಿಕ್ರಿಯೆ ನೀಡಿರುವ ಎಲಾನ್ ಮಸ್ಕ್, ವೋಕ್ ಮನಸ್ಥಿತಿ ನನ್ನ ಮಗನನ್ನು ಕೊಂದಿದೆ" ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ತುರ್ತು ವಿಚಾರಣೆಗೆ ಇನ್ಮುಂದೆ ಮೌಖಿಕ ಉಲ್ಲೇಖವಿಲ್ಲ, ಲಿಖಿತ ರೂಪದಲ್ಲಿ ನೀಡಿ



ನವದೆಹಲಿ: ಪ್ರಕರಣಗಳ ತುರ್ತು ಪಟ್ಟಿ ಮತ್ತು ವಿಚಾರಣೆಗಳ ಮೌಖಿಕ ಸಲ್ಲಿಕೆಗಳಿಗೆ ಅವಕಾಶವಿರುವುದಿಲ್ಲ ಎಂದು ಹೇಳಿರುವ ಭಾರತದ ನೂತನ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ, ಇದಕ್ಕಾಗಿ ಇಮೇಲ್ ಅಥವಾ ಲಿಖಿತ ಪತ್ರಗಳನ್ನು ಕಳುಹಿಸುವಂತೆ ವಕೀಲರನ್ನು ಒತ್ತಾಯಿಸಿದರು.

ಸಾಮಾನ್ಯವಾಗಿ ವಕೀಲರು ತಮ್ಮ ಪ್ರಕರಣಗಳನ್ನು ಮುಖ್ಯ ನ್ಯಾಯಮೂರ್ತಿಗಳ ನೇತೃತ್ವದ ಪೀಠದ ಮುಂದೆ ದಿನದ ವಿಚಾರಣೆಯ ಪ್ರಾರಂಭದಲ್ಲಿ ಸರದಿಯಿಲ್ಲದ ಪಟ್ಟಿಗಳಿಗೆ ಮತ್ತು ತುರ್ತು ಆಧಾರದ ಮೇಲೆ ವಿಚಾರಣೆಗೆ ಉಲ್ಲೇಖಿಸುತ್ತಾರೆ. ಇನ್ನು ಮುಂದೆ ಯಾವುದೇ ಲಿಖಿತ ಅಥವಾ ಮೌಖಿಕ ಉಲ್ಲೇಖಗಳಿಲ್ಲ. ಇಮೇಲ್ ಅಥವಾ ಲಿಖಿತ ಸ್ಲಿಪ್/ಪತ್ರಗಳಲ್ಲಿ ಮಾತ್ರ ತುರ್ತು ಕಾರಣಗಳನ್ನು ತಿಳಿಸಬೇಕು ಎಂದು ಸಿಜೆಐ ಸಂಜೀವ್ ಖನ್ನಾ ಹೇಳಿದರು.

ನ್ಯಾಯಾಂಗ ಸುಧಾರಣೆಗಳಿಗಾಗಿ ನಾಗರಿಕ ಕೇಂದ್ರಿತ ಕಾರ್ಯಸೂಚಿಯನ್ನು ವಿವರಿಸಿದ ಮುಖ್ಯ ನ್ಯಾಯಮೂರ್ತಿಗಳು, ಸಾಮಾನ್ಯ ನಾಗರಿಕರಿಗೆ ಸುಲಭವಾಗಿ ನ್ಯಾಯ ವಿಲೇವಾರಿಯಾಗಲು ಮತ್ತು ನಾಗರಿಕರಿಗೆ ಅವರ ಸ್ಥಾನಮಾನವನ್ನು ಲೆಕ್ಕಿಸದೆ ಸಮಾನತೆ ಒದಗಿಸುವುದು ನ್ಯಾಯಾಂಗದ ಸಾಂವಿಧಾನಿಕ ಕರ್ತವ್ಯವಾಗಿದೆ ಎಂದು ಹೇಳಿದರು.

ಕ್ರೀಡಾ ಕೇಂದ್ರಕ್ಕೆ ಕಾರು ನುಗ್ಗಿಸಿದ ಚಾಲಕ; 35 ಮಂದಿ ಸಾವು

ಬ್ಯಾಂಕಾಕ್: ವ್ಯಕ್ತಿಯೊಬ್ಬ ದಕ್ಷಿಣ ಚೀನಾದ ಝುಹೈನಲ್ಲಿರುವ ಕ್ರೀಡಾ ಕೇಂದ್ರದಲ್ಲಿ ವ್ಯಾಯಾಮ ಮಾಡುತ್ತಿದ್ದ ಜನರ ಮೇಲೆ ಉದ್ದೇಶಪೂರ್ವಕವಾಗಿ ತನ್ನ ಕಾರನ್ನು ನುಗ್ಗಿಸಿದ್ದು, ಭೀಕರ ಅಪಘಾತದಲ್ಲಿ 35 ಮಂದಿ ಸಾವನ್ನಪ್ಪಿದ್ದಾರೆ ಮತ್ತು 43 ಜನ ತೀವ್ರವಾಗಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಪೀಪಲ್ಸ್ ಲಿಬರೇಶನ್ ಆರ್ಮಿ ನಗರದಲ್ಲಿ ವಾರ್ಷಿಕವಾಗಿ ಆಯೋಜಿಸಲಾಗುವ ದೇಶದ ಪ್ರಮುಖ ವೈಮಾನಿಕ ಪ್ರದರ್ಶನದ ಮುನ್ನಾದಿನದಂದು ಸೋಮವಾರ ತಡರಾತ್ರಿ ಈ ದಾಳಿ ನಡೆದಿದ್ದು, ದಕ್ಷಿಣ ಚೀನಾದ ಝುಹೈ ನಗರದ ಕ್ರೀಡಾ ಕೇಂದ್ರಕ್ಕೆ ಕಾರು ನುಗ್ಗಿಸಿದ 62 ವರ್ಷದ ವ್ಯಕ್ತಿಯನ್ನು ಪೊಲೀಸರು ಬಂಧಿಸಿದ್ದಾರೆ. ಚೀನಾ ಅಧಿಕಾರಿಗಳ ಪ್ರಕಾರ, ಪೊಲೀಸರು ಫ್ಯಾನ್ ಎಂಬ ಆತನ ಕುಟುಂಬದ ಹೆಸರಿನಿಂದ ಆರೋಪಿಯನ್ನು ಗುರುತಿಸಿದ್ದಾರೆ. ಕೃತ್ಯದ ಬಳಿಕ ಚಾಲಕ ಚಾಕು ಬಳಸಿ ಆತ್ಮಹತ್ಯೆಗೆ ಮುಂದಾಗಿದ್ದ ಎಂದು ವರದಿಯಾಗಿದೆ.



ಶಾರೂಕ್ ಖಾನ್‌ಗೆ ಕೊಲೆ ಬೆದರಿಕೆ: ರಾಯ್‌ಪುರದ ಶಂಕಿತ ವ್ಯಕ್ತಿ ಅರೆಸ್ಟ್

ಮುಂಬೈ: ಬಾಲಿವುಡ್ ನಟ ಶಾರುಖ್ ಖಾನ್‌ಗೆ ಜೀವ ಬೆದರಿಕೆ ಹಾಕಿದ್ದ ಶಂಕಿತ ಆರೋಪಿಯನ್ನು ಮುಂಬೈ ಪೊಲೀಸರು ಬಂಧಿಸಿದ್ದಾರೆ ಎಂದು ಸುದ್ದಿಸಂಸ್ಥೆ ವರದಿ ಮಾಡಿದೆ. ಶಂಕಿತ ವ್ಯಕ್ತಿಯನ್ನು ಛತ್ತೀಸ್‌ಗಢದ ರಾಯ್‌ಪುರ ನಿವಾಸಿ ಫೈಜಾನ್ ಖಾನ್ ಎಂದು ಗುರುತಿಸಲಾಗಿದೆ.

ಶಾರೂಕ್ ಖಾನ್‌ನಿಂದ ಸುಲಿಗೆಗೆ ಬೇಡಿಕೆಯಿಡುವ ಬೆದರಿಕೆ ಕರೆ ಮಾಡಿದ ಆರೋಪದ ಮೇಲೆ ಪೊಲೀಸರು ಪ್ರಸ್ತುತ ಅವರನ್ನು ವಿಚಾರಣೆ ನಡೆಸುತ್ತಿದ್ದಾರೆ. ಕರೆ ಮಾಡಿದ ವ್ಯಕ್ತಿಯನ್ನು ಶಾರೂಕ್ ಖಾನ್ ಅವರ ಮುಂಬೈ ನಿವಾಸವಾದ ಮನ್ನತ್‌ನ ಹೊರಗೆ ಇರುವುದಾಗಿ ಹೇಳಿ 50 ಲಕ್ಷ ರೂ.ಗೆ ಬೇಡಿಕೆಯಿಟ್ಟಿದ್ದನು. ತನ್ನ ಬೇಡಿಕೆ ಈಡೇರಿಸದಿದ್ದರೆ ಹತ್ಯೆ ಮಾಡುವುದಾಗಿ ಬೆದರಿಕೆ ಹಾಕಿದ್ದನು.

ಬೆದರಿಕೆ ಕರೆಯಿಂದ ಎಚ್ಚೆತ್ತ ಮುಂಬೈ ಪೊಲೀಸರು ತ್ವರಿತವಾಗಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲು ತಂಡವನ್ನು ರಾಯ್‌ಪುರಕ್ಕೆ ಕಳುಹಿಸಿದ್ದಾರೆ. ಶಂಕಿತನ ಬಗ್ಗೆ ಹೆಚ್ಚಿನ ವಿವರಗಳನ್ನು ಬಹಿರಂಗಪಡಿಸಿಲ್ಲ. ಭಾರತೀಯ ನ್ಯಾಯ ಸಂಹಿತೆಯ (ಬಿಎನ್‌ಎಸ್) ಸೆಕ್ಷನ್ 308(4) (ಸಾವು ಅಥವಾ ಗಂಭೀರ ಗಾಯದ ಬೆದರಿಕೆಗಳನ್ನು ಒಳಗೊಂಡ ಸುಲಿಗೆ) ಮತ್ತು 351(3)(4) (ಅಪರಾಧ ಬೆದರಿಕೆ) ಅಡಿಯಲ್ಲಿ ಪ್ರಕರಣವನ್ನು ದಾಖಲಿಸಲಾಗಿದೆ.

ಶೇಖ್ ಹಸೀನಾ ಬಂಧನಕ್ಕೆ ಇಂಟರ್‌ಪೋಲ್ ಸಹಾಯ ಕೇಳಿದ ಬಾಂಗ್ಲಾದೇಶ



ಢಾಕಾ: ಬಾಂಗ್ಲಾದೇಶದ ಪದಚ್ಯುತ ಪ್ರಧಾನಿ ಶೇಖ್ ಹಸೀನಾ ವಿರುದ್ಧ ನಡೆದ ಸಾಮೂಹಿಕ ದಂಗೆಯ ವೇಳೆ ನೂರಾರು ಪ್ರತಿಭಟನಾಕಾರರು ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧನಕ್ಕೆ ರೆಡ್ ನೋಟಿಸ್ ಜಾರಿ ಮಾಡುವಂತೆ ಬಾಂಗ್ಲಾದೇಶದ ವಿಶೇಷ ನ್ಯಾಯಮಂಡಳಿ ಅಂತಾರಾಷ್ಟ್ರೀಯ ಪೊಲೀಸ್ ಸಂಸ್ಥೆ ಇಂಟರ್‌ಪೋಲ್‌ಗೆ ಸೂಚಿಸಿದೆ. ಶೇಖ್ ಹಸೀನಾ ತನ್ನ ಆಪ್ತ ಸಹಾಯಕರು ಮತ್ತು ಮಾಜಿ ಸಚಿವರೊಂದಿಗೆ ಆ.5ರಂದು ಭಾರತಕ್ಕೆ ಪಲಾಯನ ಮಾಡುವ ಮೂಲಕ ಅವರ 15 ವರ್ಷಗಳ ಆಡಳಿತ ಅಂತ್ಯಗೊಂಡಿತ್ತು. ನೊಬೆಲ್ ಶಾಂತಿ ಪ್ರಶಸ್ತಿ ವಿಜೇತ ಮೊಹಮ್ಮದ್ ಯೂನಸ್ ಅವರು ಆಗಸ್ಟ್ 8 ರಂದು ದಕ್ಷಿಣ ಏಷ್ಯಾ ರಾಷ್ಟ್ರದ ಹಂಗಾಮಿ ನಾಯಕರಾಗಿ ಅಧಿಕಾರ ವಹಿಸಿಕೊಂಡರು. ಪಾಕಿಸ್ತಾನದ ವಿರುದ್ಧದ 1971 ರ ಸ್ವಾತಂತ್ರ್ಯ ಯುದ್ಧದ ಸಮಯದಲ್ಲಿ ಮಾನವೀಯತೆಯ ವಿರುದ್ಧದ ಅಪರಾಧಗಳ ಆರೋಪಗಳನ್ನು ನಿರ್ವಹಿಸಿದ ನ್ಯಾಯಮಂಡಳಿಯನ್ನು ಪುನರ್ರಚಿಸಿದರು. ಹಸೀನಾ ಮತ್ತು ಇತರರ ಬಂಧನದಲ್ಲಿ ಫ್ರಾನ್ಸ್ ಮೂಲದ ಸಂಸ್ಥೆಯಿಂದ ನೆರವು ಕೋರಿ ಪೊಲೀಸ್ ಮುಖ್ಯಸ್ಥರ ಮೂಲಕ ಇಂಟರ್‌ಪೋಲ್‌ಗೆ ಪತ್ರ ಬರೆದಿದ್ದಾರೆ.

ಮೈಸೂರು ಮಿತ್ರ ಬುಧವಾರ 13 ನವೆಂಬರ್ 2024

ಹುಲಿ ಪತ್ತೆ ಕಾರ್ಯಾಚರಣೆ ಆರಂಭ



ಚಂಬೆಬೆಳ್ಳೂರು ಗ್ರಾಮದ ಭದ್ರಕಾಳಿ ದೇವಾಲಯ ಬಳಿ ರಾಜ್ಯ ವನ್ಯಜೀವಿ ಮಂಡಳಿ ಸದಸ್ಯ ಸಂಕೇತ್ ಪೂವಯ್ಯ, ಡಿಸಿಎಫ್ ಜಗನ್ನಾಥ್ ನೇತೃತ್ವದಲ್ಲಿ ಹುಲಿ ಪತ್ತೆ ಕಾರ್ಯಾಚರಣೆ ಕುರಿತು ಚರ್ಚಿಸಿದರು.

ಮಡಿಕೇರಿ, ನ.12– ವಿರಾಜಪೇಟೆ ಬಳಿಯ ಮಗ್ಗುಲ, ಐಮಂಗಲ, ಚಂಬೆಬೆಳ್ಳೂರು, ಪುದುಕೋಟೆ, ಕುಕ್ಲೂರು ವ್ಯಾಪ್ತಿಯಲ್ಲಿ ಹುಲಿ ಇರುವ ಹಿನ್ನೆಲೆಯಲ್ಲಿ ರಾಜ್ಯ ವನ್ಯಜೀವಿ ಮಂಡಳಿ ಸದಸ್ಯ ಸಂಕೇತ್ ಪೂವಯ್ಯ ಮತ್ತು ಡಿಸಿಎಫ್ ಜಗನ್ನಾಥ್ ನೇತೃತ್ವದಲ್ಲಿ ಹುಲಿ ಪತ್ತೆ ಕಾರ್ಯಾಚರಣೆ ನಡೆಸಲಾಯಿತು.

ಚಂಬೆಬೆಳ್ಳೂರು ಗ್ರಾಮದ ಭದ್ರಕಾಳಿ ದೇವಾಲಯ ಬಳಿ ಸಭೆ ಸೇರಿದ ಸಂಕೇತ್ ಪೂವಯ್ಯ ಹಾಗೂ ಜಗನ್ನಾಥ್ ಮತ್ತು ಗ್ರಾಮಸ್ಥರು ಹುಲಿ ಪತ್ತೆ ಕಾರ್ಯಾಚರಣೆ ಕುರಿತು ಚರ್ಚಿಸಿದರು. ಬಳಿಕ ದೇವಾಲಯದಲ್ಲಿ ಪ್ರಾರ್ಥನೆ ಸಲ್ಲಿಸಿ, ಹುಲಿ ಪತ್ತೆ ಕಾರ್ಯಾಚರಣೆ ಆರಂಭಿಸಲಾಯಿತು. 70 ಅರಣ್ಯ ಸಿಬ್ಬಂದಿಯ 7 ತಂಡಗಳನ್ನು ರಚಿಸಲಾಗಿದ್ದು, ಮಗ್ಗುಲ, ಐಮಂಗಲ, ಪುದುಕೋಟೆ, ಚಂಬೆಬೆಳ್ಳೂರು, ಕುಕ್ಲೂರು, ಬಿಟ್ಟಂಗಾಲ ಗ್ರಾಮದಲ್ಲಿ ಹುಲಿ ಪತ್ತೆ ಕಾರ್ಯಾಚರಣೆ ನಡೆಸಲಾಯಿತು. ಈ ಸಂದರ್ಭ ಭದ್ರಕಾಳಿ ದೇವಾಲಯ ಪಕ್ಕದ ತೋಟದ ರಸ್ತೆ ಅಂಚಿನಲ್ಲಿ ಹುಲಿ ಹೆಜ್ಜೆ ಗುರುತುಗಳು ಪತ್ತೆಯಾಗಿವೆ.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಡಿಸಿಎಫ್ ಜಗನ್ನಾಥ್, ಕಳೆದ ವಾರ ಮಗ್ಗುಲ ಗ್ರಾಮದಲ್ಲಿ ಹುಲಿ ಇರುವುದು ಖಾತ್ರಿಯಾಗಿದೆ. ಇದೀಗ 70 ಸಿಬ್ಬಂದಿ ಬಳಸಿಕೊಂಡು ಹುಲಿ ಸೆರೆ ಕಾರ್ಯಾಚರಣೆ ನಡೆಸಲಾಗುತ್ತಿದೆ. ಈಗಾಗಲೇ ಸಿಸಿ ಕ್ಯಾಮರಾಗಳನ್ನು ಅಳವಡಿಸಲಾಗಿದ್ದು, ಹುಲಿ ಕ್ಯಾಮರಾದಲ್ಲಿ ಸೆರೆಯಾದ ಬಳಿಕ ಗುರುತು ಪತ್ತೆ ಮಾಡಿ, ಬಳಿಕ ಹುಲಿ ಸೆರೆಗೆ ಅನುಮತಿ ಪಡೆಯಲಾಗುತ್ತದೆ ಎಂದು ಹೇಳಿದರು.

ವನ್ಯಜೀವಿ ಮಂಡಳಿಯ ಸದಸ್ಯ ಸಂಕೇತ್ ಪೂವಯ್ಯ ಮಾತನಾಡಿ, ಈ ಭಾಗದಲ್ಲಿ ಹುಲಿ ಸಂಚಾರ ಇರುವ ಬಗ್ಗೆ ಮಾಹಿತಿ ಬಂದಿದೆ. ಕ್ಷೇತ್ರದ ಶಾಸಕರ ನಿರ್ದೇಶನದ ಮೇರೆಗೆ ಹುಲಿ ಪತ್ತೆ ಕಾರ್ಯಾಚರಣೆ ನಡೆಸಲಾಗುತ್ತಿದೆ. ಕಾರ್ಯಾಚರಣೆಗೆ ಗ್ರಾಮಸ್ಥರು ಸಹಕರಿಸಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭ ಚಂಬೆಬೆಳ್ಳೂರು ಗ್ರಾಮದ ಕೋಳೀರ ರನ್ನ, ಚಾರಿಮಂಡ ಪ್ರಕಾಶ್, ಕೊಳುವಂಡ ಹರೀಶ್, ಉಳಿಯಡ ಜೀವನ್, ಮುತ್ತಪ್ಪ, ನಾಮನಿರ್ದೇಶಿತ ಪುರಸಭಾ ಸದಸ್ಯ ಶಬರೀಶ್ ಶೆಟ್ಟಿ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಗೋಪಾಲ್, ವಲಯ ಅರಣ್ಯಾಧಿಕಾರಿ ಕೆ.ವಿ.ಶಿವರಾಂ, ಉಪವಲಯ ಅರಣ್ಯಾಧಿಕಾರಿ ಪ್ರಶಾಂತ್, ಅರಣ್ಯ ರಕ್ಷಕ ನಾಗರಾಜ್ ರಡರಟ್ಟಿ ಹಾಗೂ ಅರಣ್ಯ ಸಿಬ್ಬಂದಿ ಹಾಜರಿದ್ದರು.

ಆಳಕ್ಕೆ ಬಿದ್ದ ಲಾರಿ: ಚಾಲಕನಿಗೆ ತೀವ್ರ ಗಾಯ



ವಿರಾಜಪೇಟೆ ಅಯ್ಯಪ್ಪ ಬೆಟ್ಟದ ಬಳಿ ಭತ್ತದ ಮೂಟೆ ಸಾಗಿಸುತ್ತಿದ್ದ ಲಾರಿ ಆಳಕ್ಕೆ ಬಿದ್ದಿರುವುದು.

ವಿರಾಜಪೇಟೆ, ನ.12– ಚಾಲಕನ ನಿಯಂತ್ರಣ ತಪ್ಪಿ ಭತ್ತದ ಮೂಟೆ ಸಾಗಿಸುತ್ತಿದ್ದ ಲಾರಿ 50 ಅಡಿಗೂ ಹೆಚ್ಚು ಆಳಕ್ಕೆ ಬಿದ್ದು, ಕೆಳ ಭಾಗದಲ್ಲಿದ್ದ ಮನೆಗೆ ಗುದ್ದಿ ಪಲ್ಟಿಯಾಗಿ ಚಾಲಕನ ತಲೆಗೆ ತೀವ್ರ ಗಾಯವಾಗಿರುವ ಘಟನೆ ಪಟ್ಟಣದ ಅಯ್ಯಪ್ಪ ಬೆಟ್ಟದ ಬಳಿ ನಡೆದಿದೆ.

ಕೇರಳದ ಇರಿಟಿ ವಳ್ಳಿತೋಡು ಕುನ್ನತ್ ನಿವಾಸಿ ಲಾರಿ ಚಾಲಕ ಪ್ರವೀಣ್ (45) ಗಾಯಗೊಂಡು ಕೇರಳದ ಕಣ್ಣೂರು ಆಸ್ಪತ್ರೆಯೊಂದಕ್ಕೆ ದಾಖಲಾಗಿದ್ದಾರೆ.

ಈತ ಭದ್ರಾವತಿ, ಹಾಸನ, ಕುಶಾಲನಗರ, ವಿರಾಜಪೇಟೆ ಮಾರ್ಗವಾಗಿ ಕೇರಳಕ್ಕೆ ಭತ್ತದ ಮೂಟೆ ಸಾಗಿಸುತ್ತಿದ್ದಾಗ ಲಾರಿ ಅಯ್ಯಪ್ಪ ಬೆಟ್ಟದ ಬಳಿ ಕಿರಿದಾದ ರಸ್ತೆಯಲ್ಲಿ ಗುಂಡಿ ತಪ್ಪಿಸಲು ಹೋಗಿ, ನಿಯಂತ್ರಣ ತಪ್ಪಿದೆ. ಪರಿಣಾಮ 50 ಅಡಿಗೂ ಹೆಚ್ಚು ಆಳಕ್ಕೆ ಬಿದ್ದು, ನಿವೃತ್ತ ಶಿರಸ್ತೇದಾರ್ ಲಕ್ಷ್ಮೀಶ್ ಅವರ ಮನೆಗೆ ಗುದ್ದಿದೆ. ಇದರಿಂದ ಚಾಲಕನ ತಲೆಗೆ ತೀವ್ರ ಪೆಟ್ಟು ಬಿದ್ದಿದೆ.

ವಿರಾಜಪೇಟೆ ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ, ನಗರ ಪೊಲೀಸ್ ಠಾಣಾಧಿಕಾರಿ ಪ್ರಮೋದ್ ಹಾಗೂ ಸಿಬ್ಬಂದಿ ಸ್ಥಳ ಪರಿಶೀಲಿಸಿ, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಹಾಸ್ಟೆಲ್‌ಗಳಲ್ಲಿ ಇಲಿ, ಹೆಗ್ಗಣ ಸೇರದಂತೆ ಎಚ್ಚರವಹಿಸಿ

ಕಾರ್ಯಾಗಾರದಲ್ಲಿ ನಿಲಯಪಾಲಕರು, ಮೇಲ್ವಿಚಾರಕರಿಗೆ ಅನಿಲ್ ಧಾವನ್ ಸಲಹೆ




ಮಡಿಕೇರಿ ಗಾಂಧಿ ಭವನದಲ್ಲಿ ನಡೆದ ಕಾರ್ಯಾಗಾರದಲ್ಲಿ ಅನಿಲ್ ಧಾವನ್ ಮಾತನಾಡಿದರು. ಮತ್ತೊಂದು ಚಿತ್ರದಲ್ಲಿ ಕಾರ್ಯಾಗಾರದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ನಿಲಯ ಪಾಲಕರು, ಮೇಲ್ವಿಚಾರಕರು ಭಾಗವಹಿಸಿದ್ದರು.

ಮಡಿಕೇರಿ, ನ.12–ವಿದ್ಯಾರ್ಥಿನಿಲಯಗಳ ಅಡುಗೆ ಕೋಣೆಯಲ್ಲಿ ಸ್ವಚ್ಛತೆ, ಆಹಾರ ದಾಸ್ತಾನು ಉಗ್ರಾಣದಲ್ಲಿ ಇಲಿ, ಹೆಗ್ಗಣ ಸೇರದಂತೆ ಎಚ್ಚರವಹಿಸಬೇಕು ಎಂದು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ವಿಭಾಗದ ಅಂಕಿತಾಧಿಕಾರಿ ಅನಿಲ್ ಧಾವನ್ ಸಲಹೆ ನೀಡಿದರು.

ನಗರದ ಗಾಂಧಿ ಭವನದಲ್ಲಿ ಮಂಗಳವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಸಹಕಾರದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಯ ನಿಲಯ ಪಾಲಕರು, ಮೇಲ್ವಿಚಾರಕರು ಹಾಗೂ ಸಿಬ್ಬಂದಿಗೆ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಪಾಡುವ ಕುರಿತು ಏರ್ಪಡಿಸಿದ್ದ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿನಿಲಯಗಳಲ್ಲಿ ಕರ್ತವ್ಯ ನಿರ್ವಹಿಸುವವರು ಪರಿಸರ ಶುಚಿತ್ವ ಕಾಪಾಡುವುದು ಹಾಗೂ ಶುದ್ಧ ಕುಡಿಯುವ ನೀರು ಪೂರೈಸುವುದು, ಆಹಾರ ತಯಾರಿಕೆ ವಿಧಾನ, ನೈರ್ಮಲ್ಯಕ್ಕೆ ಆದ್ಯತೆ ನೀಡಬೇಕು ಎಂದರು.

ತಯಾರಿಸಿದ ಆಹಾರವನ್ನು ಮುಚ್ಚಿಡುವುದು, ಕ್ರಿಮಿಕೀಟಗಳಿಂದ ಆಹಾರ ಕಲುಷಿತವಾಗದಂತೆ ಗಮನಹರಿಸುವುದು. ತಯಾರಿಸಿದ ಆಹಾರವನ್ನು ನಿರ್ದಿಷ್ಟ ಅವಧಿಯಲ್ಲಿ ಮಾತ್ರ ಬಳಸುವುದು, ಪ್ಯಾಕ್ ಮಾಡಿದ ಆಹಾರ ವಸ್ತುಗಳ ಲೇಬಲ್‌ಗಳಲ್ಲಿ ಗ್ರಾಹಕರಿಗೆ ಅಗತ್ಯವಾಗಿ ನೀಡಲೇಬೇಕಾದ ಮಾಹಿತಿ ಬಗ್ಗೆ ಖಾತರಿಪಡಿಸಿಕೊಳ್ಳಬೇಕು. ಕಚ್ಚಾ ವಸ್ತು ಹಾಗೂ ಸಿದ್ಧಪಡಿಸಿದ ಆಹಾರವನ್ನು ಪ್ರತ್ಯೇಕವಾಗಿ ಶೇಖರಿಸುವುದು. ತ್ಯಾಜ್ಯಗಳನ್ನು ಸೂಕ್ತವಾಗಿ ಸಂಗ್ರಹಿಸಿ ಸಮರ್ಪಕವಾಗಿ ವಿಲೇವಾರಿ ಮಾಡುವುದು, ಶುದ್ಧ ಮತ್ತು ಗುಣಮಟ್ಟದ ಆಹಾರ ನೀಡಲು ಹೆಚ್ಚಿನ ಆದ್ಯತೆ ನೀಡಬೇಕು ಎಂದು ಹೇಳಿದರು.

> ❝ವಿದ್ಯಾರ್ಥಿ ನಿಲಯಗಳಲ್ಲಿ ಸ್ವಚ್ಛತೆಗೆ ಪ್ರಥಮ ಆದ್ಯತೆ ನೀಡಬೇಕು. ವಿದ್ಯಾರ್ಥಿಗಳಿಗೆ ಗುಣಮಟ್ಟ ಹಾಗೂ ಶುಚಿತ್ವ ಆಹಾರ ನೀಡಬೇಕು. ಆ ನಿಟ್ಟಿನಲ್ಲಿ ಹೆಚ್ಚಿನ ಕಾಳಜಿ ವಹಿಸಬೇಕು.
> -ಪಿ.ಪಿ.ಕವಿತಾ,
> ಬಿಸಿಎಂ ಇಲಾಖಾಧಿಕಾರಿ

ಆಹಾರ ತಯಾರಿಸುವವರು ಮತ್ತು ವಿತರಣೆ ಮಾಡುವವರು ಕೈಗಳನ್ನು ಸೋಪು, ಸೋಂಕು ನಿವಾರಣೆ ದ್ರಾವಣದಿಂದ ತೊಳೆಯಬೇಕು. ಕೈಗಳಿಗೆ ಗ್ಲೌಸ್, ಮುಖಕ್ಕೆ ಮಾಸ್ಕ್ ಮತ್ತು ತಲೆಗೆ ಕೂದಲುಗಳನ್ನು ಮುಚ್ಚುವಂತಿರುವ ಟೋಪಿ ಮತ್ತು ಕಾಲುಗಳಿಗೆ ಪಾದರಕ್ಷೆ ಧರಿಸಬೇಕು. ಕೈಗಳ ಉಗುರು ಮತ್ತು ತಲೆ ಕೂದಲುಗಳನ್ನು ನೀಟಾಗಿ ಕತ್ತರಿಸಬೇಕು ಎಂದು ಸಲಹೆ ನೀಡಿದರು.

ಕಾರ್ಯಾಗಾರದಲ್ಲಿ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ ವಿಭಾಗದ ಮಂಜುನಾಥ್, ಹಿಂದುಳಿದ ವರ್ಗಗಳ ಇಲಾಖೆ ತಾಲೂಕು ಅಧಿಕಾರಿ ಮೋಹನ್ ಕುಮಾರ್, ವ್ಯವಸ್ಥಾಪಕ ಶಿವಶಂಕರ, ಆರೋಗ್ಯ ಶಿಕ್ಷಣಾಧಿಕಾರಿ ಶ್ರೀನಾಥ್, ವಿದ್ಯಾರ್ಥಿನಿಲಯ ಮೇಲ್ವಿಚಾರಕ ಶ್ರೀಕಾಂತ್, ಇತರ ವಿದ್ಯಾರ್ಥಿ ನಿಲಯ ಮೇಲ್ವಿಚಾರಕರು ಇದ್ದರು.

ಕೂರ್ಗ್ ಟೈಟಾನ್ಸ್ ತಂಡ ಚಾಂಪಿಯನ್

ಮಡಿಕೇರಿ, ನ.12–ಕೊಡವ ಸ್ಪೋರ್ಟ್ಸ್ ಅಸೋಸಿಯೇಷಿನ್ ವತಿಯಿಂದ ನಗರದ ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ಕೊಡವ ಪ್ರೀಮಿಯರ್ ಲೀಗ್‌ನ 3ನೇ ಆವೃತ್ತಿಯ ಕ್ರಿಕೆಟ್ ಪಂದ್ಯಾವಳಿಯಲ್ಲಿ ಕೂರ್ಗ್ ಟೈಟಾನ್ಸ್ ತಂಡ ಚಾಂಪಿಯನ್ ಪಟ್ಟ ಅಲಂಕರಿಸಿದ್ದು, ಎಂಟಿಬಿ ರಾಯಲ್ಸ್ ತಂಡ ರನ್ನರ್ಸ್ ಪ್ರಶಸ್ತಿ ತನ್ನದಾಗಿಸಿಕೊಂಡಿದೆ.



ಕೊಡವ ಪ್ರೀಮಿಯರ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಚಾಂಪಿಯನ್ ಪಟ್ಟ ಅಲಂಕರಿಸಿದ ಕೂರ್ಗ್ ಟೈಟಾನ್ಸ್ ತಂಡ.

ಐಪಿಎಲ್ ಲೀಗ್ ಮಾದರಿಯಲ್ಲಿ 3 ದಿನ ನಡೆದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಮೈಸೂರು ಮಕ್ಕ, ಕೊಡವ ಟ್ರೈಬ್ಸ್, ಕೊಡವ ರಾಯಲ್ಸ್, ಬೆಂಗಳೂರು ಬಬ್ಬಂಗಾ, ಕೂರ್ಗ್ ಟೈಟಾನ್ಸ್, ಕೊಡವು ವಾರಿಯರ್ಸ್, ಅಂಜಿನಕೇರಿ ನಾಡ್‌ಕೂಟ, ನಾಪೋಕ್ಲು ನರಿಯಾ, ಬೆಂಗಳೂರು ಟಸ್ಕರ್ಸ್, ಎಂ.ಟಿ.ಬಿ. ರಾಯಲ್ಸ್, ಕೊಡವಾಮ ಕಟ್ಸ್ ಮತ್ತು ಕರವಲೆ ಭಗವತಿ ತಂಡಗಳು ಪ್ರಶಸ್ತಿಗಾಗಿ ಸೆಣಸಾಡಿದವು. ಕೊನೆಯ ಹಂತಕ್ಕೆ 4 ತಂಡಗಳು ಪದಾರ್ಪಣೆ ಮಾಡಿದವು. ಅಂಜಿನಕೇರಿ ನಾಡ್‌ಕೂಟ ಮತ್ತು ಕೊಡವು ವಾರಿಯರ್ಸ್ ತಂಡದ ನಡುವೆ ನಡೆದ ಮೊದಲ ಎಲಿಮಿನೇಟ್ ಪಂದ್ಯದಲ್ಲಿ ಅಂಜಿನಕೇರಿ ನಾಡ್ ಕೂಟ ಜಯಗಳಿಸಿ ದ್ವಿತೀಯ ಎಲಿಮಿನೇಟ್‌ಗೆ ಅರ್ಹತೆ ಪಡೆಯಿತು. ಅರ್ಹತಾ ಸುತ್ತಿನಲ್ಲಿ ಎಂಟಿಬಿ ರಾಯಲ್ಸ್ ಮತ್ತು ಕೂರ್ಗ್ ಟೈಟಾನ್ಸ್ ತಂಡದ ನಡುವೆ ಸೆಣಸಾಟ ನಡೆದು ಕೂರ್ಗ್ ಟೈಟಾನ್ಸ್ ಗೆಲುವು ಸಾಧಿಸಿ ಫೈನಲ್‌ಗೆ ಪ್ರವೇಶ ಪಡೆಯಿತು.

ದ್ವಿತೀಯ ಎಲಿಮಿನೇಟ್ ಪಂದ್ಯಾಟದಲ್ಲಿ ಅಂಜಿನಕೇರಿ ನಾಡ್ ಕೂಟ ಮತ್ತು ಎಂಟಿಬಿ ರಾಯಲ್ಸ್ ತಂಡಗಳ ನಡುವೆ ಪೈಪೋಟಿ ಏರ್ಪಟ್ಟು ಎಂಟಿಬಿ ರಾಯಲ್ಸ್ ತಂಡ ಅಂತಿಮ ಪಂದ್ಯಾಟಕ್ಕೆ ಅರ್ಹತೆ ಪಡೆದುಕೊಂಡಿತು.

2 ಲಕ್ಷ ಬಹುಮಾನ: ಚಾಂಪಿಯನ್ ಪಟ್ಟ ಅಲಂಕರಿಸಿದ ಕೂರ್ಗ್ ಟೈಟಾನ್ಸ್ ತಂಡಕ್ಕೆ 2 ಲಕ್ಷ ರೂ. ನಗದು ಹಾಗೂ ಟ್ರೋಫಿ, ದ್ವಿತೀಯ ಸ್ಥಾನ ಪಡೆದ ಎಂಟಿಬಿ ರಾಯಲ್ಸ್ ತಂಡಕ್ಕೆ 1 ಲಕ್ಷ ರೂ. ಹಾಗೂ ಟ್ರೋಫಿ, ತೃತೀಯ ಸ್ಥಾನ ಗಳಿಸಿದ ಅಂಜಿಗೆರೆ ನಾಡ್ ತಂಡಕ್ಕೆ 50 ಸಾವಿರ ರೂ. ಹಾಗೂ 4ನೇ ಸ್ಥಾನ ಗಳಿಸಿದ ಕೊಡವು ವಾರಿಯರ್ಸ್ ತಂಡಕ್ಕೆ 25 ರೂ. ಸಾವಿರ ಹಾಗೂ ಟ್ರೋಫಿ ನೀಡಲಾಯಿತು.

ಜಮೀರ್ ಅಹಮ್ಮದ್ ಉಚ್ಚಾಟಿಸುವಂತೆ ಆಗ್ರಹ

ವಿರಾಜಪೇಟೆ, ನ.12–ಚನ್ನಪಟ್ಟಣ ವಿಧಾನಸಭೆ ಕ್ಷೇತ್ರದ ಉಪಚುನಾವಣೆ ಪ್ರಚಾರ ಸಂದರ್ಭದಲ್ಲಿ ಸಚಿವ ಜಮೀರ್ ಅಹಮ್ಮದ್ ಖಾನ್ ಕೇಂದ್ರ ಸಚಿವ ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರ ಮೈಬಣ್ಣ ಕುರಿತು ಅಪಹಾಸ್ಯ ಮಾಡಿರುವುದು ಖಂಡನೀಯ ಎಂದು ಜೆಡಿಎಸ್ ವಿರಾಜಪೇಟೆ ತಾಲೂಕು ಅಧ್ಯಕ್ಷ ಪಿ.ಎ.ಮಂಜುನಾಥ್ ಹೇಳಿದ್ದಾರೆ.



ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಕುಟುಂಬವನ್ನು ಹಣದಿಂದ ಕೊಂಡುಕೊಳ್ಳುವುದಾಗಿ ಉದ್ಧಟತನದ ಹೇಳಿಕೆ ನೀಡಿರುವುದು ಖಂಡನೀಯ. ಆದ್ದರಿಂದ ಜಮೀರ್ ಅಹಮ್ಮದ್ ಅವರನ್ನು ಸಚಿವ ಸ್ಥಾನದಿಂದ ವಜಾಗೊಳಿಸಿ, ಕಾಂಗ್ರೆಸ್‌ನಿಂದ ಉಚ್ಚಾಟಿಸಬೇಕೆಂದು ಮಂಜುನಾಥ್ ಆಗ್ರಹಿಸಿದ್ದಾರೆ.

ಕಾನೂನು ಮೂಲಕವೇ ಮಕ್ಕಳ ದತ್ತು ಪಡೆಯಿರಿ

ದತ್ತು ಮಾಸಾಚರಣೆಯಲ್ಲಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಈಶ್ವರ್ ಸಲಹೆ

ಚಾಮರಾಜನಗರ, ನ.12–ಕಾನೂನಿನ ಮೂಲಕವೇ ಮಕ್ಕಳನ್ನು ದತ್ತು ಪಡೆಯುವುದು ಮುಖ್ಯ ಎಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಈಶ್ವರ್ ಸಲಹೆ ನೀಡಿದರು.

ಸಮೀಪದ ಮರಿಯಾಲ ಗ್ರಾಮದ ಬಸವರಾಜೇಂದ್ರ ನರ್ಸಿಂಗ್ ಕಾಲೇಜಿನಲ್ಲಿ ಮಕ್ಕಳ ರಕ್ಷಣಾ ನಿರ್ದೇಶನಾಲಯ, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ಆರೋಗ್ಯ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದಿಂದ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗೆ ಏರ್ಪಡಿಸಿದ್ದ ರಾಷ್ಟ್ರೀಯ ದತ್ತು ಮಾಸಾಚರಣೆ ಅರಿವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಅಕ್ರಮವಾಗಿ ಮಕ್ಕಳ ದತ್ತು ಪಡೆಯುವುದು, ಮಕ್ಕಳ ಕೊಳ್ಳುವಿಕೆ, ಮಾರಾಟ, ಸಾಗಣೆ ಕಾನೂನು ಬಾಹಿರವಾಗಿದೆ. ಹೀಗಾಗಿ, ಕಾನೂನುಬದ್ಧವಾಗಿ ದತ್ತು ಪಡೆಯುವಲ್ಲಿ ಜಾಗೃತಿ ಅಗತ್ಯವಿದೆ. ಆಸ್ಪತ್ರೆಯಲ್ಲಿ ಸಿಬ್ಬಂದಿಯು ದತ್ತು ಮಕ್ಕಳ ಕಾಯ್ದೆ ಉಲ್ಲಂಘನೆಯಾಗದಂತೆ ಎಚ್ಚರವಹಿಸಬೇಕು ಎಂದು ತಿಳಿಸಿದರು.



ಸಮೀಪದ ಮರಿಯಾಲ ಗ್ರಾಮದ ಬಸವರಾಜೇಂದ್ರ ನರ್ಸಿಂಗ್ ಕಾಲೇಜಿನಲ್ಲಿ ಏರ್ಪಡಿಸಿದ್ದ ರಾಷ್ಟ್ರೀಯ ದತ್ತು ಮಾಸಾಚರಣೆ ಅರಿವು ಕಾರ್ಯಕ್ರಮವನ್ನು ಈಶ್ವರ್ ಉದ್ಘಾಟಿಸಿದರು.

> ❝ಯಾವುದೇ ಮಗು ಸಿಕ್ಕಾಗ ಪಾಲನೆ, ಪೋಷಣೆ ಮಾಡುತ್ತೇವೆ ಎಂದು ಕೇಳಿದವರಿಗೆ ಏಕಾಏಕಿ ಮಗುವನ್ನು ಕೊಡಬಾರದು. ಏಕೆಂದರೆ ಮಗುವಿನ ಭವಿಷ್ಯ ಬಹಳ ಮುಖ್ಯವಾಗಿದೆ. ಮಗು ಹಕ್ಕು ಬಾಧ್ಯತೆಯಿಂದ ವಂಚಿತವಾಗಬಾರದು. ಆ ನಿಟ್ಟಿನಲ್ಲಿ ಕಾನೂನಿನ ಪ್ರಕಾರವೇ ಮಕ್ಕಳನ್ನು ದತ್ತು ನೀಡಬೇಕು. ಮಕ್ಕಳನ್ನು ದತ್ತು ನೀಡಲು ಒಪ್ಪಂದ ಮುಖ್ಯವಾಗಿದೆ. ಕಾನೂನಿನ ನಿಯಮಗಳಡಿ ಮಗುವನ್ನು ದತ್ತು ನೀಡಬೇಕು. ಅನಾಥ ಮಗು ಸಿಕ್ಕಾಗ ಕೂಡಲೇ ಸಂಬಂಧಪಟ್ಟ ಇಲಾಖೆಗೆ ಮಾಹಿತಿ ನೀಡಬೇಕು
> -ಈಶ್ವರ್, ಸದಸ್ಯ ಕಾರ್ಯದರ್ಶಿ, ಕಾನೂನು ಸೇವಾ ಪ್ರಾಧಿಕಾರ

ಪ್ರತಿಯೊಬ್ಬರು ತಂದೆ–ತಾಯಿ, ಅಣ್ಣ–ತಮ್ಮಂದಿರ ಪ್ರೀತಿ–ವಾತ್ಸಲ್ಯದಲ್ಲಿ ಬದುಕುತ್ತೇವೆ. ಕಷ್ಟ–ಸುಖ ಹಂಚಿಕೊಂಡು ಜೀವನ ಸಾಗಿಸುವ ಜೊತೆಗೆ ಶಿಕ್ಷಣ ಪಡೆಯುತ್ತೇವೆ. ದುರ್ಬಲ ಮಕ್ಕಳಿಗೂ ಹಕ್ಕು ಸಿಗಬೇಕು ಎಂಬುದು ಕಾನೂನಿನಲ್ಲಿದೆ. ದತ್ತು ಕೊಡುವ ಪ್ರಕ್ರಿಯೆಯಲ್ಲಿ ನ್ಯಾಯ ಪರಿಪಾಲಿಸಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷೆ ಸರಸ್ವತಿ ಮಾತನಾಡಿ, ಅನಾಥ ಮಗು ಸಿಕ್ಕಾಗ ಆ ಮಗುವಿನ ತಂದೆ–ತಾಯಿಯನ್ನು ಪತ್ತೆ ಮಾಡಬೇಕು. 60 ದಿನ ಮಗು ದತ್ತು ಕೇಂದ್ರದಲ್ಲಿ ಇರಬೇಕು. ಅಲ್ಲಿಯವರೆಗೆ ಪತ್ರಿಕೆ, ಸಾಮಾಜಿಕ ಜಾಲತಾಣಗಳಲ್ಲಿ ಮಗುವಿನ ಪೋಷಕರ ಪತ್ತೆಗೆ ಜಾಹೀರಾತು ನೀಡಲಾಗುವುದು. ಒಂದು ವೇಳೆ 60 ದಿನಗಳ ತನಕ ಮಗುವಿನ ತಂದೆ–ತಾಯಿ ಸಿಗದಿದ್ದಾಗ ಬೇರೆಯವರಿಗೆ ದತ್ತು ನೀಡಲು ನಿರ್ಧರಿಸಲಾಗುವುದು ಎಂದು ತಿಳಿಸಿದರು. ಮಗುವನ್ನು ದತ್ತು ಪಡೆಯುವವರು ಆನ್‌ಲೈನ್ ಮೂಲಕ ನೋಂದಣಿ ಮಾಡಿಕೊಂಡಿರುತ್ತಾರೆ. ಒಂದು ಕುಟುಂಬಕ್ಕೆ ಮೂರು ರಾಜ್ಯಗಳಲ್ಲಿ ಅರ್ಜಿ ಹಾಕಲು ಅವಕಾಶವಿರುತ್ತದೆ. ಮಗುವನ್ನು ಮಾರಾಟ ಮಾಡಲು ಅವಕಾಶವಿರುವುದಿಲ್ಲ ಎಂದರು.

ಈ ಸಂದರ್ಭದಲ್ಲಿ ಬಸವರಾಜೇಂದ್ರ ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕ ಡಾ.ಎಂ.ಬಸವರಾಜೇಂದ್ರ, ಖಜಾಂಚಿ ಡಾ.ಶ್ವೇತಾ ಶಶಿಧರ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಚಲುವರಾಜು, ಬಸವರಾಜೇಂದ್ರ ಶುಶ್ರೂಷಕ ಕಾಲೇಜಿನ ಪ್ರಭಾರ ಪ್ರಾಂಶುಪಾಲ ನದೀಂ ಜೊನಾಥನ್, ಎನ್.ಮಂಜುನಾಥ್, ಕುಮಾರ್, ಆನಂದ್, ಮಂಜಪ್ಪ ಇತರರು ಇದ್ದರು.

ಕೇಂದ್ರ ಸಚಿವ ಸೋಮಣ್ಣಗೆ ನಾಗರಿಕ ಸನ್ಮಾನಕ್ಕೆ ನಿರ್ಧಾರ



ಚಾಮರಾಜನಗರದಲ್ಲಿ ನಡೆದ ಸೋಮಣ್ಣ ಅಭಿಮಾನಿಗಳ ಸಭೆಯಲ್ಲಿ ಅಮ್ಮನಪುರ ಮಲ್ಲೇಶ್ ಮಾತನಾಡಿದರು.

ಚಾಮರಾಜನಗರ, ನ.12– ಕೇಂದ್ರ ರೈಲ್ವೆ ಹಾಗೂ ಜಲಶಕ್ತಿ ಸಂಪನ್ಮೂಲ ರಾಜ್ಯ ಸಚಿವ ವಿ.ಸೋಮಣ್ಣ ಅವರನ್ನು ಚಾಮರಾಜನಗರಕ್ಕೆ ಆಹ್ವಾನಿಸಿ, ಪಕ್ಷಾತೀತವಾಗಿ ಜಿಲ್ಲಾ ಕೇಂದ್ರದಲ್ಲಿ ಅದ್ದೂರಿಯಾಗಿ ನಾಗರಿಕ ಸನ್ಮಾನಿಸಲು ಸಭೆಯಲ್ಲಿ ನಿರ್ಧರಿಸಲಾಯಿತು.

ನಗರದ ಶ್ರೀ ಸಿದ್ದಮಲ್ಲೇಶ್ವರ ಮಠದ ಆವರಣದ ಅನುಭವ ಮಂಟಪದಲ್ಲಿ ರೈತ ಮುಖಂಡ ಅಮ್ಮನಪುರ ಮಲ್ಲೇಶ್ ನೇತೃತ್ವದಲ್ಲಿ ನಡೆದ ಸೋಮಣ್ಣ ಅಭಿಮಾನಿಗಳು ಹಾಗೂ ಹಿತೈಷಿಗಳ ಸಭೆಯಲ್ಲಿ ಅನೇಕ ಮುಖಂಡರು ತಮ್ಮ ಸಲಹೆ ಸೂಚನೆ ನೀಡುವ ಜೊತೆಗೆ ಜಿಲ್ಲೆಯ ಅಭಿಮಾನಿಗಳನ್ನು ಸೇರಿಸಿಕೊಂಡು ದೊಡ್ಡದಾಗಿ ಕಾರ್ಯಕ್ರಮ ಆಯೋಜಿಸಬೇಕೆಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ಅಮ್ಮನಪುರ ಮಲ್ಲೇಶ್ ಮಾತನಾಡಿ, ಚಾಮರಾಜನಗರ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧೆ ಮಾಡಿದ್ದರು. ನಮ್ಮ ಕ್ಷೇತ್ರದಲ್ಲೇ ಇದ್ದ, ಕೆಲವರು ಷಡ್ಯಂತ್ರ ಮತ್ತು ಕುತಂತ್ರದಿಂದ ಅವರನ್ನು ಸೋಲಿಸಿದರು. ನಂತರ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ದೆಹಲಿಗೆ ಕರೆಸಿ, ಲೋಕಸಭೆ ಟಿಕೆಟ್ ನೀಡಿ ಗೆಲುವು ಸಾಧಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಜಿಲ್ಲೆಯ ಅಭಿವೃದ್ಧಿಯಲ್ಲಿ ಅವರ ಕೊಡುಗೆ ಇದೆ. ಈ ಹಿನ್ನೆಲೆಯಲ್ಲಿ ಅವರನ್ನು ಜಿಲ್ಲೆಗೆ ಆಹ್ವಾನಿಸಿ, ಅಭಿಮಾನಿಗಳ ಬಳಗದಿಂದ ಪಕ್ಷಾತೀತ ಮತ್ತು ಜಾತ್ಯತೀತವಾಗಿ ನಾಗರಿಕ ಸನ್ಮಾನ ಮಾಡುವುದು ನಮ್ಮ ಕರ್ತವ್ಯವಾಗಿದೆ ಎಂದರು.

ಸಭೆಯಲ್ಲಿ ನಗರಸಭೆ ಅಧ್ಯಕ್ಷ ಸುರೇಶ್, ಮುಖಂಡರಾದ ರಾಜಶೇಖರ್, ಹನುಮಂತ ಶೆಟ್ಟಿ, ವೃಷಭೇಂದ್ರಪ್ಪ, ಬಸವಣ್ಣ, ನಟರಾಜು, ಕುಮಾರ್, ಅಮ್ಜದ್, ಜಯಸುಂದರ್, ಬಾಲ ಸುಬ್ರಹ್ಮಣ್ಯ, ಬಸವಣ್ಣ, ವೀರಭದ್ರಸ್ವಾಮಿ, ಪರಮೇಶ್, ರಾಜಶೇಖರ್ ಇತರರು ಇದ್ದರು.

ನೀರು ಸರಬರಾಜು ವ್ಯತ್ಯಯ

ಗುಂಡ್ಲುಪೇಟೆ, ನ.12–ಪುರಸಭಾ ವ್ಯಾಪ್ತಿ ಅಮೃತ ಯೋಜನೆಯಡಿ ಕುಡಿಯುವ ನೀರು ಸರಬರಾಜು ಯೋಜನೆಯ ಕಾಮಗಾರಿ ಪ್ರಗತಿಯಲ್ಲಿದ್ದು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಉಪವಿಭಾಗ ವತಿಯಿಂದ ಸಿಂಧುವಳ್ಳಿ ಹತ್ತಿರದ ಜಲಶುದ್ಧೀಕರಣ ಘಟಕದಲ್ಲಿ ಸಂಪನ್ನು ಪುನಃಶ್ಚೇತನ ಗೊಳಿಸುವ ಕಾಮಗಾರಿ ಕೈಗೊಳ್ಳಬೇಕಾಗಿರುವುದರಿಂದ ನ.13 ರಿಂದ 27 ರವರೆಗೆ ಪಟ್ಟಣ ಮತ್ತು ಮಾರ್ಗಮಧ್ಯದ ಹಳ್ಳಿಗಳಿಗೆ ಕುಡಿಯುವ ನೀರಿನ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಪುರಸಭೆ ಮುಖ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಶ್ರೀಮಠಗಳು ಚಲಿಸುವ ಜ್ಞಾನ ಭಂಡಾರವಿದ್ದಂತೆ

ಕೊಳ್ಳೇಗಾಲ, ನ.12–ಶ್ರೀಮಠಗಳು ಚಲಿಸುವ ಜ್ಞಾನ ಭಂಡಾರವಿದ್ದಂತೆ. ಸಮಾಜದಲ್ಲಿ ಮಠ–ಮಾನ್ಯಗಳ ಸೇವೆ ಸ್ಮರಣೀಯ ಎಂದು ಸಿದ್ಧಗಂಗಾ ಮಠದ ಕಿರಿಯ ಶ್ರೀಗಳಾದ ಶಿವಸಿದ್ದೇಶ್ವರಸ್ವಾಮೀಜಿ ಹೇಳಿದರು.

ಪಟ್ಟಣದಲ್ಲಿ ಶ್ರೀ ಡಾ.ಶಾಂತಮಲ್ಲಿಕಾರ್ಜುನಸ್ವಾಮೀಜಿ ಗೌರವ ಸಮರ್ಪಣಾ ಸಮಾರಂಭದ ಸಾನಿಧ್ಯ ವಹಿಸಿ ಮಾತನಾಡಿದ ಅವರು, ಹಾರ, ತುರಾಯಿಗಳಿಗಿಂತ ಭಕ್ತರು ಹೃದಯದಲ್ಲಿ ನೀಡಿರುವ ಪೂಜ್ಯ ಸ್ಥಾನ ಅತ್ಯಂತ ದೊಡ್ಡದು. ಶಾಂತಮಲ್ಲಿಕಾರ್ಜುನ ಸ್ವಾಮೀಜಿಗೆ ಭಕ್ತ ಸಮೂಹವೇ ದೊಡ್ಡ ಆಸ್ತಿ ಎಂದರು.

ಭಕ್ತ ಸಮೂಹ ಏರ್ಪಡಿಸಿರುವ ಈ ಕಾರ್ಯಕ್ರಮ ಅತ್ಯಂತ ಪವಿತ್ರ ಕಾರ್ಯಕ್ರಮ. ಮಠ–ಮಾನ್ಯಗಳು ಸಮಾಜದಲ್ಲಿ ಶ್ರದ್ಧಾ, ನೆಮ್ಮದಿಯ ಕೇಂದ್ರವಾಗಿ ಕಾರ್ಯ ನಿರ್ವಹಿಸುತ್ತಿವೆ. ಅವುಗಳು ಸಮಾಜದ ಜೀವನಾಡಿಗಳು. ಮಠಗಳು ಮಮಕಾರ ತೋರಿಸುವ ಭಕ್ತಿಯ ತಾಣ, ನಾಡಿನ ಜನರ ಶ್ರೇಯೋಭಿವೃದ್ಧಿಯಲ್ಲಿ ಮಠ–ಮಾನ್ಯಗಳ ಪಾತ್ರ ಮಹತ್ವವಾದುದು. ಜೀವನಕ್ಕೆ ಬೇಕಾದ ಸಂಸ್ಕಾರ ಕಲಿಸುವಲ್ಲಿ, ಮಾನವರ ನಡುವೆ ಬೆಸುಗೆ ಬೆಸೆಯುವಲ್ಲಿ, ಸಮಾಜದ ಓರೆ, ಕೋರೆ ತಿದ್ದುವಲ್ಲಿಯೂ ಆಧ್ಯಾತ್ಮದ ಗುರುಗಳು ಅತ್ಯಗತ್ಯ ಎಂದು ತಿಳಿಸಿದರು.



ಕೊಳ್ಳೇಗಾಲದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಶ್ರೀ ಡಾ.ಶಾಂತಮಲ್ಲಿಕಾರ್ಜುನಸ್ವಾಮೀಜಿ ಅವರನ್ನು ಸಲ್ಲಿಸಲಾಯಿತು.

ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡಿ, ಅಧ್ಯಯನಕ್ಕೆ ವಯಸ್ಸಿನ ಮಿತಿ ಇಲ್ಲ ಎಂಬುದನ್ನ ಪಿಹೆಚ್‌ಡಿ ಪಡೆಯುವ ಮೂಲಕ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಸಾಧಿಸಿದ್ದಾರೆ. ನಾನು ಅವರನ್ನು ಗಮನಿಸುತ್ತಿದ್ದೇನೆ. ಶ್ರೀಮಠದ ಅಭಿವೃದ್ಧಿಗೆ ಅವರು ಶ್ರಮಿಸುತ್ತಿದ್ದಾರೆ. ಅವರು ಶಿಕ್ಷಣ ಪ್ರೇಮಿ, ಅಪಾರ ಭಕ್ತ ಸಮೂಹ ಪ್ರೀತಿಸುವ ಶರಣರು ಎಂದರು.

ಗುಂಡೇಗಾಲ ಮಠಾಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನಸ್ವಾಮೀಜಿ, ಮುಡುಕನಪುರ ಮಠಾಧ್ಯಕ್ಷರಾದ ಶ್ರೀ ಷಡಕ್ಷರದೇಶಿಕೇಂದ್ರಸ್ವಾಮೀಜಿ, ಮೈಸೂರಿನ ಕುಂದೂರು ಮಠಾಧ್ಯಕ್ಷರಾದ ಶರತ್‌ಚಂದ್ರಸ್ವಾಮೀಜಿ, ಮಾಜಿ ಸಚಿವ ಎನ್.ಮಹೇಶ್, ಶಾಸಕ ಹೆಚ್.ಎಸ್.ಗಣೇಶ್ ಪ್ರಸಾದ್, ಮಾಜಿ ಶಾಸಕ ಜಿ.ಎನ್.ನಂಜುಂಡಸ್ವಾಮಿ, ಬಿಜೆಪಿ ನಾಯಕ ನಿಶಾಂತ್ ಮಾತನಾಡಿದರು.

ಕಾರ್ಯಕ್ರಮದಲ್ಲಿ ವಾಟಾಳು ಮಠಾಧ್ಯಕ್ಷರಾದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ಉಗ್ರಾಣ ನಿಗಮದ ಅಧ್ಯಕ್ಷ ಎಸ್.ಜಯಣ್ಣ, ಕಾಡಾ ಅಧ್ಯಕ್ಷ ಮರಿಸ್ವಾಮಿ, ಮಾನಸ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಕಾರ್ಯದರ್ಶಿ ಡಾ.ದತ್ತೇಶ್ ಕುಮಾರ್, ನಗರಸಭಾಧ್ಯಕ್ಷೆ ರೇಖಾ ರಮೇಶ್, ಉಪಾಧ್ಯಕ್ಷ ಎ.ಪಿ.ಶಂಕರ್, ಚಾಮುಲ್ ಅಧ್ಯಕ್ಷ ನಾಗೇಂದ್ರಸ್ವಾಮಿ, ತಿಮ್ಮರಾಜಿಪುರ ರಾಜು, ಕೆಂಪನಪಾಳ್ಯ ಮಹದೇವಸ್ವಾಮಿ, ದೊಡ್ಡಿಂದುವಾಡಿ ವೀರಭದ್ರಸ್ವಾಮಿ, ಗುರುಮಲ್ಲೇಶ್ವರ ಸಂಸ್ಥೆ ವೃಷಬೇಂದ್ರ, ಶಿವಕುಮಾರ್, ಬೃಂಗೇಶ್, ಉತ್ತಂಬಳ್ಳಿ ಗಣೇಶ, ರಾಜೇಶ, ಪ್ರಭು, ಕಿರಣ್, ಮಹೇಶ, ತಿಮ್ಮರಾಜಿಪುರ ಮಹದೇವಸ್ವಾಮಿ, ಮಹದೇವಸ್ವಾಮಿ, ಶಿವಪುರ ಲೋಕೇಶ್ ಇನ್ನಿತರಿದ್ದರು.

ನ.19ರಂದು ಗಣಪತಿ ದೇವಸ್ಥಾನದಲ್ಲಿ ವಿಶೇಷ ಪೂಜೆ

ಚಾಮರಾಜನಗರ, ನ.12–ನಗರದ ಭ್ರಮರಾಂಬ ಬಡಾವಣೆಯ 4ನೇ ಕ್ರಾಸ್‌ನಲ್ಲಿರುವ ಶ್ರೀ ಮಹಾಗಣಪತಿ ದೇವಸ್ಥಾನದಲ್ಲಿ ಲೋಕಕಲ್ಯಾಣಾರ್ಥವಾಗಿ ನ.19ರಂದು ಕಾರ್ತಿಕ ಮಾಸದ ಅಂಗಾರಕ ಚತುರ್ಥಿ ಪ್ರಯುಕ್ತ ವಿಶೇಷ ಪೂಜೆ ನಡೆಯಲಿದೆ. ಅಂದು ಬೆಳಗ್ಗೆ 9 ಗಂಟೆ ಗಣಪತಿ ಹೋಮ, ಮಧ್ಯಾಹ್ನ 12 ಗಂಟೆಗೆ ಪೂರ್ಣಾಹುತಿ ನಡೆಯಲಿದೆ. ನಂತರ ತೀರ್ಥ ಪ್ರಸಾದ ವಿನಿಯೋಗಿಸಲಾಗುವುದು ಎಂದು ದೇವಸ್ಥಾನ ಅರ್ಚಕ ಕಾರ್ತಿಕ್ ತಿಳಿಸಿದ್ದಾರೆ.

ನಾಗಮಾರ್ಷಲ್ ಆರ್ಟ್ಸ್ ಅಕಾಡೆಮಿ ಕರಾಟೆ ಪಟುಗಳ ಸಾಧನೆ



ಮೈಸೂರಿನಲ್ಲಿ ನಡೆದ ರಾಷ್ಟ್ರೀಯ ಮಟ್ಟದ ಕರಾಟೆ ಪಂದ್ಯಾವಳಿಯಲ್ಲಿ ಸಮಗ್ರ ಪ್ರಶಸ್ತಿ ಗಳಿಸಿದ ನಾಗಮಾರ್ಷಲ್ ಆರ್ಟ್ಸ್ ಅಕಾಡೆಮಿ ಕರಾಟೆ ಪಟುಗಳು.

ಚಾಮರಾಜನಗರ, ನ.12–ಇತ್ತೀಚಿಗೆ ಮೈಸೂರಿನಲ್ಲಿ ವಿ.ಎನ್.ಯೋಧ ಮಾರ್ಷಲ್ ಆರ್ಟ್ಸ್ ಅಕಾಡೆಮಿ ವತಿಯಿಂದ ನಡೆದ 4ನೇ ರಾಷ್ಟ್ರೀಯ ಮಟ್ಟದ ಮುಕ್ತ ಕರಾಟೆ ಪಂದ್ಯಾವಳಿಯಲ್ಲಿ ನಗರದ ನಾಗಮಾರ್ಷಲ್ ಆರ್ಟ್ಸ್ ಅಕಾಡೆಮಿ ಕರಾಟೆ ಪಟುಗಳು ಸಮಗ್ರ ಪ್ರಶಸ್ತಿ ಗಳಿಸಿದ್ದಾರೆ.

ಕಟ ಮತ್ತು ಕುಮಿತೆ ವಿಭಾಗದಲ್ಲಿ ಉತ್ತಮ ಪ್ರದರ್ಶನ ನೀಡಿ ಸಮಗ್ರ ಪ್ರಶಸ್ತಿ, ಪ್ರಮಾಣಪತ್ರ ಪಡೆದಿದ್ದಾರೆ. ಕಟ ವಿಭಾಗದಲ್ಲಿ ಮಹಮ್ಮದ್ ಫಾವಜ್, ಚಿರಂತ್, ರೀಹಾನ್, ಅರ್ಮಾನ್, ಅವಾಜ್ ಕಾಮಕ್ ಪ್ರಥಮ ಸ್ಥಾನ, ನವಾಜ್ ದ್ವಿತೀಯ ಸ್ಥಾನ, ಎಂ.ಆರ್.ಭರತ್ ಕುಮಾರ್, ರಜಕ್, ಉಮೇಅಮ್ರಾ, ಹಮ್‌ಜ್ಹಾ, ಅಪ್ಸನ್, ಅಸನ್ ಫಾರ್ಹದ್, ಮಹಮ್ಮದ್ ತೃತೀಯ ಸ್ಥಾನ ಪಡೆದರು.

ಅಭಿನಂದನೆ: ವಿಜೇತ ಕರಾಟೆ ಪಟುಗಳನ್ನು ಕರಾಟೆ ಮುಖ್ಯ ತರಬೇತುದಾರ ಸೆನ್ಸಾಯ್ ರಾಜೇಂದ್ರ, ತರಬೇತುದಾರ ಸೆನ್ಸಾಯ್ ಯೋಗೇಶ್, ಸೆಂಪಾಯ್ ಅಬ್ದುಲ್ ಫೈಸಲ್ ಅಭಿನಂದಿಸಿದ್ದಾರೆ.

ಮೈಸೂರು ಮಿತ್ರ

ರಾಜ್ಯದ 11 ಸರ್ಕಾರಿ ಅಧಿಕಾರಿಗಳ ನಿವಾಸದ ಮೇಲೆ ಲೋಕಾಯುಕ್ತ ದಾಳಿ

●ದಾಖಲೆ ಪತ್ರಗಳ ಪರಿಶೀಲನೆ ●ಹಣವನ್ನು ಗಂಟು ಕಟ್ಟಿ ಹೊರಗೆಸೆದ ಇಂಜಿನಿಯರ್!



ಬೆಂಗಳೂರು, ನ.12– ಕರ್ನಾಟಕ ಲೋಕಾಯುಕ್ತ ಅಧಿಕಾರಿಗಳು ಮಂಗಳವಾರ ರಾಜ್ಯದ ವಿವಿಧೆಡೆ ಹನ್ನೊಂದು ಸರ್ಕಾರಿ ಅಧಿಕಾರಿಗಳ ಮನೆ ಮೇಲೆ ದಾಳಿ ನಡೆಸಿವೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಬೆಳಗಾವಿ, ಹಾವೇರಿ, ದಾವಣಗೆರೆ, ಕಲಬುರಗಿ, ಮೈಸೂರು, ರಾಮನಗರ ಮತ್ತು ಧಾರವಾಡ ಸೇರಿದಂತೆ ಹಲವೆಡೆ ಅಧಿಕಾರಿಗಳಿಗೆ ಸಂಬಂಧಿಸಿದ ಹಲವು ಸ್ಥಳಗಳಲ್ಲಿ ಬೆಳಗ್ಗೆಯಿಂದ ದಾಳಿ ಆರಂಭಗೊಂಡಿದ್ದು, ದಾಖಲೆಗಳು, ಆಸ್ತಿ, ಬೆಲೆಬಾಳುವ ವಸ್ತುಗಳನ್ನು ಪರಿಶೀಲಿಸುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ದಾವಣಗೆರೆಯಲ್ಲಿ ಜಿಲ್ಲಾ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ಸಹಾಯಕ ನಿರ್ದೇಶಕ ಕಮಲ್ ರಾಜ್ ಮನೆ ಮೇಲೆ ದಾಳಿ ವೇಳೆಯಲ್ಲಿ ರೂ. 1 ಲಕ್ಷ ನಗದು, ಇನ್ನೋವಾ ಕಾರು ಹಾಗೂ ಆಸ್ತಿಯ ದಾಖಲೆ ಪತ್ತೆಯಾಗಿವೆ. ಅನುಕಂಪದ ಆಧಾರದ ಮೇಲೆ ದ್ವಿತೀಯ ದರ್ಜೆ ಸಹಾಯಕರಾಗಿ ನೇಮಕಗೊಂಡಿದ್ದ ಕಮಲ್ ರಾಜ್ ಹಲವು ಬಡ್ತಿ ಪಡೆದು ಸಹಾಯಕ ನಿರ್ದೇಶಕರಾಗಿದ್ದರು. ಚಿತ್ರದುರ್ಗ ಹಾಗೂ ದಾವಣಗೆರೆಯಲ್ಲಿ ಮನೆ, ಮೂರು ನಿವೇಶನ ಸೇರಿ ಇತರೆ ಆಸ್ತಿಯನ್ನು ಲೋಕಾಯುಕ್ತ ಅಧಿಕಾರಿಗಳು ಪತ್ತೆ ಮಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಧಾರವಾಡದ ಕೆಐಎಡಿಬಿ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಗೋವಿಂದಪ್ಪ ಭಜಂತ್ರಿ ಅವರ ಸಂಬಂಧಿಕರ ಮನೆ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ್ದಾರೆ.

ಬೆಂಗಳೂರಿನಲ್ಲಿ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಅಧಿಕಾರಿಯಾಗಿರುವ ವೆಂಕಟೇಶ್ ಎಂಬುವರ ಬೆಳಗಾವಿ ನಿವಾಸದ ಮೇಲೂ ದಾಳಿ ನಡೆದಿದ್ದು, ದಾಖಲೆ ಪತ್ರಗಳ ಪರಿಶೀಲನೆ ನಡೆಸಿದ್ದಾರೆ. ವೆಂಕಟೇಶ್ ಅವರು ಈ ಹಿಂದೆ ಬೆಳಗಾವಿಯಲ್ಲಿ ಕಾರ್ಯನಿರ್ವಹಿಸಿದ್ದರು.

ಬೀದರ್ ಜಿಲ್ಲಾ ತರಬೇತಿ ಕೇಂದ್ರದ ಸಹಾಯಕ ನಿರ್ದೇಶಕ ರವೀಂದ್ರ ರೊಟ್ಟಿ ನಿವಾಸದ ಮೇಲೆ ಲೋಕಾಯುಕ್ತ ಪೊಲೀಸರ ರೇಡ್ ನಡೆದಿದೆ. ಬೀದರ್, ಬೆಂಗಳೂರು ನಿವಾಸ, ಹುಟ್ಟೂರು ಮನೆ ಮೇಲೆ ಏಕಾಲಕ್ಕೆ ದಾಳಿ ನಡೆಸಲಾಗಿದ್ದು, ದಾಖಲೆ ಹಾಗೂ ಇನ್ನಿತರ ಮಾಹಿತಿ ಕಲೆಹಾಕಲಾಗಿದೆ.


ಹಾವೇರಿಯ ಬಸವೇಶ್ವರ ನಗರದಲ್ಲಿ ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆ ಉಪವಿಭಾಗದ ಎಇ ಕಾಶೀನಾಥ್ ಭಜಂತ್ರಿ ಮನೆ ಮೇಲೆ ದಾಳಿ ನಡೆದಿದ್ದು, 14 ಲಕ್ಷ ರೂಪಾಯಿ ನಗದು ವಶಪಡಿಸಿಕೊಂಡಿದ್ದಾರೆ. ಬೆಳಗ್ಗೆ ಮನೆಯಲ್ಲಿ ಮಲಗಿದ್ದ ಭಜಂತ್ರಿ, ಲೋಕಾಯುಕ್ತ ಅಧಿಕಾರಿಗಳ ದಾಳಿ ಸುಳಿವು ಸಿಗುತ್ತಿದ್ದಂತೆಯೇ ಸುಮಾರು 9 ಲಕ್ಷ ರೂ. ಹಣದ ಗಂಟನ್ನು ಕಿಟಕಿಯಿಂದ ಆಚೆ ಎಸೆದಿದ್ದಾರೆ. ಆದರೆ, ತಕ್ಷಣ ಗಮನಿಸಿದ ಲೋಕಾಯುಕ್ತ ಅಧಿಕಾರಿಗಳು ಅದನ್ನು ವಶಪಡಿಸಿಕೊಂಡಿದ್ದಾರೆ.

ರಾಣೆಬೆನ್ನೂರು ನಗರದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮೇಲ್ವಿಚಾರಕಿಯಾಗಿ ಕೆಲಸ ಮಾಡುತ್ತಿರುವ ಜ್ಯೋತಿ ಶಿಗ್ಲಿ ಅವರ ಮನೆ ಮೇಲೂ ಲೋಕಾ ಅಧಿಕಾರಿಗಳು ದಾಳಿ ಮಾಡಿದ್ದು, ದಾಖಲೆ ಪತ್ರಗಳ ಪರಿಶೀಲನೆ ನಡೆಸಿದ್ದಾರೆ.

ಪ್ರಚಾರಕರ ಪಟ್ಟಿಯಲ್ಲಿ ಹೆಸರಿಲ್ಲ; ಹಾಗಾಗಿ ಪ್ರಚಾರಕ್ಕೆ ಹೋಗಿಲ್ಲ: ಜಿಟಿಡಿ

ಬೆಂಗಳೂರು, ನ.12– ಜೆಡಿಎಸ್ ಸ್ಟಾರ್ ಪ್ರಚಾರಕರ ಪಟ್ಟಿಯಲ್ಲಿ ನನ್ನ ಹೆಸರು ಸೇರಿಸದ ಕಾರಣ ಉಪಚುನಾವಣೆ ಪ್ರಚಾರಕ್ಕೆ ಹೋಗಿಲ್ಲ ಎಂದು ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರೂ ಆದ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ತಿಳಿಸಿದ್ದಾರೆ.

ಚನ್ನಪಟ್ಟಣ ಪ್ರಚಾರಕ್ಕೆ ಗೈರಾಗಿರುವ ವಿಚಾರವಾಗಿ ಮಾಧ್ಯಮಕ್ಕೆ ಪ್ರತಿಕ್ರಿಯಿಸಿರುವ ಅವರು, ನನಗೆ ಏನಾದರೂ ಜವಾಬ್ದಾರಿ ಕೊಟ್ಟಿದ್ದಾರಾ?. 40 ಪ್ರಚಾರಕರ ಪಟ್ಟಿ ತಯಾರು ಮಾಡಿದ್ದಾರೆ. ಆದರೆ, ಕೋರ್ ಕಮಿಟಿ ಅಧ್ಯಕ್ಷರ ಹೆಸರನ್ನು ತೆಗೆದು ಹಾಕಿದ್ದಾರೆ. ಒಂದು ವೇಳೆ ತಾರಾ ಪ್ರಚಾರಕರ ಪಟ್ಟಿಯಲ್ಲಿ ಹೆಸರು ಇದ್ದಿದ್ದರೆ ಚುನಾವಣಾ ಪ್ರಚಾರಕ್ಕೆ ಹೋಗುತ್ತಿದ್ದೆ ಎಂದಿದ್ದಾರೆ.



ಚಾಮುಂಡಿ ಬೆಟ್ಟದ ಕಾರ್ಯಕ್ರಮದಲ್ಲಿ ನಾನು ಯಾರ ಪರವಾಗಿಯೂ ಮಾತನಾಡಿಲ್ಲ. ಇತ್ತ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜೀನಾಮೆಗೆ ಬಿಜೆಪಿ–ಜೆಡಿಎಸ್, ಅತ್ತ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ರಾಜೀನಾಮೆಗೆ ಕಾಂಗ್ರೆಸ್ ಸಚಿವರು ಒತ್ತಾಯಿಸುತ್ತಿದ್ದರು. ಹಾಗಾಗಿ ಎಫ್ಐಆರ್ ಆಧಾರದಲ್ಲಿ ರಾಜೀನಾಮೆ ನೀಡಬೇಕು ಎಂದಾದರೆ ಎಲ್ಲರೂ ರಾಜೀನಾಮೆ ಕೊಡಬೇಕಾಗುತ್ತದೆ ಎಂದಷ್ಟೇ ಹೇಳಿದ್ದೇನೆ ಅಷ್ಟೇ ಎಂದು ಸ್ಪಷ್ಟಪಡಿಸಿದರು.

ನಾನು ಪ್ರವಾಸದಲ್ಲಿದ್ದ ಸಂದರ್ಭದಲ್ಲೇ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕರ ಆಯ್ಕೆ ಸಭೆಯನ್ನು ನಿಗದಿಪಡಿಸಲಾಗಿತ್ತು. ಆಗಲೇ ನನ್ನನ್ನು ಬಿಟ್ಟಿದ್ದಾರೆ. ನನ್ನ ಮನಸು ಒಡೆದಿಲ್ಲ. ನಾನು ಹೇಗೆ ಇದ್ದೆನೋ ಹಾಗೆಯೇ ಇದ್ದೇನೆ. ನಾನು ಇಲ್ಲದಿರುವ ಸಂದರ್ಭವನ್ನು ನೋಡಿಯೇ ಕೋರ್ ಕಮಿಟಿ ಸಭೆ ಕರೆದಿದ್ದಾರೆ. ನಾನು ಏನು ಮಾಡೋದು? ನನ್ನನ್ನು ಪಕ್ಷದಿಂದ ದೂರ ಇಡಬೇಕು ಎಂಬ ಉದ್ದೇಶ ಇದೆಯೋ, ಇಲ್ಲವೋ ಎಂಬುದನ್ನು ಅವರೇ ಹೇಳಬೇಕು ಎಂದರು.

ವರ್ಷದ 365 ದಿನವೂ ನನಗೆ ಕೆಲಸ ಇದೆ. ಕೋರ್ ಕಮಿಟಿ ಅಧ್ಯಕ್ಷನಾಗಿ ರಾಜ್ಯ ಪ್ರವಾಸ ಮಾಡುವಾಗ ನನಗೆ ಕೆಲಸ ಇರಲಿಲ್ಲವೇ?. ಜೆಡಿಎಸ್‌ನ ಕೋರ್ ಕಮಿಟಿ ಅಧ್ಯಕ್ಷರಾಗಿ ರಾಜ್ಯ ಪ್ರವಾಸ ನಡೆಸಿದಾಗ ಟಿವಿ, ಪತ್ರಿಕೆಗಳಲ್ಲಿ ನನ್ನ ಹೆಸರು ದೊಡ್ಡದಾಗಿ ಪ್ರಕಟವಾಗುತ್ತಿದ್ದಂತೆಯೇ ನನ್ನ ಮೇಲೆ ಟಾರ್ಗೆಟ್ ಆರಂಭವಾಗಿತ್ತು ಎಂದು ಹೇಳಿದರು. ಉಪಚುನಾವಣೆ ಪ್ರಚಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು, ಜಿ.ಟಿ.ದೇವೇಗೌಡರಿಗೆ ಜೆಡಿಎಸ್‌ನಿಂದ ಹೊರಬರುವಂತೆ ಹೇಳಿದ್ದೇನೆ ಎಂದಿದ್ದರ ಬಗ್ಗೆ ಪ್ರತಿಕ್ರಿಯಿಸಿ, ಜೆಡಿಎಸ್ ತೊರೆಯುವಂತೆ ಸಿದ್ದರಾಮಯ್ಯ ಅವರು ನನ್ನ ಜೊತೆ ಮಾತನಾಡಿಲ್ಲ ಎಂದು ಇದೇ ವೇಳೆ ಸ್ಪಷ್ಟಪಡಿಸಿದರು.

ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ವತಿಯಿಂದ ದೇಶಭಕ್ತಿ, ಜನಪದ ಗೀತ ಗಾಯನ ಸ್ಪರ್ಧೆ



ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ವತಿಯಿಂದ ನಡೆದ ಮೈಸೂರು ವಿಭಾಗೀಯ ಮಟ್ಟದ ದೇಶಭಕ್ತಿಗೀತೆ ಗಾಯನ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಸ್ಕೌಟ್ಸ್ ಮತ್ತು ಗೈಡ್ಸ್‌ನ ರಾಜ್ಯ ಮುಖ್ಯ ಆಯುಕ್ತ ಪಿಜಿಆರ್ ಸಿಂಧ್ಯಾ ಪ್ರಶಸ್ತಿ ಪತ್ರ ವಿತರಿಸಿದರು.

ಮೈಸೂರು, ನ.12(ಎಸ್‌ಬಿಡಿ)– ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ವತಿಯಿಂದ ಮೈಸೂರು ವಿಭಾಗೀಯ ಮಟ್ಟದ ದೇಶಭಕ್ತಿಗೀತೆ ಹಾಗೂ ಜನಪದ ಗೀತ ಗಾಯನ ಸ್ಪರ್ಧೆ ಆಯೋಜಿಸಲಾಗಿತ್ತು.

ಮೈಸೂರಿನ ಗೋಕುಲಂ 3ನೇ ಹಂತದ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ಸಭಾಂಗಣದಲ್ಲಿ ಮಂಗಳವಾರ ನಡೆದ ಸ್ಪರ್ಧೆಯಲ್ಲಿ ಮೈಸೂರು, ಮಂಡ್ಯ, ಚಾಮರಾಜನಗರ ಹಾಸನ, ಚಿಕ್ಕಮಗಳೂರು, ಕೊಡಗು, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳ 600ಕ್ಕೂ ಅಧಿಕ ಮಕ್ಕಳು ಭಾಗವಹಿಸಿದ್ದರು.

ಸಮಗ್ರ ಪ್ರಶಸ್ತಿ: ಮೈಸೂರು ವಿಭಾಗದ ಮಟ್ಟದ ದೇಶಭಕ್ತಿ ಗೀತಗಾಯನ ಮತ್ತು ಜನಪದ ಗೀತಗಾಯನ ಸ್ಪರ್ಧೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆ ತಂಡ, ಸಮಗ್ರ ಪ್ರಶಸ್ತಿಯೊಂದಿಗೆ ರಾಜ್ಯ ಮಟ್ಟಕ್ಕೆ ಆಯ್ಕೆಯಾಯಿತು. ಕಬ್ ವಿಭಾಗದಲ್ಲಿ ಸುಳ್ಯದ ವಿವೇಕಾನಂದ ಶಾಲೆ ಹಾಗೂ ಬುಲ್‌ಬುಲ್ ವಿಭಾಗದಲ್ಲಿ ಮೂಡಬಿದ್ರೆಯ ಆಳ್ವಾಸ್ ಆಂಗ್ಲ ಮಾಧ್ಯಮ ಶಾಲೆ ತಂಡಕ್ಕೆ ಪ್ರಥಮ ಸ್ಥಾನ ದಕ್ಕಿತು.

ಸ್ಕೌಟ್ ವಿಭಾಗದಲ್ಲಿ ಮಂಗಳೂರಿನ ಸೇಂಟ್ ಅಲೋಶಿಯಸ್(ಪ್ರಥಮ), ಮೂಡಬಿದ್ರೆಯ ಆಳ್ವಾಸ್ ಆಂಗ್ಲ ಮಾಧ್ಯಮ ಶಾಲೆ(ದ್ವಿತೀಯ), ಗೈಡ್ ವಿಭಾಗದಲ್ಲಿ ಮೂಡಬಿದ್ರೆ ಆಳ್ವಾಸ್ ಶಾಲೆ,(ಪ್ರ), ರೋವರ್ ವಿಭಾಗದಲ್ಲಿ ಬೆಳ್ತಂಗಡಿಯ ವಾಣಿ ಪದವಿ ಪೂರ್ವ ಕಾಲೇಜು(ಪ್ರ), ಆಳ್ವಾಸ್ ಪದವಿ ಪೂರ್ವ ಕಾಲೇಜು(ದ್ವಿ), ರೇಂಜರ್ ವಿಭಾಗದಲ್ಲಿ ವಾಣಿ ಪದವಿ ಪೂರ್ವ ಕಾಲೇಜು(ಪ್ರ) ಹಾಗೂ ಮೂಡಬಿದ್ರೆ ಜೈನ್ ಪದವಿ ಪೂರ್ವ ಕಾಲೇಜು(ದ್ವಿ) ವಿದ್ಯಾರ್ಥಿಗಳು ಪ್ರಶಸ್ತಿಗೆ ಭಾಜನರಾದರು.

ವಿಭಾಗ ಮಟ್ಟದಲ್ಲಿ ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆದ ವಿದ್ಯಾರ್ಥಿಗಳು ತುಮಕೂರಿನಲ್ಲಿ ಡಿಸೆಂಬರ್ 1ರಂದು ನಡೆಯಲಿರುವ ರಾಜ್ಯ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ. ಸ್ಪರ್ಧೆಯ ಸಮಾರೋಪ ಸಮಾರಂಭದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್‌ನ ರಾಜ್ಯ ಮುಖ್ಯ ಆಯುಕ್ತ ಪಿಜಿಆರ್ ಸಿಂಧ್ಯಾ, ಬಿ.ಕೆ.ಬಸವರಾಜು, ಅಬ್ದುಲ್ ಜಮೀಲ್, ಶಾಮಲಾ ಮತ್ತಿತರರರು ಭಾಗವಹಿಸಿದ್ದರು.

ಹಣಕಾಸು ವಿಚಾರಕ್ಕೆ ವ್ಯಕ್ತಿ ಮೇಲೆ ಮಾರಣಾಂತಿಕ ಹಲ್ಲೆ

ಮೈಸೂರು, ನ.12(ಎಸ್‌ಪಿಎನ್)– ಹಣಕಾಸು ವಿಚಾರಕ್ಕೆ ವ್ಯಕ್ತಿ ಮೇಲೆ ಕುಡುಗೋಲಿನಿಂದ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ಮೈಸೂರಿನ ಬೋಗಾದಿ ರಿಂಗ್ ರಸ್ತೆಬಳಿ ಮಂಗಳವಾರ ರಾತ್ರಿ ನಡೆದಿದೆ. ಮರಟಿಕ್ಯಾತನಹಳ್ಳಿ ನಿವಾಸಿ ಹೊನ್ನೇಗೌಡ ಹಲ್ಲೆಗೊಳಗಾದವರು. ಅದೇ ಗ್ರಾಮದ ನಿವಾಸಿ ಸಂದೀಪ್ ಹಲ್ಲೆ ಆರೋಪಿ. ಇಬ್ಬರೂ ದೂರದ ಸಂಬಂಧಿಗಳು.


ಘಟನೆ ವಿವರ: ಹೊನ್ನೇಗೌಡ, ಸಂದೀಪ್ ಬಳಿ ಲಕ್ಷಾಂತರ ರೂ ಪಡೆದು ವ್ಯವಹಾರ ಕೈಗೊಂಡಿದ್ದರು. ಕೊಟ್ಟ ಸಾಲ ವಾಪಸ್ ನೀಡುವಂತೆ ಸಂದೀಪ್ ಹಲವು ಬಾರಿ ತಿಳಿಸಿದರೂ ಹೊನ್ನೇಗೌಡ ಸಾಲ ಮರು ಪಾವತಿ ಮಾಡಿರಲಿಲ್ಲ. ತನಗೆ ಸೇರಿದ ನಿವೇಶನ ಮಾರಿ ಸಾಲ ನೀಡಿದ್ದ ಸಂದೀಪ್ ಮಂಗಳವಾರ ಬೋಗಾದಿ ರಿಂಗ್ ರೋಡ್ ಬಳಿ ಹೊನ್ನೇಗೌಡರನ್ನು ಕರೆಸಿಕೊಂಡು ಸಾಲ ಮರು ಪಾವತಿಸುವಂತೆ ಕೇಳಿಕೊಂಡಿದ್ದಾರೆ.



ಆದರೆ, ಸಾಲ ವಾಪಸ್ ನೀಡುವ ಬಗ್ಗೆ ಸಕಾರಾತ್ಮಕವಾಗಿ ಪ್ರತಿಕ್ರಿಯಿಸದ ಹಿನ್ನೆಲೆಯಲ್ಲಿ ನಡು ರಸ್ತೆಯಲ್ಲೇ ಹೊನ್ನೇಗೌಡನನ್ನು ಅಟ್ಟಾಡಿಸಿಕೊಂಡು ಸಂದೀಪ್ ಕುಡುಗೋಲಿನಿಂದ ಮಾರಣಾಂತಿಕ ಹಲ್ಲೆ ನಡೆಸಿದ್ದಾನೆ. ಈ ವೇಳೆ ನೆರೆದಿದ್ದ ಸಾರ್ವಜನಿಕರು ಮೂಕಪ್ರೇಕ್ಷಕರಾಗಿ ನಿಂತಿದ್ದರೆ ಹೊರತು ಹಲ್ಲೆ ನಡೆಸುವುದನ್ನು ತಡೆಯಲು ಮುಂದಾಗಲಿಲ್ಲ. ಬದಲಿಗೆ ತಮ್ಮ ಮೊಬೈಲ್‌ನಲ್ಲಿ ಹಲ್ಲೆ ದೃಶ್ಯ ಚಿತ್ರೀಕರಿಸುವಲ್ಲಿ ನಿರತರಾಗಿದ್ದರು.

ಈ ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಸರಸ್ವತಿಪುರಂ ಠಾಣೆ ಪೊಲೀಸರು, ಆರೋಪಿ ಸಂದೀಪ್ ಬಂಧಿಸಿ, ಆತನಿಂದ ಕುಡುಗೋಲು ವಶಕ್ಕೆ ಪಡೆದಿದ್ದಾರೆ. ಗಾಯಾಳು ಹೊನ್ನೇಗೌಡನನ್ನು ಚಿಕಿತ್ಸೆಗಾಗಿ ಸ್ಥಳೀಯ ಆಸ್ಪತ್ರೆಗೆ ದಾಖಲಿಸಿದ್ದಾರೆ. ಈ ಸಂಬಂಧ ಸರಸ್ವತಿಪುರಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಹೆಣ್ಮಕ್ಳು ಕಥೆ ಹೇಳ್ತಾರೆ’ ನಾಟಕ ; ಮಹಿಳಾ ಸಮುದಾಯದ ಯಾತನೆ ಅನಾವರಣ




ಮೈಸೂರು,ನ.12(ಪಿಎಂ)– ರಂಗಾಯಣದ ವತಿಯಿಂದ ಹಮ್ಮಿಕೊಂಡಿರುವ ರಂಗಭೀಷ್ಮ ಬಿ.ವಿ.ಕಾರಂತ ಕಾಲೇಜು ರಂಗೋತ್ಸವದಲ್ಲಿ ಮಂಗಳವಾರ ಪ್ರದರ್ಶನ ಕಂಡ ‘ಹೆಣ್ಮಕ್ಳು ಕಥೆ ಹೇಳ್ತಾರೆ’ ನಾಟಕವು ಮಹಿಳಾ ಸಮುದಾಯ ಅನುಭವಿಸುವ ಯಾತನೆಯನ್ನು ಕಣ್ಮುಂದೆ ತಂದಿತು.

ರಂಗಾಯಣದ ಭೂಮಿಗೀತದಲ್ಲಿ ಹುಣಸೂರಿನ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿನಿಯರು ಈ ಪ್ರದರ್ಶನದ ಮೂಲಕ ತಮ್ಮ ಅದ್ಭುತ ಅಭಿನಯ ಅನಾವರಣಗೊಳಿಸಿದರು. ರಂಗಾಯಣದ ಕಿರಿಯ ಕಲಾವಿದ ಎಂ.ಅರ್ಜುನ್ ಅವರ ರಚನೆ, ನಿರ್ದೇಶನದಲ್ಲಿ ಮೂಡಿಬಂದ ಈ ನಾಟಕದಲ್ಲಿ ಸದರಿ ಕಾಲೇಜಿನ 12 ವಿದ್ಯಾರ್ಥಿನಿಯರು ಗೃಹಿಣಿ, ವಯೋವೃದ್ಧೆ, ಯುವತಿ, ವೈದ್ಯೆ, ವಿದ್ಯಾರ್ಥಿನಿ ಸೇರಿದಂತೆ ಮೊದಲಾದ ಪಾತ್ರಗಳ ಮೂಲಕ ಪ್ರೇಕ್ಷಕರ ಮನಸೆಳೆದರು.

ನಾಟಕದ ಒಂದು ಗಂಟೆ ಎರಡು ನಿಮಿಷದ ಅವಧಿಯಲ್ಲಿ 10 ಕಥೆಗಳ ಮೂಲಕ ಹೆಣ್ಣಿನ ಮೇಲೆ ನಡೆಯುವ ಶೋಷಣೆ ಜೊತೆಗೆ ಹೆಣ್ಣೇ ಹೆಣ್ಣನ್ನು ಶೋಷಣೆ ಮಾಡುವ ದೃಶ್ಯಗಳನ್ನು ಮೂಡಿಸಿ ಪ್ರೇಕ್ಷಕರನ್ನು ಚಿಂತನೆಗೆ ಹಚ್ಚುವಲ್ಲಿ ವಿವಿಧ ಪಾತ್ರಧಾರಿಗಳಾಗಿ ಅಭಿನಯಿಸಿದ ವಿದ್ಯಾರ್ಥಿಯರು ಯಶಸ್ವಿಯಾದರು.

ಯೋಗ ಗುರು ಶರತ್ ಜೋಯಿಸ್‌ರಿಗೆ ಶ್ರದ್ಧಾಂಜಲಿ



ಹೆಸರಾಂತ ಯೋಗ ಗುರು ಮೈಸೂರಿನ ಶರತ್ ಜೋಯಿಸ್ ಅವರ ಅಕಾಲಿಕ ಅಗಲಿಕೆ ಹಿನ್ನೆಲೆಯಲ್ಲಿ ಅಪೂರ್ವ ಸ್ನೇಹ ಬಳಗ ಹಾಗೂ ಜನಮನ ವೇದಿಕೆ ವತಿಯಿಂದ ಮೈಸೂರಿನ ಚಾಮುಂಡಿಪುರಂ ವೃತ್ತದಲ್ಲಿ ಮೇಣದ ಬತ್ತಿ ಬೆಳಗಿ ಶ್ರದ್ಧಾಂಜಲಿ ಸಲ್ಲಿಸಲಾಯಿತು. ನಗರ ಪಾಲಿಕೆ ಮಾಜಿ ಸದಸ್ಯ ಮ.ವಿ.ರಾಮ್ ಪ್ರಸಾದ್, ರಾಕೇಶ್ ಭಟ್, ಕಡಕೊಳ ಜಗದೀಶ್, ಅಪೂರ್ವ ಸುರೇಶ್, ಭಾನುಮೋಹನ್, ನಾಗೇಂದ್ರ, ವೆಂಕಟರಾವ್, ಮಹಾನ್ ಶ್ರೇಯಸ್, ಸುಚಿಂದ್ರ, ಅರವಿಂದ, ಸೋಮೇಶ್, ಪ್ರಕಾಶ್ ಅರಸ್, ರಾಮು, ಲಕ್ಷ್ಮಣ, ಮಧು, ಚಂದ್ರಶೇಖರ್, ಮಹೇಶ್, ಯೋಗೇಶ್ ಯಾದವ್, ರಾಜೇಂದ್ರ ಮಹೇಶ್ ಅರಸ್, ಶ್ರೀಕಾಂತ್ ಕಶ್ಯಪ್ ಮತ್ತಿತರರು ಭಾಗವಹಿಸಿದ್ದರು.

ನಾಳೆಯಿಂದ ನ.26ರವರೆಗೆ ಆಯ್ದ ದಿನಗಳಲ್ಲಿ ಆಹಾರ ಸುರಕ್ಷತೆ ಪರವಾನಗಿ ಪಡೆಯುವ ವಿಶೇಷ ಅಭಿಯಾನ

ಮೈಸೂರು,ನ.12(ಪಿಎಂ)– ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದಿಂದ ಪರವಾನಗಿ ಪಡೆಯುವ ಮತ್ತು ನೋಂದಣಿ ಮಾಡಿಸುವ ಸಂಬಂಧ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಹಣ್ಣು ಮತ್ತು ತರಕಾರಿ ಮಾರಾಟಗಾರರಿಗೆ ನ.14ರಿಂದ 26ರವರೆಗಿನ ಆಯ್ದ ದಿನಗಳಲ್ಲಿ ವಿಶೇಷ ಅಭಿಯಾನ ಹಮ್ಮಿಕೊಳ್ಳಲಾಗಿದೆ.

ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆಯಡಿ ನೋಂದಣಿ ಮಾಡಿಸಲು, ಪರವಾನಗಿ ಪಡೆಯಲು ವಿಶೇಷ ಅಭಿಯಾನ ಹಮ್ಮಿಕೊಂಡಿದ್ದು, ನ.14ರಂದು ಬೆಳಗ್ಗೆ 7ರಿಂದ ಮಧ್ಯಾಹ್ನ 1ರವರೆಗೆ ಮೈಸೂರಿನ ಸಯ್ಯಾಜಿರಾವ್ ರಸ್ತೆಯ ಎಪಿಎಂಸಿ ಸಬ್ ಯಾರ್ಡ್ ಆವರಣದಲ್ಲಿ ಹಣ್ಣು ಮತ್ತು ತರಕಾರಿ ಮಾರಾಟಗಾರರು ಪರವಾನಗಿ ಹಾಗೂ ನೋಂದಣಿ ಮಾಡಿಸಿಕೊಳ್ಳಬಹುದು.

ಅಂತೆಯೇ ನ.16ರಂದು ಬೆಳಗ್ಗೆ 7ರಿಂದ ಮಧ್ಯಾಹ್ನ 1ರವರೆಗೆ ಮಾಲ್ ಆಫ್ ಮೈಸೂರು ಸಮೀಪದ ತರಕಾರಿ ಮಾರುಕಟ್ಟೆಯಲ್ಲಿ ಹಣ್ಣು ಮತ್ತು ತರಕಾರಿ ಮಾರಾಟಗಾರರಿಗೆ ಅಭಿಯಾನ ಮುಂದುವರೆಯಲಿದೆ. ಅದೇ ರೀತಿ ನ.21 ಮತ್ತು 22ರಂದು ಎರಡು ದಿನಗಳು ಬೆಳಗ್ಗೆ 10ರಿಂದ ಮಧ್ಯಾಹ್ನ 12ರವರೆಗೆ ತಿಲಕನಗರದ ಉಮ್ಮರ್‌ಖಯಾಂ ರಸ್ತೆಯ ಮುಖ್ಯ ಆಹಾರ ಪ್ರಯೋಗಾಲಯ ಆವರಣದಲ್ಲಿರುವ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ ಅಂಕಿತ ಅಧಿಕಾರಿಗಳ ಕಚೇರಿಯಲ್ಲಿ ಹಾಪ್‌ಕಾಮ್ಸ್ ಮತ್ತು ಅಂಗಡಿಗಳಲ್ಲಿ ಹಣ್ಣು–ತರಕಾರಿ ಮಾರುವವರಿಗಾಗಿ ಅಭಿಯಾನ ನಡೆಯಲಿದೆ.

ನ.26ರಂದು ಬೆಳಗ್ಗೆ 7ರಿಂದ 11ರವರೆಗೆ ಹೆಬ್ಬಾಳ ಮಾರುಕಟ್ಟೆಯಲ್ಲಿ ಬೀದಿಬದಿ ಹಣ್ಣು ಮತ್ತು ತರಕಾರಿ ವ್ಯಾಪಾರಸ್ಥರಿಗಾಗಿ ಅಭಿಯಾನ ನಡೆಯಲಿದೆ ಎಂದು ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ ಅಂಕಿತ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ವಿವಿಧೆಡೆ ನೀರು ಸರಬರಾಜಲ್ಲಿ ವ್ಯತ್ಯಯ

ಮೈಸೂರು, ನ.12(ಎಸ್‌ಪಿಎನ್)– ಮೈಸೂರು ನಗರಕ್ಕೆ ನೀರು ಸರಬರಾಜು ಮಾಡುವ ಹೊಂಗಳ್ಳಿ 2ನೇ ಹಂತದ ಬೂಸ್ಟರ್ ಯಂತ್ರಾಗಾರದಲ್ಲಿ ನ.14ರಂದು ತುರ್ತು ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದರಿಂದ ನೀರು ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ನ.14ರಂದು ಹೆಚ್.ಎಲ್.ಆರ್. ಆಶ್ರಿತ ಪ್ರದೇಶಗಳು, ಮಂಡಿ ಮೊಹಲ್ಲಾ, ಲಷ್ಕರ್ ಮೊಹಲ್ಲಾ, ಯಾದವಗಿರಿ, ಬನ್ನಿಮಂಟಪ, ಎ.ಬಿ.ಸಿ ಬಡಾವಣೆ, ಪುಲಕೇಶಿ ರಸ್ತೆ, ಮಂಡಿಮೊಹಲ್ಲಾ ವೀರನಗೆರೆ, ಸಿದ್ಧಿಖಿನಗರ, ಶಿವರಾತ್ರೀಶ್ವರ ನಗರ, ತಿಲಕ್‌ನಗರ, ಬಡೇಮಕಾನ್, ಹಲೀಂನಗರ, ದೇವರಾಜ ಮೊಹಲ್ಲಾ, ಲಷ್ಕರ್ ಮೊಹಲ್ಲಾ ಸುತ್ತಮುತ್ತಲಿನ ಪ್ರದೇಶಗಳು, ನಜರ್‌ಬಾದ್, ವಿದ್ಯಾರಣ್ಯಪುರಂ, ವಿಶ್ವೇಶ್ವರನಗರ, ಚಾಮುಂಡಿಪುರಂ, ಲೂರ್ದ್‌ನಗರ, ಮೀನಾಬಜಾರ್, ವಾರ್ಡ್ ಸಂ: 8, 17, 18, 19 23ರಿಂದ 27 ಮತ್ತು 40, 41, 55, 60, 61, 62 ಹಾಗೂ ಮೇಟಗಳ್ಳಿ, ಹೆಬ್ಬಾಳ ಕೈಗಾರಿಕಾ ಪ್ರದೇಶಗಳಿಗೆ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ನೀರು ಸರಬರಾಜು ಮತ್ತು ಒಳಚರಂಡಿ ಪಶ್ಚಿಮ ವಿಭಾಗದ ಕಾರ್ಯಪಾಲಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಆಪರೇಷನ್ ಬ್ಲೂ ಸ್ಟಾರ್’ ತೋರಿಸಿ ಸಿಖ್ ಯಾತ್ರಾರ್ಥಿಗಳಲ್ಲಿ ದ್ವೇಷ ಬಿತ್ತಲು ಪಾಕ್ ಯತ್ನ

ಚಂಡೀಗಢ, ನ.12– ಕರ್ತಾರ್‌ಪುರ ಕಾರಿಡಾರ್ ಮೂಲಕ ದರ್ಬಾರ್ ಸಾಹಿಬ್ ಗುರುದ್ವಾರಕ್ಕೆ ಭೇಟಿ ನೀಡುವ ಸಿಖ್ ಯಾತ್ರಾರ್ಥಿಗಳಿಗೆ ಆಪರೇಷನ್ ಬ್ಲೂ ಸ್ಟಾರ್ ವಿಡಿಯೋಗಳನ್ನು ತೋರಿಸಿ ದ್ವೇಷ ಹರಡುತ್ತಿರುವ ಪಾಕಿಸ್ತಾನಕ್ಕೆ ತಿರುಗೇಟು ನೀಡಲು ಭಾರತ ಮುಂದಾಗಿದೆ.

ಸಿಖ್ ಯಾತ್ರಾರ್ಥಿಗಳಲ್ಲಿ ದೇಶ ಭಕ್ತಿ ಹೆಚ್ಚಿಸಲು ಹಾಗೂ ನಮ್ಮ ಸೇನೆಯ ಧೈರ್ಯ,ಸ್ಥೈರ್ಯ ಪ್ರದರ್ಶಿಸಲು ಗಡಿ ಭದ್ರತಾ ಪಡೆ (ಬಿಎಸ್‌ಎಫ್) ದೇಶಭಕ್ತಿ ಸಿನಿಮಾಗಳನ್ನು ಪ್ರದರ್ಶಿಸಲು ಕಾರ್ಯವಿಧಾನಗಳನ್ನು ರೂಪಿಸಿದೆ ಎಂದು ತಿಳಿದುಬಂದಿದೆ.

ಗುರುದ್ವಾರಕ್ಕೆ ಭೇಟಿ ನೀಡುವ ಸಿಖ್ ಯಾತ್ರಾರ್ಥಿಗಳಲ್ಲಿ ಭಾರತ ವಿರೋಧಿ ಭಾವನೆಯನ್ನು ಹುಟ್ಟುಹಾಕಲು ಇಂಟರ್–ಸರ್ವೀಸಸ್ ಇಂಟೆಲಿಜೆನ್ಸ್ ಮತ್ತು ಪಾಕಿಸ್ತಾನ ಆಪರೇಷನ್ ಬ್ಲೂ ಸ್ಟಾರ್ ವಿಡಿಯೋಗಳನ್ನು ತೋರಿಸುತ್ತಿದ್ದು, ಭಾರತಕ್ಕೆ ಮರಳಿದ ಬಳಿಕ ದೇಶ ವಿರೋಧಿ ಚಟುವಟಿಕೆಗಳಲ್ಲಿ ಭಾಗಿಯಾಗುವಂತೆ ಪ್ರೇರೇಪಿಸುವ ಕೆಲಸ ಮಾಡುತ್ತಿದೆ. ಅಲ್ಲದೆ, ದೇಶ ವಿರೋಧಿ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವವರಿಗೆ ಸಂಪೂರ್ಣ ಬೆಂಬಲ ನೀಡುವ ಭರವಸೆಯನ್ನೂ ನೀಡುತ್ತಿದ್ದಾರೆಂದು ಮೂಲಗಳಿಂದ ತಿಳಿದುಬಂದಿದೆ.

ಪಾಕಿಸ್ತಾನದ ಈ ದುರ್ವರ್ತನೆಗೆ ಬಿಎಸ್‌ಎಫ್ ಈ ಹಿಂದೆ ತೀವ್ರವಾಗಿ ಆಕ್ಷೇಪ ವ್ಯಕ್ತಪಡಿಸಿತ್ತು. ಬಳಿಕ ವಿಡಿಯೋ ಪ್ರದರ್ಶನವನ್ನು ಪಾಕಿಸ್ತಾನ ನಿಲ್ಲಿಸಿತ್ತು. ಆದರೀಗ ಮತ್ತೆ ತನ್ನ ದುರ್ಬುದ್ಧಿಯನ್ನು ಪ್ರದರ್ಶಿಸುತ್ತಿದೆ ಎಂದು ಮೂಲಗಳು ತಿಳಿಸಿವೆ.

ಈ ಹಿನ್ನೆಲೆಯಲ್ಲಿ ಪಾಕಿಸ್ತಾನಕ್ಕೆ ತಿರುಗೇಟು ನೀಡುವ ಸಲುವಾಗಿ ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಸಿಖ್ ಯಾತ್ರಾರ್ಥಿಗಳಲ್ಲಿ ದೇಶದ ಭಕ್ತಿಯನ್ನು ಹೆಚ್ಚಿಸಲು ಹಲವು ಕ್ರಮಗಳ ರೂಪಿಸಲು ಮುಂದಾಗಿದೆ ಎಂದು ತಿಳಿದುಬಂದಿದೆ.

ನ.16ರಂದು ಹಿರಿಯ ಸಹಕಾರಿಗಳಿಗೆ ಪ್ರಶಸ್ತಿ ಪ್ರದಾನ ಸಮಾರಂಭ

ಮೈಸೂರು,ನ.12(ಪಿಎಂ)– ಹೋಟೆಲು ಮಾಲೀಕರ ಪತ್ತಿನ ಸಹಕಾರ ಸಂಘದ ವತಿಯಿಂದ ನ.16ರಂದು ಸಂಜೆ 5ಕ್ಕೆ ಮೈಸೂರಿನ ಯಾದವಗಿರಿಯಲ್ಲಿರುವ ದಾಸ್‌ಪ್ರಕಾಶ್ ಪ್ಯಾರಡೈಸ್ ಹೋಟೆಲ್‌ನಲ್ಲಿ ಸಹಕಾರ ಸಪ್ತಾಹದ ಪ್ರಯುಕ್ತ ಹಿರಿಯ ಸಹಕಾರಿಗಳಿಗೆ ಪ್ರಶಸ್ತಿ ಪ್ರದಾನ ಮತ್ತು ಪ್ರತಿಭಾ ಪುರಸ್ಕಾರ ಸಮಾರಂಭ ಹಮ್ಮಿಕೊಳ್ಳಲಾಗಿದೆ.

ಶ್ರೀ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಚಿಕ್ಕಮಗಳೂರು ಜಿಲ್ಲೆ ಗೌರಿಗದ್ದೆಯ ಶ್ರೀ ಅವಧೂತ ವಿನಯ ಗುರೂಜಿ ಆಶೀರ್ವಚನ ನೀಡಲಿದ್ದಾರೆ. ಗೃಹ ಸಚಿವ ಡಾ.ಜಿ.ಪರಮೇಶ್ವರ್ ಸಮಾರಂಭ' ಉದ್ಘಾಟಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಪ್ರಶಸ್ತಿ ಪ್ರದಾನ ಮಾಡಲಿದ್ದು, ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಸಾಧಕರನ್ನು ಸನ್ಮಾನಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಹಕಾರ ಇಲಾಖೆಯ ಉಪನಿಬಂಧಕ ಆರ್.ಮಂಜುನಾಥ್, ಹೋಟೆಲ್ ಮಾಲೀಕರ ಧರ್ಮದತ್ತಿಯ ಅಧ್ಯಕ್ಷ ರವಿಶಾಸ್ತ್ರಿ, ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಪಾಲ್ಗೊಳ್ಳಲಿದ್ದಾರೆ. ಹೋಟೆಲು ಮಾಲೀಕರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಾರಾಯಣ ವಿ.ಹೆಗಡೆ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ವಿಶ್ವಾಮಿತ್ರ ಗಾಯತ್ರಿ; ಶ್ರೀ ಕೃಷ್ಣಲೀಲೆ ನೃತ್ಯರೂಪಕ



ಮೈಸೂರು, ನ.12(ಎಸ್‌ಪಿಎನ್)– ಮೈಸೂರಿನ ಕುವೆಂಪುನಗರ ಗಾನಭಾರತಿ ಆವರಣದ ರಮಾ ಗೋವಿಂದ ಕಲಾವೇದಿಕೆಯಲ್ಲಿ ‘ವಿಶ್ವಾಮಿತ್ರ ಗಾಯತ್ರಿ’ ಹಾಗೂ ‘ಶ್ರೀ ಕೃಷ್ಣಲೀಲೆ’ ನೃತ್ಯರೂಪಕ ನಾಟಕ ಪ್ರದರ್ಶನಗೊಂಡು ಎಲ್ಲರ ಗಮನ ಸೆಳೆಯಿತು.

ಡಾ.ಜ್ಯೋತಿ ಶಂಕರ್ ರಚನೆಯ, ವಿದುಷಿ ಕಾಂಚನ ಶ್ರೀರಂಜಿನಿ ಸಂಗೀತ ಸಂಯೋಜನೆಯ ವಿದುಷಿ ಅನುಷಾ ವರುಣ್ ನೃತ್ಯ ಸಂಯೋಜನೆಯ ಹಾಗೂ ಮೈಸೂರಿನ ನೃತ್ಯತಿ ಕಲಾಶಾಲೆ ವಿದ್ಯಾರ್ಥಿಗಳು ಪ್ರಸ್ತುತ ಪಡಿಸಿದ ‘ವಿಶ್ವಾಮಿತ್ರ ಗಾಯತ್ರಿ’ ನೃತ್ಯರೂಪಕ ನಾಟಕ ಪ್ರೇಕ್ಷಕರ ಮನಗೆದ್ದಿತು.

ನಂತರ ವಿದುಷಿ ಉಷಾ ಪ್ರವೀಣ್ ರಚನೆಯ, ಮಂಗಳೂರಿನ ಕ್ಯಾಡ್ ಮೀಡಿಯಾ ಧ್ವನಿಗ್ರಹಣ, ವಿದ್ವಾನ್ ಯು.ಕೆ.ಪ್ರವೀಣ್ ನೃತ್ಯ ಸಂಯೋಜನೆ ಮತ್ತು ನಿರ್ದೇಶನ ಹಾಗೂ ಮಂಗಳೂರಿನ ಕದ್ರಿ ನೃತ್ಯ ವಿದ್ಯಾನಿಲಯದ ಚಾರಿಟೇಬಲ್ ಟ್ರಸ್ಟ್ ವಿದ್ಯಾರ್ಥಿಗಳು ಪ್ರಸ್ತುತ ಪಡೆಸಿದ ‘ಶ್ರೀ ಕೃಷ್ಣಲೀಲೆ’ ನೃತ್ಯರೂಪಕ ಎಲ್ಲರ ಗಮನ ಸೆಳೆಯಿತು.

‘ಸತ್ಯವನ್ನೇ ಹೇಳುತ್ತೇನೆ’ ಹೌಸ್‌ಫುಲ್ ಪ್ರದರ್ಶನ....



ಮೈಸೂರಿನ ಕಲಾಮಂದಿರ ಆವರಣದ ಕಿರುರಂಗ ಮಂದಿರದಲ್ಲಿ ಮಂಗಳವಾರವೂ ರಂಗಭೂಮಿ ಟ್ರಸ್ಟ್ ಕೊಡಗು ಪ್ರಸ್ತುತಿಯ ‘ಸತ್ಯವನ್ನೇ ಹೇಳುತ್ತೇನೆ’ ಕನ್ನಡ ನಾಟಕ ಹೌಸ್‌ಫುಲ್ ಪ್ರದರ್ಶನ ಕಂಡಿತು. ಚಿತ್ರದಲ್ಲಿ ನಾಟಕದ ದೃಶ್ಯವೊಂದನ್ನು ಕಾಣಬಹುದು.


ಇಂದಿನಿಂದ ಮೈಸೂರು ಚಳಿಗಾಲದ ರೇಸ್

ಫೆ.12ರವರೆಗೆ ವಿವಿಧ ದಿನಗಳಲ್ಲಿ 14 ದಿನಗಳ ಕಾಲ ಆಯೋಜನೆ

ಮೈಸೂರು,ನ.12(ಪಿಎಂ)–ಮೈಸೂರು ರೇಸ್ ಕ್ಲಬ್ (ಎಂಆರ್‌ಸಿ) ವತಿಯಿಂದ 2024–25ನೇ ಸಾಲಿನ ಮೈಸೂರು ಚಳಿಗಾಲದ ರೇಸ್ ಅನ್ನು ನ.13ರಿಂದ 2025ರ ಫೆ.12ರವರೆಗೆ ವಿವಿಧ ದಿನಗಳಲ್ಲಿ 14 ದಿನಗಳ ಕಾಲ ಆಯೋಜಿಸಲಾಗಿದೆ.

ನ.13ರಂದು ದಿ ರಾಜ್ಯೋತ್ಸವ ಟ್ರೋಫಿ ಮತ್ತು ದಿ ಎಸ್.ಎಂ.ಅತ್ತಾವುಲ್ಲಾಹಿ ಟ್ರೋಫಿ ರೇಸ್‌ಗಳು ನಡೆಯಲಿವೆ. ಅಂತೆಯೇ ನ.20ರಂದು ದಿ ಡಾ.ಎಂ.ಎನ್.ದೊರೆಸ್ವಾಮಿ ಮೆಮೋರಿಯಲ್ ಟ್ರೋಫಿ, ನ.27ರಂದು ದಿ ಡಿ.ವಿ.ವಿಶ್ವನಾಥ್ ಮೆಮೊರಿಯಲ್ ಟ್ರೋಫಿ, ಡಿ.4ರಂದು ದಿ ಡಾ.ಆರ್.ರಾಜೇಂದ್ರ ಪ್ರಸಾದ್ ಮೆಮೋರಿಯಲ್ ಟ್ರೋಫಿ, ಡಿ.11ರಂದು ದಿ ವಿಧಾತ್ರಿ ಮೋಟರ್ಸ್ ಕಪ್, ಡಿ.18ರಂದು ದಿ ಸಿ.ದಶರಥರಾಮ ಶೆಟ್ಟಿ ಮೆಮೋರಿಯಲ್ ಟ್ರೋಫಿ, ಡಿ.25ರಂದು ದಿ ಪಿ.ಎಂ.ಚನ್ನಬಸವಣ್ಣ ಮೆಮೋರಿಯಲ್ ಟ್ರೋಫಿ ರೇಸ್‌ಗಳು ಜರುಗಲಿವೆ.

2024ರ ಜ.3ರಂದು ದಿ ಚಾಮುಂಡಿ ಮಿಲಿಯನ್, ಜ.8ರಂದು ದಿ ಡಾ.ಈಶ್ವರಿ ಜಿ.ಕೆ.ಬಾಲಕೃಷ್ಣನ್ ಮೆಮೋರಿಯಲ್ ಟ್ರೋಫಿ, ಜ.15ರಂದು ದಿ ಎಂ. ಗೋವಿಂದಪ್ಪ ಮೆಮೋರಿಯಲ್ ಟ್ರೋಫಿ, ಜ.22ರಂದು ದಿ ಏರ್‌ಫೋರ್ಸ್ ಟ್ರೋಫಿ, ಜ.29ರಂದು ದಿ ಆಂದೋಲನ ಟ್ರೋಫಿ, ಫೆ.6ರಂದು ದಿ ಎಕ್ವೈನ್ ವೆಟರಿನರಿಯನ್ಸ್ ಟ್ರೋಫಿ ಮತ್ತು ಫೆ.12ರಂದು ದಿ ಶ್ರೀಕಂಠೀರವ ನರಸಿಂಹರಾಜ ಒಡೆಯರ್ ಮೆಮೋರಿಯಲ್ ಮಿಲಿಯನ್ ರೇಸ್‌ಗಳು ನಡೆಯಲಿವೆ (ರೇಸ್‌ನ ದಿನಾಂಕಗಳು ಬದಲಾವಣೆಗೆ ಒಳಪಟ್ಟಿರುತ್ತವೆ).



ಸಾಂದರ್ಭಿಕ ಚಿತ್ರ

ಅತ್ಯುತ್ತಮ ರೇಸಿಂಗ್ ಟ್ರ್ಯಾಕ್ ಒಳಗೊಂಡಂತೆ ಎಲ್ಲಾ ರೀತಿ ರೇಸಿಂಗ್ ಮೂಲಸೌಲಭ್ಯ ಕಲ್ಪಿಸಲಾಗಿದೆ. ಸೀಸನ್ ಕಪ್ ಹಾಗೂ ಟ್ರೋಫಿಗಳು ಸೇರಿದಂತೆ ಜಾಹೀರಾತಿನ ಷೇರು ಹಣವು 4,80,00,000 ಆಗಿರಬೇಕು. ಈ ಚಳಿಗಾಲದ ರೇಸ್‌ನಲ್ಲಿ ಚಾಮುಂಡಿ ಮಿಲಿಯನ್ ಹಾಗೂ ಶ್ರೀ ಕಂಠೀರವ ನರಸಿಂಹರಾಜ ಒಡೆಯರ್ ಮೆಮೋರಿಯಲ್ ಮಿಲಿಯನ್ ರೇಸ್‌ಗಳು ದೇಶಾದ್ಯಂತ ಅತ್ಯುತ್ತಮ ಕುದುರೆಗಳನ್ನು ಆಕರ್ಷಿಸುವುದು ವಿಶೇಷ.

ವಿವಿಧ ರೇಸ್‌ಗಳು ಹಾಗೂ ಟ್ರೋಫಿಗಳಿಗಾಗಿ ಕೊಡುಗೆದಾರರಿಗೆ ಧನ್ಯವಾದ ಅರ್ಪಿಸುತ್ತೇವೆ. ಪ್ರಸ್ತುತ ಮೈಸೂರು ರೇಸ್ ಕ್ಲಬ್‌ನಲ್ಲಿ ಸುಮಾರು 390 ಕುದುರೆಗಳು ಭಾಗವಹಿಸುತ್ತಿದ್ದು, ಹೊರರಾಜ್ಯಗಳ ಕುದುರೆಗಳು ರೇಸ್‌ನಲ್ಲಿ ಭಾಗವಹಿಸುವ ನಿರೀಕ್ಷೆಯಿದೆ. ಭಾರತದ ರೇಸಿಂಗ್ ವಲಯದ ಎಲ್ಲಾ ಪ್ರಮುಖ ರೈಡರ್‌ಗಳು ಸೇರಿದಂತೆ ಜಾಕಿಗಳು ಈ ರೇಸ್‌ನಲ್ಲಿ ಸವಾರಿ ಮಾಡುವ ನಿರೀಕ್ಷೆ ಇದೆ. ಸಾಕಷ್ಟು ಸಂಖ್ಯೆಯ ಬೆಟ್ಟಿಂಗ್ ಟರ್ಮಿನಲ್‌ಗಳು ಕಾರ್ಯಾಚರಣೆಯಲ್ಲಿವೆ.

ಈ ಚಳಿಗಾಲದ ರೇಸ್ ವೀಕ್ಷಿಸಲು ಸಾರ್ವಜನಿಕರಿಗೆ ಪ್ರವೇಶ ಶುಲ್ಕವನ್ನು ದಿನಕ್ಕೆ 200 ರೂ. ನಿಗದಿಪಡಿಸಲಾಗಿದೆ ಆಫ್‌ಕೋರ್ಸ್ ಬೆಟ್ಟಿಂಗ್‌ಗೆ ದಿನಕ್ಕೆ 100 ರೂ. ಪ್ರವೇಶ ಶುಲ್ಕ ಮುಂದುವರೆಸಲಾಗಿದೆ. ಎಂಆರ್‌ಸಿ ಫೇಸ್‌ಬುಕ್ ಮತ್ತು ಟ್ವಿಟರ್ ಖಾತೆಗಳನ್ನು ಹೊಂದಿದೆ. ನಮ್ಮ ವೆಬ್‌ಸೈಟ್‌ಗೆ (www.mysoreraceclub.com) ಲಾಗ್‌ಇನ್ ಆಗುವ ಮೂಲಕ ಲೈವ್ ರೇಸಿಂಗ್ ಅನ್ನು ವೀಕ್ಷಿಸಬಹುದು. ಈ ಚಳಿಗಾಲಯದ ರೇಸ್‌ನಲ್ಲಿ ಟಿಪ್‌ಸ್ಟರ್ ಟ್ರ್ಯಾಲಿ ಟ್ರೋಫಿಯನ್ನು ಮುಂದುವರೆಸಲು ಕ್ಲಬ್‌ನ ಸ್ಟೀವರ್ಡ್‌ಗಳು ಮುಂದುವರೆಸಲು ನಿರ್ಧರಿಸಿದ್ದಾರೆ. ನಿಯಮ ಮತ್ತು ನಿಬಂಧನೆಗಳು ಒಳಗೊಂಡಂತೆ ಸದರಿ ಟ್ರೋಫಿ ಮುಂದುವರೆಸಲಾಗುತ್ತಿದೆ ಎಂದು ಎಂಆರ್‌ಸಿ ಅಧ್ಯಕ್ಷರೂ ಆದ ಸೀನಿಯರ್ ಸ್ಟೀವರ್ಡ್ ಕೆ.ಎನ್.ಸುರೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಚ್.ಡಿ.ಕೋಟೆಯಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ, 443.35 ಕೋಟಿ ಮೌಲ್ಯದ ವಿವಿಧ ಕಾಮಗಾರಿಗಳಿಗೆ ಶಂಕುಸ್ಥಾಪನೆ

ಐದು ಗ್ಯಾರಂಟಿ ಜೊತೆಗೆ ಅಭಿವೃದ್ಧಿಗೂ ಅಗತ್ಯ ಅನುದಾನ

ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ



ಹೆಚ್.ಡಿ.ಕೋಟೆ ಪದವಿ ಪೂರ್ವ ಕಾಲೇಜು ಆವರಣದಲ್ಲಿ ಹಮ್ಮಿಕೊಂಡಿದ್ದ ಆದಿಕವಿ ಶ್ರೀಮಹರ್ಷಿ ವಾಲ್ಮೀಕಿ ಜಯಂತಿ ಹಾಗೂ ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರದ 443.35 ಕೋಟಿ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕು ಸ್ಥಾಪನೆ, ಉದ್ಘಾಟನಾ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು.



ಮಹರ್ಷಿ ವಾಲ್ಮೀಕಿ ಪ್ರತಿಮೆ ಮೆರವಣಿಗೆಗೆ ರಾಜನಹಳ್ಳಿ ಮಠದ ಪ್ರಸನ್ನಾನಂದ ಸ್ವಾಮೀಜಿ, ಶಾಸಕ ಅನಿಲ್ ಚಾಲನೆ ನೀಡಿದರು. ಈ ವೇಳೆ ಚಿಕ್ಕಮಾದು ಅಭಿಮಾನಿ ಬಳಗದ ಅಧ್ಯಕ್ಷ ರಾಜನಾಯಕ, ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ನಾಗರಾಜು, ತಾಲೂಕು ನಾಯಕರ ಸಂಘದ ಅಧ್ಯಕ್ಷ ಶಂಭುಲಿಂಗನಾಯಕ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಏಜಾಸ್ ಪಾಷ, ಸೋಮೇಶ್, ಅಶೋಕ್, ಸೌಮ್ಯ ಇದ್ದರು.

ಹೆಚ್.ಡಿ.ಕೋಟೆ, ನ.12(ಬೀಚನಹಳ್ಳಿ ಮಂಜು)– ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದು ನಮ್ಮ ಸರ್ಕಾರ ನುಡಿದಂತೆ ನಡೆದಿದೆ. ಗ್ಯಾರಂಟಿ ಯೋಜನೆಗಳಿಗೆ ವಾರ್ಷಿಕ 58 ಸಾವಿರ ಖರ್ಚು ಮಾಡುತ್ತಿದ್ದರೂ, ಅಭಿವೃದ್ಧಿ ಯೋಜನೆಗಳಿಗೆ ಅಗತ್ಯ ಅನುದಾನ ನೀಡಲಾಗುತ್ತಿದೆ. ಇದಕ್ಕೆ ಇಂದು ಶಂಕುಸ್ಥಾಪನೆ ಮಾಡುತ್ತಿರುವ ಕಾಮಗಾರಿಗಳೇ ಸಾಕ್ಷಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಹೆಚ್.ಡಿ.ಕೋಟೆ ಪದವಿ ಪೂರ್ವ ಕಾಲೇಜು ಆವರಣದಲ್ಲಿ ಹಮ್ಮಿಕೊಂಡಿದ್ದ ಆದಿಕವಿ ಶ್ರೀಮಹರ್ಷಿ ವಾಲ್ಮೀಕಿ ಜಯಂತಿ ಹಾಗೂ ಹೆಚ್.ಡಿ.ಕೋಟೆ ವಿಧಾನ ಸಭಾ ಕ್ಷೇತ್ರದ 443.35 ಕೋಟಿ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕು ಸ್ಥಾಪನೆ, ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ರಾಜ್ಯ, ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ ಮಾಡುತ್ತಾ ಬಂದಿದ್ದೇವೆ. ಕಲೆ, ಸಾಹಿತ್ಯ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಜನಾಂಗದವರಿಗೆ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗುತ್ತಿದೆ. 24 ಸಾವಿರ ಶ್ಲೋಕಗಳಿರುವ ರಾಮಾಯಣ ಮಹಾಗ್ರಂಥವನ್ನು ಮಹರ್ಷಿ ವಾಲ್ಮೀಕಿ ಅವರು ಸಂಸ್ಕೃತದಲ್ಲಿ ರಚನೆ ಮಾಡಿದರು. ಆ ಕಾಲದಲ್ಲಿ ತಳ ಸಮುದಾಯಕ್ಕೆ ಸೇರಿದವರು ಸಂಸ್ಕೃತವನ್ನು ಕಲಿಯಲು ಅವಕಾಶ ಇರಲಿಲ್ಲ. ಅಂತ ಕಾಲದಲ್ಲಿಯೂ ಸಂಸ್ಕೃತ ಕಲಿತು ರಾಮಾಯಣ ರಚನೆ ಮಾಡಿರುವುದು ನಮ್ಮೆಲ್ಲರ ಹೆಮ್ಮೆಯ ವಿಷಯ ಎಂದರು.

ವಿದ್ಯೆ ಯಾರಪ್ಪನ ಸ್ವತ್ತು ಅಲ್ಲ. ವಿದ್ಯಾವಂತರಾಗಲು ಯಾವುದೇ ಜಾತಿ ಅವಶ್ಯಕತೆ ಇಲ್ಲ. ವಿದ್ಯೆ ಕಲಿಯಲು ಪ್ರತಿಯೊಬ್ಬರಿಗೂ ಸಮಾನ ಅವಕಾಶ ಸಿಗಬೇಕು. ನಿಮ್ಮ ಜೀವನವನ್ನು ರೂಪಿಸಿಕೊಳ್ಳುವ ಶಿಲ್ಪಿ ನೀವೇ ಎಂದು ಮಹರ್ಷಿ ವಾಲ್ಮೀಕಿ ತಿಳಿಸಿದ್ದಾರೆ. ಜೀವನದ ತತ್ವ–ಆದರ್ಶಗಳನ್ನು ಕಲಿಯಲು ರಾಮಾಯಣ ಮಹಾಗ್ರಂಥದಿಂದ ಸಾಧ್ಯ. ರಾಮರಾಜ್ಯ ಎಂದು ಮಹಾತ್ಮ ಗಾಂಧೀಜಿ ಕರೆದರು. ರಾಮ ರಾಜ್ಯದಲ್ಲಿ ಯಾವುದೇ ಜಾತಿ, ಮೇಲು ಕೀಳು ಭಾವನೆ ಇರಬಾರದು. ಸಮಸಮಾಜದ ನಿರ್ಮಾಣಕ್ಕೆ ಪ್ರತಿಯೊಬ್ಬರೂ ಕೈಜೋಡಿಸಿ ಎಂದರು.

ಇಂದು 443.35 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ಮಾಡಲಾಗುತ್ತಿದೆ. ನಾವು ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದ್ದರೂ ಅಭಿವೃದ್ಧಿ ಕಾರ್ಯಗಳಿಗೆ ಅನುದಾನವನ್ನು ನೀಡಲಾಗುತ್ತಿದೆ. ಶಕ್ತಿ ಯೋಜನೆಯಡಿ 324 ಕೋಟಿ ಮಹಿಳೆಯರು ಉಚಿತ ಪ್ರಯಾಣ ಮಾಡಿದ್ದಾರೆ.

1.64 ಕೋಟಿ ಕುಟುಂಬಗಳಿಗೆ ಉಚಿತ ವಿದ್ಯುತ್ ನೀಡಲಾಗುತ್ತಿದೆ. 1.22 ಕೋಟಿ ಮನೆ ಯಜಮಾನಿಯರಿಗೆ ಮಾಸಿಕ 2000 ರೂ. ನೀಡಲಾಗುತ್ತಿದೆ. ಅನ್ನಭಾಗ್ಯ ಯೋಜನೆಯಡಿ ಬಿಪಿಎಲ್ ಕುಟುಂಬದ ಸದಸ್ಯರಿಗೆ 5 ಅಕ್ಕಿ ಹಾಗೂ 5 ಅಕ್ಕಿಗೆ ಹಣ ನೀಡಲಾಗುತ್ತಿದೆ. ಯುವನಿಧಿ ಯೋಜನೆಯಡಿ ಡಿಗ್ರಿ ಮಾಡಿದವರಿಗೆ 3 ಸಾವಿರ ಹಾಗೂ ಡಿಪ್ಲೊಮಾ ಮಾಡಿದವರಿಗೆ 1500 ರೂ. ನೀಡಲಾಗುತ್ತಿದೆ.

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಅಭಿವೃದ್ಧಿಗೆ 2013ರಲ್ಲಿ ಎಸ್‌ಸಿಪಿ ಹಾಗೂ ಟಿಎಸ್‌ಪಿ ಕಾನೂನನ್ನು ಜಾರಿಗೆ ತಂದು ಅಭಿವೃದ್ಧಿಗೆ ಅನುದಾನವನ್ನು ಮೀಸಲಿಟ್ಟು ಬಳಕೆ ಮಾಡಲಾಗುತ್ತಿದೆ. ಬಸವ, ಬುದ್ಧ, ಮಹಾತ್ಮ ಗಾಂಧೀಜಿ, ಅಂಬೇಡ್ಕರ್ ಅವರ ತತ್ವಗಳಲ್ಲಿ ನಂಬಿಕೆ ಇಟ್ಟುಕೊಂಡು ಬಡವರ ಅಭಿವದ್ಧಿಗೆ ಶ್ರಮಿಸುವುದು ನನ್ನ ಗುರಿಯಾಗಿದೆ. ಕೋಟೆಯಲ್ಲಿ ವಾಲ್ಮೀಕಿ ಭವನ ನಿರ್ಮಾಣಕ್ಕೆ 2 ಕೋಟಿ ಅನುದಾನ ನೀಡಲಾಗುವುದು ಎಂದು ತಿಳಿಸಿದರು.

ಸಂಸದ ಸುನೀಲ್ ಬೋಸ್ ಮಾತನಾಡಿ, ಶಾಸಕ ಅನಿಲ್ ಅವರು ಉತ್ತಮ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಿದ್ದಾರೆ. ಅವರು ಸತತವಾಗಿ 2 ಬಾರಿ ಗೆದ್ದು ಹೆಚ್.ಡಿ.ಕೋಟೆ ಕ್ಷೇತ್ರದಲ್ಲಿ ಇತಿಹಾಸ ಸೃಷ್ಟಿಸಿದ್ದಾರೆ. ಈ ಕ್ಷೇತ್ರದಲ್ಲಿ ಯಾರು ಸತತವಾಗಿ 2 ಬಾರಿ ಗೆದ್ದಿದ್ದಾರೆ. ಇವರು ಟೇಬಲ್ ಟು ಟೇಬಲ್ ಹೋಗಿ ತಮ್ಮ ಕ್ಷೇತ್ರದ ಕೆಲಸವನ್ನು ಮಾಡಿಸಿಕೊಂಡು ಬಂದು ಕ್ಷೇತ್ರವನ್ನು ಮಾದರಿ ಕ್ಷೇತ್ರ ಮಾಡುವ ಗುರಿ ಹೊಂದಿದ್ದಾರೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಸಕ ಅನಿಲ್ ನನ್ನನ್ನು 2 ಬಾರಿ ಶಾಸಕನಾಗಿ ಆಯ್ಕೆ ಮಾಡಿರುವ ಕ್ಷೇತ್ರದ ಜನತೆಗೆ ನನ್ನ ಧನ್ಯವಾದಗಳು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕ್ಷೇತ್ರಕ್ಕೆ ಅತೀ ಹೆಚ್ಚು ಅನುದಾನ ನೀಡಿ ಅಭಿವೃದ್ಧಿಗೆ ಸಹಕರಿಸಿದ್ದಾರೆ ಎಂದರು.

ಮಹರ್ಷಿ ವಾಲ್ಮೀಕಿ ರಾಮಾಯಣ ರಚಿಸಿದರು. ಇದರಿಂದ ಶ್ರೀರಾಮ ಅವರ ಬಗ್ಗೆ ಜಗತ್ತಿಗೆ ತಿಳಿಸಿದರು. ಇದರಿಂದ ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣದಲ್ಲಿ ಪರೋಕ್ಷವಾಗಿ ವಾಲ್ಮೀಕಿ ಅವರು ಕಾರಣರಾಗಿದ್ದಾರೆ. ಸಿದ್ದರಾಮಯ್ಯ ಅವರು ಬೆಂಗಳೂರಿನಲ್ಲಿ ವಾಲ್ಮೀಕಿ ಅವರ ಪ್ರತಿಮೆ ನಿರ್ಮಾಣ ಮಾಡಿದರು. ಪರಿವಾರ, ತಳವಾರ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿದವರು. ಹೆಚ್.ಡಿ.ಕೋಟೆಯಲ್ಲಿ ಮಹರ್ಷಿ ವಾಲ್ಮೀಕಿ ಭವನ ನಿರ್ಮಾಣಕ್ಕೆ 2 ಕೋಟಿ ಅನುದಾನದ ಅವಶ್ಯಕತೆ ಇದೆ. ಮೈಸೂರು–ಮಾನಂದವಾಡಿ ರಸ್ತೆಯನ್ನು ಮೇಲ್ದರ್ಜೆಗೆ ಏರಿಸಬೇಕು. ರಾಷ್ಟ್ರೀಯ ಹೆದ್ದಾರಿ ಮಾಡಲು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ. ಕ್ಷೇತ್ರದ ಅಭಿವೃದ್ಧಿಗೆ ಇನ್ನೂ ಹೆಚ್ಚಿನ ಅನುದಾನವನ್ನು ನೀಡಬೇಕು ಎಂದು ಮುಖ್ಯಮಂತ್ರಿ ಅವರಿಗೆ ಮನವಿ ಮಾಡಿದರು.

ರಾಜನಹಳ್ಳಿ ಮಠದ ಶ್ರೀಪ್ರಸನ್ನಾನಂದ ಸ್ವಾಮೀಜಿ ಮಾತನಾಡಿ, ರತ್ನಾಕರ ಮೂಲತಃ ಬೇಡ ಇವರು ತಮ್ಮನ್ನು ಪರಿವರ್ತನೆ ಮಾಡಿಕೊಂಡು ಮಹರ್ಷಿ ವಾಲ್ಮೀಕಿ ಆಗಿ ರಾಮಾಯಣ ರಚನೆ ಮಾಡಿದರು. ರಾಮಾಯಣ ನಮ್ಮ ಜೀವನದಲ್ಲಿ ಹಾಸು ಹೊಕ್ಕಾಗಿದೆ. ರಾಮಾಯಣ ಎಂದರೆ ಅಣ್ಣ ತಮ್ಮಂದಿರ ಆಸ್ತಿ ಮತ್ತು ಅಧಿಕಾರ ತ್ಯಾಗಕ್ಕಾಗಿ ನಡೆದದ್ದು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮು ದಾಯಕ್ಕೆ ಇನ್ನೂ ಹೆಚ್ಚಿನ ಅನುದಾನವನ್ನು ನೀಡಿ ಅಭಿವೃದ್ಧಿಗೆ ಸಹಕರಿಸಬೇಕು ಎಂದು ಮುಖ್ಯಮಂತ್ರಿಗಳಿಗೆ ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಫಲಾನುಭವಿಗಳಿಗೆ ವಿವಿಧ ಇಲಾಖೆಗಳ ಸವಲತ್ತುಗಳನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಶಾಸಕರಾದ ಡಿ.ರವಿಶಂಕರ್, ದರ್ಶನ್, ವಿಧಾನ ಪರಿಷತ್ ಸದಸ್ಯರಾದ ಡಾ. ಯತೀಂದ್ರ, ಡಾ.ಡಿ.ತಿಮ್ಮಯ್ಯ, ಪ್ರಾದೇಶಿಕ ಆಯುಕ್ತ ರಮೇಶ್, ದಕ್ಷಿಣ ವಲಯದ ಐಜಿಪಿ ಬೋರಲಿಂಗಯ್ಯ, ವಿವಿಧ ಮುಖಂಡರು, ಅಧಿಕಾರಿಗಳು ಉಪಸ್ಥಿತರಿದ್ದರು.

ಬಿ.ನಾಗೇಂದ್ರಗೆ ಮತ್ತೆ ಸಚಿವ ಸ್ಥಾನ!

ಹೆಚ್.ಡಿ.ಕೋಟೆ, ನ.12– ವಾಲ್ಮೀಕಿ ಮಂಡಳಿ ಹಗರಣದ ವಿವಾದಗಳಿಂದ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿ ಜೈಲುಪಾಲಾಗಿ ಜಾಮೀನು ಮೇಲೆ ಬಿಡುಗಡೆಯಾಗಿರುವ ಶಾಸಕ ಬಿ ನಾಗೇಂದ್ರ ಅವರನ್ನು ಸಚಿವ ಸಂಪುಟಕ್ಕೆ ಮತ್ತೆ ಸೇರಿಸಿಕೊಳ್ಳುವ ಸುಳಿವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನೀಡಿದ್ದಾರೆ.

ವಿವಿಧ ಅಭಿವೃದ್ಧಿ ಯೋಜನೆಗಳ ಉದ್ಘಾಟನೆ ಕಾರ್ಯಕ್ರಮದಲ್ಲಿ ನೆರೆದಿದ್ದ ಬೆಂಬಲಿಗರು ಮತ್ತು ನಾಯಕ ಸಮುದಾಯ ದವರಿಗೆ ಭರವಸೆ ನೀಡಿ ಮಾತನಾಡಿದ ಅವರು, ನಾಗೇಂದ್ರ ಅವರಿಗೆ ಶೀಘ್ರದಲ್ಲೇ ಸಚಿವ ಸ್ಥಾನ ನೀಡಲಾಗುವುದು ಎಂದು ಹೇಳಿದರು. ಹೆಚ್.ಡಿ.ಕೋಟೆ ಶಾಸಕ ಸಿ.ಅನಿಲ್ ಕುಮಾರ್ ಅವರಿಗೆ ಸಚಿವ ಸ್ಥಾನ ನೀಡುವಂತೆ ನಾಯಕ ಸಮುದಾಯದವರ ಬೇಡಿಕೆಗೆ ಪ್ರತಿಕ್ರಿಯಿಸಿ ಸಿದ್ದರಾಮಯ್ಯ ಈ ಮಾತುಗಳನ್ನಾಡಿದ್ದಾರೆ. ಅನಿಲ್ ಬೆಂಬಲಿಗರು ಹಾಗೂ ರಾಜನಹಳ್ಳಿ ಮಠದ ಪ್ರಸನ್ನಾನಂದ ಪುರಿ ಸ್ವಾಮೀಜಿ ಅವರನ್ನು ಉದ್ದೇಶಿಸಿ ಮಾತನಾಡಿದ ಸಿದ್ದರಾಮಯ್ಯ, ನಾಗೇಂದ್ರ ಅವರಿಗೆ ಸ್ಥಾನ ನೀಡಲಾಗುವುದು, ನಾನು ಕೊಟ್ಟ ಮಾತಿನಿಂದ ಹಿಂದೆ ಸರಿಯುವುದಿಲ್ಲ. ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಹಣ ದುರುಪಯೋಗದ ಆರೋಪಗಳನ್ನು ಬಿ ನಾಗೇಂದ್ರ ನಿರಾಕರಿಸುತ್ತಲೇ ಬಂದಿದ್ದರು. ಇತ್ತೀಚೆಗಷ್ಟೇ ಜಾಮೀನಿನ ಮೇಲೆ ಬಿಡುಗಡೆಯಾಗಿರುವ ಅವರು ಉಪ ಚುನಾವಣೆ ಮುಗಿದ ಬಳಿಕ ಸಂಪುಟಕ್ಕೆ ಸೇರ್ಪಡೆಯಾಗಬಹುದು ಎನ್ನಲಾಗುತ್ತಿದೆ.

ನಾಯಕ ಸಮುದಾಯದ ಎಚ್‌ಡಿ ಕೋಟೆ ಶಾಸಕ ಸಿ ಅನಿಲ್ ಕುಮಾರ್ ಅವರ ಬೆಂಬಲಿಗರು ಅವರನ್ನು ಸಂಪುಟಕ್ಕೆ ಸೇರ್ಪಡೆಗೊಳಿಸುವಂತೆಯೂ, ಸಮುದಾಯದ ಪಾತ್ರವನ್ನು ಎತ್ತಿಹಿಡಿದು ಹೆಚ್ಚಿನ ಪ್ರಾತಿನಿಧ್ಯ ನೀಡಬೇಕೆಂದು ಒತ್ತಾಯಿಸಿದರು. ತಮ್ಮ ಆದ್ಯತೆ ನಾಗೇಂದ್ರ ಅವರನ್ನು ಸಂಪುಟಕ್ಕೆ ಮರುಸೇರ್ಪಡೆ ಮಾಡುವುದಾಗಿದ್ದು, ಮುಂದಿನ ದಿನಗಳಲ್ಲಿ ಅನಿಲ್ ಅವರಿಗೂ ಸೂಕ್ತ ಸ್ಥಾನಮಾನ ನೀಡಲಾಗುವುದು ಎಂದರು.

ನ.18ಕ್ಕೆ ಕನಕ ಜಯಂತಿ: ಅರ್ಥಪೂರ್ಣ ಆಚರಣೆಗೆ ನಿರ್ಧಾರ



ಕನಕ ಜಯಂತಿ ಪೂರ್ವಭಾವಿ ಸಭೆಯಲ್ಲಿ ಶಾಸಕ ಡಿ.ರವಿಶಂಕರ್ ಮಾತನಾಡಿದರು.

ಕೆ.ಆರ್.ನಗರ, ನ.12– ದಾಸಶ್ರೇಷ್ಠ ಭಕ್ತ ಕನಕದಾಸರ ಜಯಂತೋತ್ಸವವನ್ನು ನ.18ರಂದು ಪಟ್ಟಣದ ಕನಕ ಗುರು ಪೀಠದ ಆವರಣದಲ್ಲಿ ಸರಳ ಮತ್ತು ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಯಿತು.

ಪಟ್ಟಣದ ತಾಲೂಕು ಕಚೇರಿ ಸಭಾಂಗಣದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿದ್ದ ಎಲ್ಲಾ ಮುಖಂಡರು ಮತ್ತು ಕನಕದಾಸರ ಅನುಯಾಯಿಗಳ ಸಲಹೆ ಸೂಚನೆ ಪಡೆದು ತೀರ್ಮಾನಿಸಲಾಯಿತು.

ಶಾಸಕ ಡಿ.ರವಿಶಂಕರ್ ಮಾತನಾಡಿ, ಬೆಳಗ್ಗೆ 9 ಗಂಟೆಗೆ ಬೆಳ್ಳಿ ರಥದಲ್ಲಿ ಕನಕದಾಸರ ಭಾವಚಿತ್ರವನ್ನು ವಿವಿಧ ಜಾನಪದ ಕಲಾತಂಡ ಮತ್ತು ಕುಂಭ ಕಳಸದೊಂದಿಗೆ ಪಟ್ಟಣದ ಡಾ.ಬಿ.ಆರ್. ಅಂಬೇಡ್ಕರ್ ಪುತ್ಥಳಿ ಬಳಿಯಿಂದ ಮಠದವರೆಗೆ ಮೆರವಣಿಗೆ ನಡೆಸಲಾಗುತ್ತದೆ ಎಂದರು.

ಮೆರವಣಿಗೆ ಗರುಡಗಂಭ ವೃತ್ತ, ವಾಣಿವಿಲಾಸ ರಸ್ತೆ, ಪುರಸಭೆ ವೃತ್ತದ ಮೂಲಕ ತೆರಳಲಿದ್ದು, ಈ ರಸ್ತೆಗಳನ್ನು ತಳಿರು ತೋರಣ ಮತ್ತು ವಿದ್ಯುತ್ ದೀಪಾಲಂಕಾರಗಳಿಂದ ಶೃಂಗರಿಸಬೇಕು. ಮೆರವಣಿಗೆ ಯುದ್ದಕ್ಕೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು. ಆದ್ದರಿಂದ ಆಯಾಯ ಗ್ರಾಮಗಳ ಮುಖಂಡರು ಜನರನ್ನು ಕರೆ ತರಬೇಕು ಎಂದರು.

ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಐವರಿಗೆ ಕನಕಶ್ರೀ ಪ್ರಶಸ್ತಿ ನೀಡಲು ತೀರ್ಮಾನಿಸಲಾಗಿದ್ದು, ಕುರುಬ ಸಂಘದವರು ವಿವಿಧ ಸಮಾಜಗಳ ಸಾಧಕರನ್ನು ಗುರುತಿಸಿ ತಾಲೂಕು ಆಡಳಿತಕ್ಕೆ ಪಟ್ಟಿ ನೀಡಬೇಕು. ಜೊತೆಗೆ ಎಸ್ಎಸ್ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ತಲಾ ಇಬ್ಬರು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುತ್ತದೆ ಎಂದು ತಿಳಿಸಿದರು.

ಮಠದ ಆವರಣದಲ್ಲಿ ನಡೆಯುವ ವೇದಿಕೆ ಕಾರ್ಯಕ್ರಮವೂ ಸರ್ಕಾರದ ಶಿಷ್ಟಾಚಾರದಂತೆ ನಡೆಯಬೇಕಾಗಿದ್ದು, ಅಧಿಕಾರಿಗಳು ಈ ಬಗ್ಗೆ ಗಮನ ಹರಿಸಿ ಆಹ್ವಾನ ಪತ್ರಿಕೆ ಮುದ್ರಿಸಬೇಕು ಎಂದು ಸಲಹೆ ನೀಡಿದರಲ್ಲದೆ ಅಂದು ಎಲ್ಲಾ ಇಲಾಖಾಧಿಕಾರಿಗಳು ಹಾಜರಿರಬೇಕು ಎಂದು ತಾಕೀತು ಮಾಡಿದರು.

ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಮಹೇಶ್, ನಿರ್ದೇಶಕರಾದ ಸರಿತಾ, ಸೈಯದ್ ಜಾಬೀರ್, ಕೆ.ಎನ್.ಪ್ರಸನ್ನ ಕುಮಾರ್, ಪುರಸಭೆ ಸದಸ್ಯರಾದ ಪ್ರಕಾಶ್, ನಟರಾಜು, ತಹಸೀಲ್ದಾರ್ ಜಿ.ಸುರೇಂದ್ರ ಮೂರ್ತಿ, ಕುರುಬರ ಸಂಘದ ಅಧ್ಯಕ್ಷ ಶಿವಣ್ಣ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷರೂ ಆದ ತಾಲೂಕು ಆರೋಗ್ಯಾಧಿಕಾರಿ ಡಾ.ಡಿ.ನಟರಾಜು, ಜಿಪಂ ಮಾಜಿ ಸದಸ್ಯರಾದ ಅಮಿತ್.ವಿ.ದೇವರಹಟ್ಟಿ, ಜಿ.ಆರ್.ರಾಮೇಗೌಡ, ಜಯರಾಮೇಗೌಡ, ಕಾಂಗ್ರೆಸ್ ಪಕ್ಷದ ಡಿಸಿಸಿ ಸದಸ್ಯ ವೆಂಕಟರಾಮು, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಎಸ್.ಸಿದ್ದೇಗೌಡ, ತಾಪಂ ಮಾಜಿ ಸದಸ್ಯರಾದ ಚಿಕ್ಕೇಗೌಡ, ಎಲ್.ಎಂ. ಸಣ್ಣಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಎಸ್.ಮಹದೇವ್, ರೈತ ಮುಖಂಡರಾದ ಗರುಡಗಂಭದಸ್ವಾಮಿ, ಎಂಜೆ. ಕುಮಾರ್, ಅಂಕನಹಳ್ಳಿತಿಮ್ಮಪ್ಪ, ಸಿ.ಬಿ.ಶ್ರೀನಿವಾಸ್, ಮುಖಂಡರಾದ ತೋಟೇಗೌಡ, ರಾಜಯ್ಯ, ಚಲುವರಾಜು, ಕೆ.ಪಿ.ಜಗದೀಶ್, ಮಹದೇವ್, ತಿಮ್ಮಶೆಟ್ಟಿ ಮತ್ತಿತರರಿದ್ದರು.

ನಾಳೆ ರಾಜ್ಯ ಸರ್ಕಾರಿ ನೌಕರ ಸಂಘದ ಚುನಾವಣೆ

ನಂಜನಗೂಡು, ನ.12– ತಾಲೂಕು ರಾಜ್ಯ ಸರ್ಕಾರಿ ನೌಕರರ ಸಂಘದ ಚುನಾವಣೆ ನ.14 ರಂದು ನಗರದ ಜೂನಿಯರ್ ಕಾಲೇಜು ಆವರಣದಲ್ಲಿ ನಡೆಯಲಿದೆ ಎಂದು ಚುನಾವಣಾ ಅಧಿಕಾರಿ ಬಾಲಸುಬ್ರಹ್ಮಣ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಾಲೂಕು ರಾಜ್ಯ ಸರ್ಕಾರಿ ನೌಕರರ ಸಂಘದ 2024ನೇ ಸಾಲಿನ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆಗಾಗಿ ಚುನಾವಣೆ ನಡೆಸುವ ಸಂಬಂಧ ಅ.25ರಂದು ನ್ಯಾಯಾಲಯ ತಾತ್ಕಾಲಿಕ ತಡೆಯಾಜ್ಞೆ ನೀಡಿದ್ದರಿಂದ ಚುನಾವಣಾ ಪ್ರಕ್ರಿಯೆ ಮುಂದೂಡಲಾಗಿತ್ತು. ಈ ಪ್ರಕರಣದಲ್ಲಿ ಘನ ನ್ಯಾಯಾಲಯವು ಸಂಘದ ಪರ ಸಲ್ಲಿಸಿದ್ದ ಮನವಿ ಪುರಸ್ಕರಿಸಿ ತಡೆಯಜ್ಞೆ ತೆರವುಗೊಳಿಸಿದೆ. ಆದ ಕಾರಣ ನ.14ರಂದು ಬೆಳಗ್ಗೆ 9 ರಿಂದ ಸಂಜೆ 4 ಗಂಟೆವರೆಗೆ ಚುನಾವಣೆ ನಡೆಯಲಿದೆ.

ತಜ್ಞ ವೈದ್ಯರು, ಸಿಬ್ಬಂದಿ ನೇಮಕಕ್ಕೆ ಒತ್ತಾಯಿಸಿ ಪ್ರತಿಭಟನೆ



ದಲಿತ ಸಂಘರ್ಷ ಸಮಿತಿ ಸದಸ್ಯರು ಜಿಲ್ಲಾ ಸರ್ವೇಕ್ಷಣ ಅಧಿಕಾರಿ ನಾಗರಾಜು ಅವರಿಗೆ ಮನವಿ ಸಲ್ಲಿಸಿದರು.

ತಿ.ನರಸೀಪುರ, ನ.12– ತಾಲೂಕಿನ ತಲಕಾಡು ಸಮುದಾಯ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸಿ, ತಜ್ಞ ವೈದ್ಯರು ಹಾಗೂ ಸಿಬ್ಬಂದಿ ನೇಮಕ ಮಾಡುವಂತೆ ಒತ್ತಾಯಿಸಿ ದಲಿತ ಸಂಘರ್ಷ ಸಮಿತಿ ಸದಸ್ಯರು ಆಸ್ಪತ್ರೆ ಎದುರು ಪ್ರತಿಭಟನೆ ನಡೆಸಿದರು.

ತಾಲೂಕಿನ ತಲಕಾಡು ಸಮುದಾಯ ಆರೋಗ್ಯ ಕೇಂದ್ರದ ಎದುರು ಜಮಾಯಿಸಿದ ಸಮಿತಿ ಸದಸ್ಯರು, ಆಸ್ಪತ್ರೆಗೆ ನಿತ್ಯ ನೂರಾರು ರೋಗಿಗಳು ಚಿಕಿತ್ಸೆ ಪಡೆಯಲು ಬರಲಿದ್ದು, ತಜ್ಞ ವೈದ್ಯರಿಲ್ಲದೇ ತೊಂದರೆ ಅನುಭವಿಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಮಿತಿ ಜಿಲ್ಲಾ ಸಂಘಟನಾ ಸಂಚಾಲಕ ಕೆಂಪಯ್ಯನಹುಂಡಿ ಆರ್.ರಾಜು ಮಾತನಾಡಿ, ಆಸ್ಪತ್ರೆಯಲ್ಲಿ ತಜ್ಞ ವೈದ್ಯರು ಹಾಗೂ ಸಿಬ್ಬಂದಿ ಕೊರತೆ ಎದುರಾಗಿರುವುದರಿಂದ ರೋಗಿಗಳಿಗೆ ಸಮರ್ಪಕ ಚಿಕಿತ್ಸೆ ದೊರಕುತ್ತಿಲ್ಲ. ಸಮುದಾಯ ಕೇಂದ್ರಕ್ಕೆ ಬೇಕಿರುವ 55 ಹುದ್ದೆಗಳ ಪೈಕಿ 24 ಹುದ್ದೆಗಳು ಮಾತ್ರವೇ ಭರ್ತಿಯಾಗಿವೆ. ಇನ್ನೂ 31 ಹುದ್ದೆಗಳು ಖಾಲಿ ಇದ್ದು, ಈ ಎಲ್ಲಾ ಹುದ್ದೆಗಳ ಭರ್ತಿಗೆ ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಆಸ್ಪತ್ರೆಯಲ್ಲಿ ಸಕಾಲಕ್ಕೆ ತುರ್ತು ವಾಹನ (ಆಂಬುಲೆನ್ಸ್) ಸಿಗದಿರುವುದರಿಂದ ರೋಗಿಗಳು ಹೆಚ್ಚಿನ ಚಿಕಿತ್ಸೆ ಪಡೆಯಲು ತೆರಳಲು ಸಾಧ್ಯವಾಗದೇ ಸಾವನ್ನಪ್ಪುತ್ತಿದ್ದಾರೆ. ಹೀಗಾಗಿ ಕೂಡಲೇ ಸರ್ಕಾರ ಕ್ರಮ ಕೈಗೊಂಡು ಆಸ್ಪತ್ರೆಗೆ ತುರ್ತು ವಾಹನ ನೀಡಬೇಕು. ರೋಗಿಗಳು ಮೃತಪಟ್ಟರೆ ಮರಣೋತ್ತರ ಪರೀಕ್ಷೆ ಮಾಡಿಸಲು ದಿನಗಟ್ಟಲೆ ಅಲೆಯುವ ಪರಿಸ್ಥಿತಿ ಇದ್ದು, ಈ ಸಮಸ್ಯೆಯನ್ನು ಬಗೆಹರಿಸಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ನಬಾರ್ಡ್ ಅನುದಾನದಿಂದ ಸುಮಾರು 785 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣಗೊಂಡಿರುವ ತಾಯಿ ಮಕ್ಕಳ ಆಸ್ಪತ್ರೆ ಉದ್ಘಾಟನೆಗೆ ಕ್ರಮಕೈಗೊಳ್ಳಬೇಕು. ನಾಲ್ಕೈದು ಶವಗಳನ್ನು ಸಂಗ್ರಹಿಡಬಲ್ಲ ಕೋಲ್ಡ್ ಸ್ಟೋರೇಜ್ ನಿರ್ಮಿಸಿ ಸಮುದಾಯ ಕೇಂದ್ರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಲು ಎಲ್ಲಾ ರೀತಿಯ ಅಗತ್ಯ ಕ್ರಮ ಕೈಗೊಳ್ಳಬೇಕು. ರಕ್ತದಾನ ಸಂಗ್ರಹ ಕೇಂದ್ರ, ಡಯಾಲಿಸಿಸ್ ಘಟಕ ತೆರೆಯಬೇಕು. ಅತ್ಯಾಧುನಿಕ ಲ್ಯಾಬೋರೇಟರಿ ಪರೀಕ್ಷೆಯ ಯಂತ್ರೋಪಕರಣ ಉನ್ನತೀಕರಣಗೊಳಿಸಬೇಕು. 24x7 ಕರ್ತವ್ಯ ನಿರ್ವಹಿಸಲು ಹೆಚ್ಚುವರಿ ವೈದ್ಯರನ್ನು ನಿಯೋಜಿಸುವುದು. ಎಲ್ಲಾ ಬಗೆಯ ಔಷಧ, ಮಾತ್ರೆಗಳು ಸಕಾಲಕ್ಕೆ ಸಮುದಾಯ ಕೇಂದ್ರಗಳಲ್ಲೇ ದೊರೆಯಬೇಕು. ಆಸ್ಪತ್ರೆಯಲ್ಲಿ ಉತ್ಪತ್ತಿಯಾಗುವ ವೈದ್ಯಕೀಯ ಮತ್ತು ರಾಸಾಯನಿಕ ತ್ಯಾಜ್ಯ ನಿರ್ವಹಣೆಗೆ ಬರೋವೇಸ್ಟ್ ಇಂಜಿನಿಯರ್ ನೇಮಕ ಮಾಡಬೇಕು ಹಾಗೂ ಸಣ್ಣ ಪುಟ್ಟ ಆರೋಗ್ಯ ಸಮಸ್ಯೆಗಳಿಗೂ ತಿ.ನರಸೀಪುರ, ಮೈಸೂರಿಗೆ ಕಳುಹಿಸುವ ಪರಿಪಾಠ ನಿಲ್ಲಬೇಕು ಎಂದು ಮನವಿ ಮಾಡಿದರು. ನಂತರ ಕುಟುಂಬ ಕಲ್ಯಾಣ ಇಲಾಖೆ ಜಿಲ್ಲಾ ಸರ್ವೇಕ್ಷಣ ಅಧಿಕಾರಿ ನಾಗರಾಜು ಅವರಿಗೆ ಮನವಿ ಸಲ್ಲಿಸಲಾಯಿತು. ಪ್ರತಿಭಟನಾ ಧರಣಿಯಲ್ಲಿ ಸಮಿತಿ ಮೈಸೂರು ವಿಭಾಗೀಯ ಸಂಚಾಲಕ ಕನ್ನಾಯಕನಹಳ್ಳಿ ಮರಿಸ್ವಾಮಿ, ತಾಲೂಕು ಸಂಚಾಲಕ ನಿಲಸೋಗೆ ಕುಮಾರ್, ಸಂಘಟನಾ ಸಂಚಾಲಕ ಸೋಮನಾಥಪುರ ಗೋವಿಂದರಾಜು, ತೊಟ್ಟವಾಡಿ ರಾಜಪ್ಪ, ಕೊಳತ್ತೂರು ಪ್ರಭಾಕರ್, ಕುಪ್ಯ ಗವಿಸಿದ್ದಯ್ಯ, ಚೌಹಳ್ಳಿ ಪರಶುರಾಮ್, ಮಾರನಪುರ ಕೇಶವಮೂರ್ತಿ, ಟಿ.ದೊಡ್ಡಪುರ ಉಮೇಶ್, ಮಹದೇವಸ್ವಾಮಿ, ಜಯಣ್ಣ, ಕೃಷ್ಣ, ರವಿಕಾಂತ್ ಮತ್ತಿತರರಿದ್ದರು.

ನ.25ಕ್ಕೆ ಪರಿಶಿಷ್ಟ ಜಾತಿ, ಪಂಗಡದ ಐಕ್ಯತಾ ಸಮಾವೇಶ




ಸುದ್ದಿಗೋಷ್ಠಿಯಲ್ಲಿ ಸಮಾವೇಶದ ಕರಪತ್ರ ಬಿಡುಗಡೆಗೊಳಿಸಲಾಯಿತು.

ಹುಣಸೂರು, ನ.12– ನಮ್ಮ ಅಂಬೇಡ್ಕರ ಸ್ವಾಭಿಮಾನಿ ಸೇನೆ ವತಿಯಿಂದ ನ.25 ರಂದು ಬೆಂಗಳೂರಿನ ವಸಂತ ನಗರದ ಡಾ.ಬಿ.ಆರ್.ಅಂಬೇಡ್ಕರ ಭವನದಲ್ಲಿ ಪರಿಶಿಷ್ಟ ಜಾತಿ, ಪಂಗಡದ ಐಕ್ಯತಾ ಸಮಾವೇಶ ನಡೆಯಲಿದೆ ಎಂದು ಸೇನೆಯ ತಾಲೂಕು ಅಧ್ಯಕ್ಷ ನಾಗೇಶ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಮಾವೇಶದ ಕರಪತ್ರ ಬಿಡುಗಡೆಗೊಳಿಸಿ ಮಾತನಾಡಿದ ಅವರು, ದಲಿತರಿಗೆ ರಾಜಕೀಯವಾಗಿ ಅನ್ಯಾಯವಾಗಿದೆ. ಯಾವ ಪಕ್ಷವೂ ದಲಿತರನ್ನು ಸಿಎಂ ಮಾಡಲು ಮುಂದೆ ಬರುತ್ತಿಲ್ಲ. ದಲಿತರನ್ನು ಬರೀ ಮತ ಪಡೆಯಲು ಸೀಮಿತಗೊಳಿಸಿದ್ದಾರೆ. ದಲಿತರ ಮೇಲೆ ದಬ್ಬಾಳಿಕೆ, ದೌರ್ಜನ್ಯ, ಅತ್ಯಾಚಾರ ಪ್ರಕರಣಗಳು ನಡೆಯುತ್ತಿದ್ದರೂ, ಅಧಿಕಾರಿಗಳು ಕಣ್ಮುಚ್ಚಿ ಕುಳಿತಿದ್ದಾರೆ. ನಮ್ಮ ಮೇಲೆ ಹಲ್ಲೆ ನಡೆಸಿದವರ ವಿರುದ್ಧ ಪೊಲೀಸ್ ಠಾಣೆಗೆ ದೂರು ನೀಡಲು ಹೋದರು ಅವರು ದೂರು ಸ್ವೀಕರಿಸಲು ಮೀನಾಮೇಷ ಎಣಿಸುತ್ತಾರೆ. ಹೀಗಾಗಿ ಅಂಬೇಡ್ಕರ್ ಸ್ವಾಭಿಮಾನಿ ಸೇನೆ ರಾಜಕೀಯ ಜಾಗೃತಿಗಾಗಿ ಪರಿಶಿಷ್ಟ ಜಾತಿ, ಪಂಗಡದ ಐಕ್ಯತಾ ಸಮಾವೇಶ ನಡೆಸುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಗೃಹ ಸಚಿವ ಡಾ.ಜಿ.ಪರಮೇಶ್ವರ್, ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಚಿವ ಹೆಚ್.ಸಿ.ಮುನಿಯಪ್ಪ, ಮಾಜಿ ಸಚಿವ ಎನ್.ಮಹೇಶ್, ಎಂಎಲ್‌ಸಿ ಛಲವಾದಿ ನಾರಾಯಣಸ್ವಾಮಿ ಭಾಗವಹಿಸಲಿದ್ದಾರೆ ಎಂದರು. ಈ ವೇಳೆ ಅಂಬೇಡ್ಕರ ಸ್ವಾಭಿಮಾನಿ ಸೇನೆ ಕಾರ್ಯಕರ್ತರು ಹಾಜರಿದ್ದರು.

ನಂ.ಗೂಡು, ಬನ್ನೂರಲ್ಲಿ ಸಚಿವ ಜಮೀರ್ ವಿರುದ್ಧ ಪ್ರತಿಭಟನೆ





ಸಚಿವ ಜಮೀರ್ ವಿರುದ್ಧ ನಂಜನಗೂಡು, ಬನ್ನೂರಲ್ಲಿ ಪ್ರತಿಭಟನೆ ನಡೆಸಲಾಯಿತು.

ನಂಜನಗೂಡು, ನ.12– ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ವರ್ಣ ನಿಂದನೆ ಮಾಡಿರುವ ಸಚಿವ ಜಮೀರ್ ಅಹಮ್ಮದ್ ವಿರುದ್ಧ ರಾಜ್ಯ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ನಗರದಲ್ಲಿ ಜೆಡಿಎಸ್ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮಂಗಳವಾರ ನಗರದ ತಾಲೂಕು ಕಚೇರಿ ಎದುರು ಜೆಡಿಎಸ್ ಜಿಲ್ಲಾಧ್ಯಕ್ಷ ಎನ್.ನರಸಿಂಹಸ್ವಾಮಿ, ತಾಲೂಕು ಅಧ್ಯಕ್ಷ ಆರ್.ವಿ.ಮಹದೇವಸ್ವಾಮಿ ನೇತೃತ್ವದಲ್ಲಿ ಜಮಾಯಿಸಿದ ಜೆಡಿಎಸ್ ಕಾರ್ಯಕರ್ತರು ಸಚಿವ ಜಮೀರ್ ಅಹಮ್ಮದ್ ವಿರುದ್ಧ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು. ನಂತರ ಮಾತನಾಡಿ, ಸಚಿವ ಜಮೀರ್ ಅಹಮ್ಮದ್ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಕಾಲಿನ ಧೂಳಿಗೂ ಸಮರಲ್ಲ. ಜನರ ಭಾವನೆಗಳಿಗೆ ಧಕ್ಕೆ ತರುವ ರೀತಿ ಮಾತನಾಡಿರುವ ಜಮೀರ್ ಕೂಡಲೇ ಕ್ಷಮೆಯಾಚಿಸಬೇಕು ಎಂದರು.

ಓರ್ವ ಜವಾಬ್ದಾರಿಯುತ ಸಚಿವರಾಗಿ ಕೇಂದ್ರ ಸಚಿವರ ವಿರುದ್ಧ ವರ್ಣ ನಿಂದನೆ ಮಾಡಿರುವುದು ಅವರ ವ್ಯಕ್ತಿತ್ವ ತೋರಿಸುತ್ತದೆ. ಹೀಗಾಗಿ ಜಮೀರ್ ವಿರುದ್ಧ ರಾಜ್ಯ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೇ ಮುಂದಿನ ದಿನಗಳಲ್ಲಿ ಉಗ್ರ ಚಳವಳಿ ನಡೆಸುತ್ತೇವೆ ಎಂದು ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು ಅವರಿಗೆ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ಮುಖಂಡರಾದ ಜೆಡಿಎಸ್ ಯುವ ಘಟಕದ ಅಧ್ಯಕ್ಷ ಸಂಜಯ್, ಎನ್. ನಾಗೇಂದ್ರ, ಕೆ.ಪ್ರಕಾಶ್, ಎಂ.ಮಹದೇವು, ಎನ್.ಕೆ.ನಂಜಪ್ಪ, ಶಿವನಂಜೇಗೌಡರು ಸೇರಿದಂತೆ ಇತರರಿದ್ದರು.

ಬನ್ನೂರು: ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿರುವ ಸಚಿವ ಜಮೀರ್ ಅಹಮ್ಮದ್ ವಿರುದ್ಧ ಪಟ್ಟಣದಲ್ಲಿ ಜೆಡಿಎಸ್, ಬಿಜೆಪಿ ಕಾರ್ಯಕರ್ತರು ರಸ್ತೆ ತಡೆದು ಪ್ರತಿಭಟನೆ ನಡೆಸಿದರು. ಪಟ್ಟಣದ ಸಂತೇಮಾಳದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಸಚಿವ ಜಮೀರ್ ಪ್ರತಿಕೃತಿ ದಹನ ಮಾಡಿ ಆಕ್ರೋಶ ವ್ಯಕ್ತಪಡಿಸಿದರು.

ಪುರಸಭಾ ಅಧ್ಯಕ್ಷ ಕೃಷ್ಣೇಗೌಡ ಮಾತನಾಡಿ, ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಮನೆಯಲ್ಲಿ ಬೆಳೆದು ರಾಜಕೀಯ ನೆಲೆ ಕಂಡುಕೊಂಡ ಸಚಿವ ಜಮೀರ್ ಅಹಮ್ಮದ್ ಅವರು ಚನ್ನಪಟ್ಟಣ ಉಪ ಚುನಾವಣೆ ಪ್ರಚಾರದ ವೇಳೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿರುವುದು ಖಂಡನೀಯ. ಇತನ ವಿರುದ್ಧ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ವೈ.ಎಸ್.ರಾಮಸ್ವಾಮಿ, ಜಯರಾಮ, ನಿಖಿಲ್, ನಾರಾಯಣಸ್ವಾಮಿ, ಚಿಕ್ಕೀರೆಗೌಡ, ದೇವರಾಜು, ರಾಮಚಂದ್ರ, ಮಾಯೀಗೌಡ, ಕಾಳೇಗೌಡ, ಹೋಬಳಿ ಜೆಡಿಎಸ್ ಅಧ್ಯಕ್ಷ ಕುಮಾರ್, ತಾಲೂಕು ಜೆಡಿಎಸ್ ಅಧ್ಯಕ್ಷ ಚಿನ್ನಸ್ವಾಮಿ, ಜಯರಾಮೇಗೌಡ, ಚಂದ್ರು, ಮುರಳಿ, ಸೌಮ್ಯರಾಣಿ, ಶೋಭಾ, ರಾಜು, ವೆಂಕಟೇಶ್, ನವೀನ್, ಮಹೇಶ್, ನಾಗೇಂದ್ರ ಕುಮಾರ್, ಸಿದ್ದೇಗೌಡ, ಪೈ.ವೆಂಕಟೇಶ್, ನಿಂಗಪ್ಪ, ದೇವರಾಜು ಸೇರಿದಂತೆ ಜೆಡಿಎಸ್, ಬಿಜೆಪಿ ಕಾರ್ಯಕರ್ತರು ಇದ್ದರು.

ವಿದ್ಯಾರ್ಥಿನಿಗೆ ಅಭಿನಂದನೆ



ನಂಜನಗೂಡು ತಾಲೂಕು ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ದ್ವಿತೀಯ ಬಹುಮಾನ ಪಡೆದ ಬಿದರಗೂಡು ಆರ್‌ಎಂಎಸ್‌ಎ ಶಾಲೆಯ ವಿದ್ಯಾರ್ಥಿನಿ ಮಂಜುಳರನ್ನು ಶಾಲೆ ಎಸ್‌ಡಿಎಂಸಿ ಅಧ್ಯಕ್ಷ ಮಹದೇವಸ್ವಾಮಿ, ಮುಖ್ಯ ಶಿಕ್ಷಕಿ ಭಾಗ್ಯಲಕ್ಷ್ಮಿ ಹಾಗೂ ಶಿಕ್ಷಕರು ಅಭಿನಂದಿಸಿದರು.

ವಿವಾಹ ವಿಚ್ಛೇದನ ಸಮಸ್ಯೆಗೆ ಶಿವಶರಣೆಯರ ವಚನಗಳೇ ಮದ್ದು

ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ.ಪದ್ಮಾಶೇಖರ್ ಅಭಿಮತ



'ಶಿವಶರಣೆಯರು–ಸಮಕಾಲೀನ ಸಂದರ್ಭ' ಕುರಿತು ರಾಜ್ಯಮಟ್ಟದ ಒಂದು ದಿನದ ವಿಚಾರ ಸಂಕಿರಣವನ್ನು ಮುಕ್ತ ವಿವಿ ಕುಲಪತಿ ಡಾ.ಪ್ರೊ.ಶರಣಪ್ಪ ವಿ.ಹಲಸೆ ಉದ್ಘಾಟಿಸಿದರು. ಈ ವೇಳೆ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಡಿ.ದೇವರಾಜ ಅರಸು ಸರ್ಕಾರಿ ಪದವಿ ಕಾಲೇಜು ಪ್ರಾಧ್ಯಾಪಕ ಪ್ರೊ.ಬಿ.ವಿ.ವಸಂತಕುಮಾರ್, ಕುಲಸಚಿವ ಪ್ರೊ.ಕೆ.ಬಿ.ಪ್ರವೀಣ, ಡೀನ್ ಪ್ರೊ.ಎನ್.ಲಕ್ಷ್ಮೀ, ಪ್ರೊ.ಎಂ.ರಾಮನಾಥಂನಾಯ್ಡು ಸೇರಿದಂತೆ ಇತರರಿದ್ದರು.



ಉಪ ಚುನಾವಣೆ ಸಂದರ್ಭದಲ್ಲಿ ರಾಜ್ಯ ಸರ್ಕಾರದ ಸಚಿವರೊಬ್ಬರು ತಮ್ಮ ಬೆಂಬಲಿತ ಅಭ್ಯರ್ಥಿ ಪರ ಮತಯಾಚಿಸುವ ಭರದಲ್ಲಿ ಕಾಲಿಯ(ಕರಿಯ) ಕುಮಾರಸ್ವಾಮಿ ಎಂದಿದ್ದಾರೆ. ಈ ವಿಷಯಕ್ಕಾಗಿ ಮಂಗಳವಾರ ಪೈಪೋಟಿ ಮೇಲೆ ಪತ್ರಿಕಾಗೋಷ್ಠಿ ಕರೆದು ಅನೇಕ ನಾಯಕರು ಈ ಹೇಳಿಕೆಯನ್ನು ಖಂಡಿಸುತ್ತಿದ್ದಾರೆ. ಕಪ್ಪನ್ನು ಕಪ್ಪು ಎನ್ನದೇ ಬೇರೆ ಏನೆಂದು ಕರೆಯಬೇಕು. ನಾನೂ ಕರ್ರಗಿದ್ದೇನೆ. ಅದಕ್ಕೆ ಸ್ನೇಹಿತರು, ಪರಿಚಯಸ್ಥರು ನನ್ನನ್ನು ಕರ್ರಿ ಎನ್ನುತ್ತಾರೆ. ಅದಕ್ಕೆ ಬೇಜಾರು ಮಾಡಿಕೊಂಡರೆ ಹಾಗುತ್ತಾ? ನಾನಿರೋದೆ ಕಪ್ಪು.

- **ಪ್ರೊ.ಪದ್ಮಾಶೇಖರ್**, ವಿಶ್ರಾಂತ ಕುಲಪತಿ, ಸಂಸ್ಕೃತ ವಿವಿ

ಮೈಸೂರು, ನ.12(ಎಸ್‌ಪಿಎನ್)– ಯುವ ಸಮೂಹ ಸಾಂಸಾರಿಕ ತಲ್ಲಣಗಳನ್ನು ಎದುರಿಸಲಾಗದೇ ಇತ್ತೀಚೆಗೆ ವಿಚ್ಛೇದನ ಪಡೆಯುವವರ ಸಂಖ್ಯೆ ದಿನೇ ದಿನೆ ಹೆಚ್ಚಾಗುತ್ತಿದೆ. ಇದನ್ನು ತಡೆಗಟ್ಟಲು ಶಿವಶರಣೆಯರ ರಚಿತ ವಚನಗಳ ಅಧ್ಯಯನ ಸಹಕಾರಿ ಎಂದು ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ. ಪದ್ಮಾಶೇಖರ್ ಅಭಿಪ್ರಾಯಪಟ್ಟರು.

ಮೈಸೂರು ಕೆಎಸ್‌ಓಯು ಆವರಣದ ಕಾವೇರಿ ಸಭಾಂಗಣದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಮೈಸೂರು ನಗರ ಘಟಕ, ಕದಳಿ ಮಹಿಳಾ ವೇದಿಕೆ ಹಾಗೂ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಸಹಯೋಗದೊಂದಿಗೆ ಆಯೋಜಿಸಿದ್ದ 'ಶಿವಶರಣೆಯರು–ಸಮಕಾಲೀನ ಸಂದರ್ಭ' ಕುರಿತು ರಾಜ್ಯಮಟ್ಟದ ಒಂದು ದಿನದ ವಿಚಾರ ಸಂಕಿರಣದ ಸಮಾರೋಪದಲ್ಲಿ ಮಾತನಾಡಿದರು.

ಮದುವೆಯಾಗಿ, ಒಂದು ಅಥವಾ ಎರಡು ವರ್ಷದ ಮಗು ಇರುವ ಹೆಣ್ಣು ಮಕ್ಕಳು ವಿಚ್ಛೇದನ ಪಡೆಯಲು ಕೋರ್ಟ್‌ನಲ್ಲಿ ಕ್ಯೂ ನಿಂತಿರುತ್ತಾರೆ. ಸಾಂಸಾರಿಕ ತಲ್ಲಣಗಳನ್ನು ಇಂದಿನ ಯುವತಿಯರು ಸ್ವೀಕರಿಸಲಾಗದೇ ವಿಚ್ಛೇದನ ಪಡೆದುಕೊಂಡು ಜೀವನವನ್ನು ನರಕಯಾತನೆಗೆ ದೂಡಿಕೊಳ್ಳುತ್ತಿದ್ದಾರೆ. ಇಂತಹ ಋಣಾತ್ಮಕ ಚಿಂತನೆಗಳಿಂದ ಹೊರಬರಬೇಕಾದರೆ, 12ನೇ ಶತಮಾನದ 38ಕ್ಕೂ ಹೆಚ್ಚು ಶಿವ ಶರಣೆಯರು ರಚಿಸಿರುವ ವಚನಗಳನ್ನು ಅಧ್ಯಯನ ಮಾಡಿದರೆ, ಸಾಂಸಾರಿಕ ನಿರ್ವಹಣೆಗೆ ಹೆಚ್ಚಿನ ಮಾಹಿತಿಗಳು ಲಭ್ಯವಾಗುತ್ತವೆ ಎಂದರು.

ನಮ್ಮ ಪೂರ್ವಜರ ಕಾಲದಲ್ಲಿ ಈ ಜಾತಿ–ಗೀತಿ ಇರಲಿಲ್ಲ. ಈ ಜಾತಿ ವ್ಯವಸ್ಥೆ ನಮ್ಮ ನೆಲಕ್ಕೆ ಅದು ಹೇಗೆ ವಕ್ಕರಿಸಿತೋ ತಿಳಿಯದು. ಶರಣರ ಕಾಲದಲ್ಲಿ ಕಾಯಕಕ್ಕೆ ಹೆಚ್ಚು ಒತ್ತು ನೀಡಿದ್ದರು. ಗಂಡು–ಹೆಣ್ಣು ಸಮಾನ ಎಂದು ಭಾವಿಸಿ, ಎಲ್ಲರಿಗೂ ಅನುಭವ ಮಂಟಪದಲ್ಲಿ ತಮ್ಮ ತಮ್ಮ ಅಭಿಪ್ರಾಯ ಮಂಡಿಸಲು ಎಲ್ಲರಿಗೂ ಅವಕಾಶ ನೀಡಲಾಗಿತ್ತು. ಹನ್ನೆರಡನೇ ಶತಮಾನದಲ್ಲಿ ಅಣ್ಣ ಬಸವಣ್ಣರ ನೇತೃತ್ವದಲ್ಲಿ ಮಹಿಳೆಯರಿಗೆ ಸಿಗಬೇಕಾಗಿದ್ದ ಸ್ಥಾನಮಾನಗಳನ್ನು ನೀಡಿ ಗೌರವಿಸಿದ್ದರು ಎಂದರು.

ಗಂಡಸರೂ ಒಳ್ಳೆಯವರೆ. ಆದರೆ, ಅವರೊಂದಿಗೆ ಸಂವಹನ ನಡೆಸುವ ರೀತಿ ಮೇಲೆ ನಮ್ಮ ಸಾಂಸಾರಿಕ ಜೀವನ ಅಡಕವಾಗಿರುತ್ತದೆ. ಸಾಂಸಾರಿಕ ಜೀವನ ನಿರ್ವಹಣೆ ಮಾಡಬೇಕಾದರೆ, ವಿವಿಧ ವಚನಗಾರ್ತಿಯರು ರಚಿಸಿರುವ ವಚನಗಳನ್ನು ಅಧ್ಯಯನ ಮಾಡಬೇಕು. ಇದರಿಂದ ವಿಚ್ಛೇದನ, ಕೌಟುಂಬಿಕ ಕಲಹಗಳನ್ನು ಸಾಧ್ಯವಾದಷ್ಟು ತಡೆಗಟ್ಟಬಹುದು ಎಂದರಲ್ಲದೆ, ಸೈದ್ಧಾಂತಿಕ, ಆರ್ಥಿಕ ವಹಿವಾಟಿಗೆ ಕಡಿವಾಣ ಹಾಕಿದರೆ, ಸಾಧ್ಯವಾದಷ್ಟು ಪುರುಷರ ಆಟಾಟೋಪಗಳಿಗೆ ಕಡಿವಾಣ ಹಾಕಬಹುದು ಎಂದು ಅಕ್ಕ ಮಹಾದೇವಿ ಹಾಗೂ ಇತರೆ ಶಿವಶರಣೆಯರ ವಚನಗಳನ್ನು ಉಲ್ಲೇಖಿಸಿ ತಿಳಿಸಿದರು.

ರಾಜಕೀಯ ಅಧಿಕಾರ ನೀಡುತ್ತಿಲ್ಲ: ವಿಶ್ವದ ದೊಡ್ಡಣ್ಣ ಎಂದೇ ಕರೆಸಿಕೊಳ್ಳುವ ಅಮೆರಿಕಾ ಚುನಾವಣೆಯಲ್ಲಿ ಮಹಿಳಾ ಅಭ್ಯರ್ಥಿ ಕಮಲಾ ಹ್ಯಾರಿಸ್ ರಾಷ್ಟ್ರಾಧ್ಯಕ್ಷ ಹುದ್ದೆಗೆ ಸ್ಪರ್ಧಿಸಿ, ಸೋತಿದ್ದಾರೆ. ಇವರ ಎದುರಾಳಿ ಡೊನಾಲ್ಡ್ ಟ್ರಂಪ್ ಎರಡನೇ ಬಾರಿಗೆ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾಗಿದ್ದಾರೆ. ಅವರು ಎರಡು ಬಾರಿ ಚುನಾವಣೆಯಲ್ಲಿ ಗೆದ್ದಿರುವುದು ಮಹಿಳಾ ಅಭ್ಯರ್ಥಿಯನ್ನು ಸೋಲಿಸಿ. ವಿಶ್ವದ ದೊಡ್ಡಣ್ಣ ಎಂದೇ ಕರೆಸಿಕೊಳ್ಳುವ ಅಮೆರಿಕಾದಲ್ಲೂ ಪುರುಷ ಪ್ರಾಧಾನ್ಯತೆ ಇರುವುದು ದೃಢ ಎಂದರು.

ಇದಕ್ಕೂ ಮುನ್ನ ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಡಿ.ಎಸ್.ಸದಾಶಿವಮೂರ್ತಿ ಗೋಷ್ಠಿ 1ರಲ್ಲಿ, ಜೆಎಸ್‌ಎಸ್ ಮಹಾವಿದ್ಯಾಪೀಠ ಪ್ರಕಟಣಾ ವಿಭಾಗದ ನಿರ್ದೇಶಕ ಪ್ರೊ.ಮೊರಬದ ಮಲ್ಲಿಕಾರ್ಜುನ ಗೋಷ್ಠಿ–2ರಲ್ಲಿ, ಮುಕ್ತ ವಿವಿ ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಪ್ರಾಧ್ಯಾಪಕ ಪ್ರೊ.ಡಿ.ನಾಗಣ್ಣ ಗೋಷ್ಠಿ–3ರಲ್ಲಿ ವಿವಿಧ ವಚನಗಾರ್ತಿಯರ ಕುರಿತು ಮಾತನಾಡಿದರು.

ಸಮಾರೋಪದಲ್ಲಿ ಮುಕ್ತ ವಿವಿ ಕುಲಸಚಿವ(ಪರೀಕ್ಷಾಂಗ) ಡಾ.ಎಚ್.ವಿಶ್ವನಾಥ್, ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಶಾರದಾ ಶಿವಲಿಂಗಸ್ವಾಮಿ, ಶರಣ ಸಾಹಿತ್ಯ ಪರಿಷತ್ ಮೈಸೂರು ನಗರದ ಘಟಕ ಅಧ್ಯಕ್ಷ ಮ.ಗು.ಸದಾನಂದಯ್ಯ, ಮುಕ್ತ ವಿವಿ ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಅಧ್ಯಕ್ಷ ಪ್ರೊ.ಟಿ.ಎಂ.ಗೀತಾಂಜಲಿ, ಕಾರ್ಯಕ್ರಮದ ಸಂಯೋಜಕಿ ಡಾ.ಜ್ಯೋತಿಶಂಕರ್, ಜಯಗೌಡ, ಡಾ.ಶೈಲಾ ನಾಗರಾಜ್ ಉಪಸ್ಥಿತರಿದ್ದರು.

ಶ್ರೀರಾಂಪುರದಲ್ಲಿ ಖದೀಮನ ಕೈಚಳಕ; ಗೃಹಿಣಿ ಮಾಂಗಲ್ಯ ಸರ ಕಳವು

ಮೈಸೂರು, ನ.12(ಎಸ್‌ಬಿಡಿ)– ಮಹಿಳೆಯ ಮಾಂಗಲ್ಯ ಸರವನ್ನು ಖದೀಮ ಕಿತ್ತುಕೊಂಡು ಪರಾರಿಯಾದ ಘಟನೆ ಮೈಸೂರಿನ ಶ್ರೀರಾಂಪುರ ಬಡಾವಣೆಯಲ್ಲಿ ನಡೆದಿದೆ. ಬಡಾವಣೆಯ 2ನೇ ಹಂತ, ಎಲ್‌ಐಸಿ ಕಾಲೋನಿ ನಿವಾಸಿ ರತ್ನಮ್ಮ(55) ಅವರ ಸುಮಾರು 1.90 ಲಕ್ಷ ರೂ. ಮೌಲ್ಯದ 30 ಗ್ರಾಂ ಮಾಂಗಲ್ಯ ಸರ ಕಳ್ಳನ ಪಾಲಾಗಿದೆ. ಭಾನುವಾರ ಮಧ್ಯಾಹ್ನ 3 ಗಂಟೆ ವೇಳೆಯಲ್ಲಿ ಶ್ರೀರಾಂಪುರ 2ನೇ ಹಂತದ ಸಂಕಲ್ಪ ಅಪಾರ್ಟ್‌ಮೆಂಟ್ ಬಳಿಯ ಅಡ್ಡ ರಸ್ತೆಯಲ್ಲಿ ಅಂಗಡಿಯಿಂದ ಮನೆಗೆ ನಡೆದು ಹೋಗುತ್ತಿದ್ದಾಗ, ರಸ್ತೆ ಬದಿ ನಿಂತಿದ್ದ ಖದೀಮ ಏಕಾಏಕಿ ಸರ ಕಿತ್ತುಕೊಂಡು ಪರಾರಿಯಾಗಿದ್ದಾನೆ.



ಈ ಸಂಬಂಧ ರತ್ನಮ್ಮ ನೀಡಿರುವ ದೂರಿನನ್ವಯ ಕುವೆಂಪುನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಆ ರಸ್ತೆಯಲ್ಲಿರುವ ಸಿಸಿ ಕ್ಯಾಮರಾಗಳನ್ನು ಪರಿಶೀಲಿಸಿ, ಖದೀಮನ ಪತ್ತೆಗೆ ಶೋಧ ನಡೆಸಿದ್ದಾರೆ.

ಸ್ಕೂಟರ್‌ನಿಂದ ಬಿದ್ದು ಸವಾರ ಸಾವು

ಮತ್ತೋರ್ವನಿಗೆ ತೀವ್ರ ಗಾಯ

ಮೈಸೂರು, ನ.12(ಎಸ್‌ಬಿಡಿ)– ಸ್ಕೂಟರ್ ನಿಯಂತ್ರಣ ತಪ್ಪಿ ನೆಲಕ್ಕುರುಳಿದ ಪರಿಣಾಮ ಸವಾರನೊಬ್ಬ ಮೃತಪಟ್ಟು, ಮತ್ತೋರ್ವ ಗಾಯಗೊಂಡಿರುವ ಘಟನೆ ಮೈಸೂರು–ದೂರ ಗ್ರಾಮ ಮುಖ್ಯ ರಸ್ತೆಯಲ್ಲಿ ಭಾನುವಾರ ಸಂಜೆ ಸಂಭವಿಸಿದೆ.

ಹುಲ್ಲಹಳ್ಳಿ ಹೋಬಳಿ, ಮಾದಾಪುರ ಗ್ರಾಮದ ನಿವಾಸಿ ಮಹೇಶ್(32) ಮೃತಪಟ್ಟವರು. ವ್ಯವಸಾಯದ ಜೊತೆಗೆ ಸಮಾರಂಭಗಳಲ್ಲಿ ಅಡುಗೆ ಕೆಲಸ ಮಾಡಿಕೊಂಡಿದ್ದ ಇವರು, ನ.9ರಂದು ಸ್ನೇಹಿತ ರವಿಯೊಂದಿಗೆ ತನ್ನ ಹೋಂಡಾ ಡಿಯೋ ಸ್ಕೂಟರ್(ಕೆಎ–09, ಜೆಟಿ–0827)ನಲ್ಲಿ ಮೈಸೂರಿಗೆ ತೆರಳಿದ್ದರು. ಮರುದಿನ ಸಂಜೆ ಮೈಸೂರಿನಿಂದ ದೂರ ಗ್ರಾಮದ ಕಡೆಗೆ ಬರುತ್ತಿದ್ದಾಗ ಸೋಮಣ್ಣ ಅವರ ತೋಟದ ಬಳಿ ನಿಯಂತ್ರಣ ತಪ್ಪಿ ಸ್ಕೂಟರ್ ನೆಲಕ್ಕುರುಳಿದೆ.

ಘಟನೆಯಲ್ಲಿ ತೀವ್ರವಾಗಿ ಪೆಟ್ಟುಬಿದ್ದಿದ್ದ ಮಹೇಶ್ ಅವರನ್ನು ಆಂಬುಲೆನ್ಸ್‌ನಲ್ಲಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ ಮಾರ್ಗಮಧ್ಯೆಯೇ ಸಾವನ್ನಪ್ಪಿರುವುದಾಗಿ ವೈದ್ಯರು ತಿಳಿಸಿದ್ದಾರೆ. ಮತ್ತೋರ್ವ ಸವಾರ ರವಿ ಸಣ್ಣಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ರವಿ ಸ್ಕೂಟರ್ ಓಡಿಸುತ್ತಿದ್ದರು, ನಾಯಿ ಅಡ್ಡ ಬಂದಿದ್ದರಿಂದ ಈ ಅಪಘಾತ ಸಂಭವಿಸಿದ್ದಾಗಿ ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾಗಿ ಮಹೇಶ್ ಅವರ ತಂದೆ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಈ ಸಂಬಂಧ ಜಯಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಚಿವ ಸ್ಥಾನದಿಂದ ಜಮೀರ್ ಅಹಮ್ಮದ್ ವಜಾಕ್ಕೆ ಆಗ್ರಹಿಸಿ ಜೆಡಿಎಸ್ ಪ್ರತಿಭಟನೆ



ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿರುವ ವಸತಿ ಸಚಿವ ಜಮೀರ್ ಅಹಮ್ಮದ್ ವಜಾಕ್ಕೆ ಆಗ್ರಹಿಸಿ ಜೆಡಿಎಸ್ ಕಾರ್ಯಕರ್ತರು ಮೈಸೂರಿನ ಗಾಂಧಿ ವೃತ್ತದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ಮೈಸೂರು, ನ.12(ಬಿಎಲ್‌ಯು)– ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿರುವ ವಸತಿ ಸಚಿವ ಜಮೀರ್ ಅಹಮ್ಮದ್ ಅವರನ್ನು ಸಚಿವ ಸ್ಥಾನದಿಂದ ವಜಾ ಮಾಡುವಂತೆ ಆಗ್ರಹಿಸಿ ಜೆಡಿಎಸ್ ಕಾರ್ಯಕರ್ತರು ಮೈಸೂರಿನಲ್ಲಿ ಇಂದು ಪ್ರತಿಭಟನಾ ಧರಣಿ ನಡೆಸಿದರು.

ನಗರದ ಗಾಂಧಿ ವೃತ್ತದ ಗಾಂಧಿ ಪ್ರತಿಮೆ ಮುಂದೆ ಮಾಜಿ ಸಚಿವ ಸಾ.ರಾ.ಮಹೇಶ್ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದ ಜೆಡಿಎಸ್ ಕಾರ್ಯಕರ್ತರು, ಜಮೀರ್ ಅಹಮ್ಮದ್ ವಿರುದ್ಧ ನಾನಾ ಘೋಷಣೆಗಳನ್ನು ಕೂಗಿದರು.

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಕುಟುಂಬವನ್ನು ಮುಸಲ್ಮಾನರು ಖರೀದಿಸಲು ಸಿದ್ಧರಿದ್ದಾರೆ ಎಂದು ಹೇಳಿಕೆ ನೀಡಿರುವ ಜಮೀರ್ ಅಹಮ್ಮದ್, ಕುಮಾರಸ್ವಾಮಿ ಅವರನ್ನು ಕರಿಯ ಎಂದು ಕರೆದಿದ್ದಾರೆ. ಇಂತಹ ಹೇಳಿಕೆ ನೀಡುತ್ತಿರುವ ಜಮೀರ್ ಅಹಮ್ಮದ್ ಅವರನ್ನು ಸಚಿವ ಸ್ಥಾನದಿಂದ ಕೂಡಲೇ ವಜಾ ಮಾಡಬೇಕೆಂದು ಪ್ರತಿಭಟನಾಕಾರರು ಒತ್ತಾಯಿಸಿದರು. ಜೆಡಿಎಸ್ ನಗರಾಧ್ಯಕ್ಷ ಕೆ.ಟಿ.ಚಲುವೇಗೌಡ, ಮಾಜಿ ಕಾರ್ಪೊರೇಟರ್ ಪ್ರೇಮಾ, ಭಾಗ್ಯ, ಅಶ್ವಿನಿ, ಮಾಜಿ ಉಪ ಮೇಯರ್ ಕೃಷ್ಣ, ಮುಖಂಡರಾದ ಮಂಜುನಾಥ್, ಬೋರೇಗೌಡ ಸೇರಿದಂತೆ ಹಲವರು ಈ ವೇಳೆ ಹಾಜರಿದ್ದರು.

ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಸಭೆ

ಮೈಸೂರು, ನ.12– ನವೆಂಬರ್ 15 ರಂದು ಬೆಳಿಗ್ಗೆ 11 ಗಂಟೆಗೆ ಸಿದ್ಧಾರ್ಥನಗರದ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿಗಳು ಇವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಸಭೆಯನ್ನು ಹಮ್ಮಿಕೊಂಡಿದ್ದು, ಸಭೆಗೆ ಸಂಬಂಧಪಟ್ಟ ಅರ್ಜಿದಾರರು ಹಾಗೂ ಸಂಬಂಧಿಸಿದ ವಿಷಯಗಳಲ್ಲಿ ಆಸಕ್ತಿಯುಳ್ಳವರು ಹಾಜರಾಗಬಹುದು ಎಂದು ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತನಗೆ ರಾಜಕೀಯ ಜನ್ಮ ನೀಡಿದ ದೇವೇಗೌಡರು, ಕುಮಾರಸ್ವಾಮಿ ವಿರುದ್ಧವೇ ಜಮೀರ್ ಟೀಕೆ

ಮುಂದೆ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್‌ಗೂ ಇದೇ ಗತಿ



ಮೈಸೂರು, ನ.12(ಬಿಎಲ್‌ಯು)– ತನಗೆ ರಾಜಕೀಯ ಜನ್ಮ ನೀಡಿದ ಮಾಜಿ ಪ್ರಧಾನಿ ಹೆಚ್.ಡಿ.ದೇವೇ ಗೌಡರು ಹಾಗೂ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿಯನ್ನು ಈಗ ಟೀಕಿಸುತ್ತಿರುವ ವಸತಿ ಸಚಿವ ಜಮೀರ್ ಅಹಮ್ಮದ್, ಮುಂದೊಂದು ದಿನ ನಿಮ್ಮನ್ನು ಬಿಡಲ್ಲ ಎಂದು ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್‌ಗೆ ಮಾಜಿ ಸಚಿವ ಸಾ.ರಾ.ಮಹೇಶ್ ಎಚ್ಚರಿಸಿದ್ದಾರೆ.

ನಗರದ ರಾಮಾವಿಲಾಸ ರಸ್ತೆಯ ತಮ್ಮ ಕಚೇರಿಯಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಸಕ, ಸಚಿವನ ಮಾಡಿ ರಾಜಕೀಯ ಪ್ರವೇಶಕ್ಕೆ ನಾಂದಿ ಹಾಡಿದ ಹೆಚ್.ಡಿ.ದೇವೇಗೌಡ ಹಾಗೂ ಕುಮಾರಸ್ವಾಮಿ ಟೀಕೆ ಮಾಡುವ ಜಮೀರ್ ಅಹಮ್ಮದ್ ನಿಮ್ಮನ್ನು ಬಿಡುತ್ತಾರೆಯೇ ಎಂದು ಪ್ರಶ್ನಿಸಿದರು.

ಇವತ್ತು ಹೆಚ್.ಡಿ.ದೇವೇಗೌಡ ಹಾಗೂ ಹೆಚ್.ಡಿ.ಕುಮಾರಸ್ವಾಮಿಗೆ ಆದ ಗತಿ ನಿಮಗೂ ಆಗುತ್ತದೆ. ಇದನ್ನು ಅರಿತು ಮೊದಲು ಜಮೀರ್ ಅಹಮ್ಮದ್‌ನನ್ನು ಸಚಿವ ಸ್ಥಾನದಿಂದ ವಜಾ ಮಾಡಿ ಎಂದು ಸಾ.ರಾ.ಮಹೇಶ್ ಆಗ್ರಹಿಸಿದರು.

ಕುಮಾರಸ್ವಾಮಿಯನ್ನು ಕರಿಯ ಎಂದು ಜಮೀರ್ ಹೇಳಿದ್ದಾರೆ. ಅಂದು ಕುಮಾರಸ್ವಾಮಿ ಸೇರಿದಂತೆ ಶಾಸಕರನ್ನು ಬಸ್‌ನಲ್ಲಿ ಕೂರಿಸಿ ಕೊಂಡು ಹೋಗುವಾಗ ಅವರು ಕರಿಯ ಎಂದು ಅವರಿಗೆ ತಿಳಿದಿರಲಿಲ್ಲವೇ ಎಂದು ಕೇಳಿದರು.

ಮೆಕ್ಕಾ ಮದೀನಾಗೆ ಹೋಗುವಾಗ ತಾಯಿ ಕಾಲಿಗೆ ನಮಸ್ಕಾರ ಮಾಡುತ್ತಿದ್ದ ಜಮೀರ್ ಅಹಮ್ಮದ್, ನೀವು ರಾಜಕೀಯ ಜನ್ಮ ನೀಡಿದ್ದೀರಾ ಎಂದು ಕುಮಾರಸ್ವಾಮಿ ಕಾಲಿಗೂ ನಮಸ್ಕಾರ ಮಾಡುತ್ತಿದ್ದರು. ಅಂದು ಕುಮಾರಸ್ವಾಮಿ ಕರಿಯ ಎಂದು ಗೊತ್ತಿರಲಿಲ್ಲವೆ ಎಂದು ಪ್ರಶ್ನಿಸಿದರು.

ನಿಖಿಲ್ ಗೆಲುವಿಗೆ ಜಿ.ಟಿ.ದೇವೇಗೌಡ ದಂಪತಿ ವಿಶೇಷ ಪೂಜೆ

ಚನ್ನಪಟ್ಟಣ ಉಪ ಚುನಾವಣೆಯ ಎನ್‌ಡಿಎ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಗೆಲುವಿಗಾಗಿ ಶಾಸಕ ಜಿ.ಟಿ.ದೇವೇಗೌಡ ಹಾಗೂ ಅವರ ಪತ್ನಿ ಲಲಿತಾ ಶ್ರೀರಂಗಪಟ್ಟಣದ ನಿಮಿಷಾಂಬ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದ್ದಾರೆ ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ತಿಳಿಸಿದರು.

ಜಿ.ಟಿ.ದೇವೇಗೌಡರು ಕೂಡ ನಿಖಿಲ್ ಗೆಲುವಿನ ಪರವಾಗಿದ್ದಾರೆ. ಎಂದೆಂದಿಗೂ ಅವರು ಜೆಡಿಎಸ್ ಪರವಾಗಿದ್ದಾರೆ. ಜೆಡಿಎಸ್ ಕೋರ್ ಕಮಿಟಿ ಸದಸ್ಯರಾದ ಅವರು ಕಾರ್ಯದೊತ್ತಡದ ಕಾರಣ ಪ್ರಚಾರದಲ್ಲಿ ಭಾಗವಹಿಸಿಲ್ಲ. ಇದಕ್ಕೆ ಬೇರೆ ಅರ್ಥ ಕಲ್ಪಿಸಬೇಕಿಲ್ಲ ಎಂದು ಸಾ.ರಾ.ಮಹೇಶ್ ಸ್ಪಷ್ಟಪಡಿಸಿದರು.

ಒಕ್ಕಲಿಗ ನಾಯಕರನ್ನು ಬೆಳೆಸದ ಹೆಚ್.ಡಿ.ದೇವೇಗೌಡರನ್ನು ಬಿಟ್ಟು ಬರುವಂತೆ ಸಿದ್ದರಾಮಯ್ಯ ಜಿಟಿ.ದೇವೇಗೌಡರಿಗೆ ನೀಡಿರುವ ಆಹ್ವಾನಕ್ಕೆ ಪ್ರತಿಕ್ರಿಯೆ ನೀಡಿದ ಸಾ.ರಾ.ಮಹೇಶ್, ಈ ತನಕ ಸಿದ್ದರಾಮಯ್ಯ ಯಾರನ್ನು ಬೆಳೆಸಿದ್ದಾರೆ ಹೇಳಿ ಎಂದು ಪ್ರಶ್ನಿಸಿದರು.

ತಮ್ಮನ್ನು ಕಾಂಗ್ರೆಸ್ ಪಕ್ಷಕ್ಕೆ ಕರೆ ತಂದ ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್‌ಗೆ ಏನು ಮಾಡಿದ್ದಾರೆ, ಅವರನ್ನು ಯಾವ ರೀತಿ ತುಳಿದಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ ಎಂದು ತಿರುಗೇಟು ನೀಡಿದರು.

ಭಾರತದಲ್ಲಿರುವ ಶೇಕಡ 80 ರಷ್ಟು ಜನರು ಕಪ್ಪು ಬಣ್ಣದವಾಗಿದ್ದಾರೆ. ನಾವೆಲ್ಲರೂ ಮೂಲತಃ ದ್ರಾವಿಡರು, ಶ್ರೀಕೃಷ್ಣ ಕೂಡ ಕಪ್ಪು ಬಣ್ಣದವನು. ಕಪ್ಪು ಸತ್ಯದ ಪ್ರತೀಕ ಆದರೆ ಕಪ್ಪು ಬಣ್ಣದವರನ್ನ ಗೇಲಿ ಮಾಡುತ್ತಿರುವುದು ಸರಿಯೇ ಎಂದು ಮರು ಪ್ರಶ್ನಿಸಿದರು.

ರಾಜಕೀಯ ಜನ್ಮ ನೀಡಿದವರೇ ಗೌಡರು: ಬೆಂಗಳೂರಿನ ಚಾಮರಾಜಪೇಟೆಯಲ್ಲಿ ದರಿದ್ರ ನಾರಾಯಣ ಸಮಾವೇಶ ಆಯೋಜಿಸಿ, ಕ್ಷೇತ್ರದೆಲ್ಲೆಡೆ ಸುತ್ತಾಡಿ ಹೆಚ್.ಡಿ.ದೇವೇಗೌಡರು, ಜಮೀರ್ ಅಹಮ್ಮದ್‌ರನ್ನು ಶಾಸಕರಾಗಿ ಮಾಡಿದರು. ತನಗೆ ರಾಜಕೀಯ ಜನ್ಮ ನೀಡಿದವರು ಯಾರು, ಈ ಮಟ್ಟಕ್ಕೆ ಬರಲು ಕಾರಣಕರ್ತರು ಯಾರೆಂದು ಮೊದಲು ಜಮೀರ್ ಅಹಮ್ಮದ್, ತನ್ನ ತಾಯಿ ಕಾಲಿಗೆ ನಮಸ್ಕಾರ ಮಾಡಿ ಚಿಂತನೆ ಮಾಡಲಿ ಎಂದು ಸಾ.ರಾ.ಮಹೇಶ್ ಆಗ್ರಹಿಸಿದರು.

ಜಮೀರ್ ಅಹಮ್ಮದ್ ಅಲ್ಪ ಸಂಖ್ಯಾತ ಸಮುದಾಯದಲ್ಲಿ ಹುಟ್ಟಿರುವುದೇ ದೊಡ್ಡ ಕಳಂಕ. ಹೆಚ್.ಡಿ.ದೇವೇಗೌಡರ ಕಾಲಿನ ಧೂಳಿಗೂ ಜಮೀರ್ ಅಹಮ್ಮದ್ ಸಮರಲ್ಲ. ಈ ಕೂಡಲೇ ಕುಮಾರಸ್ವಾಮಿಯ ಕ್ಷಮೆ ಯಾಚಿಸದಿದ್ದರೆ ಅವರು ಹೋದ ಕಡೆಯಲ್ಲೆಲ್ಲಾ ಕಪ್ಪು ಬಾವುಟ ಪ್ರದರ್ಶಿಸಿ, ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಚನ್ನಪಟ್ಟಣ ಉಪ ಚುನಾವಣೆಯಲ್ಲಿ ಜಮೀರ್ ಅಹಮ್ಮದ್‌ರಂತವರು ಇಷ್ಟೆಲ್ಲಾ ತೇಜೋವಧೆ ಮಾಡುತ್ತಾ ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ಮಾಡುತ್ತಿದ್ದಾರೆ. ಆದರೂ ಚುನಾವಣಾ ಆಯೋಗ ಯಾವುದೇ ಕ್ರಮ ಕೈಗೊಳ್ಳದೆ ಸತ್ತು ಹೋಗಿದೆಯೇ ಎಂದು ಪ್ರಶ್ನಿಸಿದರು.

ನಾನಾ ಕಾರಣಕ್ಕೆ ಜೆಡಿಎಸ್ ತೊರೆದರು: ಹೆಚ್.ಡಿ.ದೇವೇಗೌಡರು ಒಕ್ಕಲಿಗ ನಾಯಕರನ್ನು ಬೆಳೆಸಿಲ್ಲ ಎಂದು ನಿನ್ನೆ ಸಿದ್ದರಾಮಯ್ಯ ಹೇಳುತ್ತಾರೆ. ಸಿದ್ದರಾಮಯ್ಯ ಹಿಂದೆ ಮುಂದೆ ಇರುವವರನ್ನು ಬೆಳೆಸಿದವರು ಯಾರು ಎಂಬುದು ರಾಜ್ಯದ ಜನತೆಗೆ ಗೊತ್ತಿದೆ. ಸಿದ್ದರಾಮಯ್ಯ ಸೇರಿದಂತೆ ಬಹಳಷ್ಟು ಜನರನ್ನು ಹೆಚ್.ಡಿ.ದೇವೇಗೌಡರು ರಾಜಕೀಯವಾಗಿ ಬೆಳೆಸಿದರು. ಆದರೆ ತಾವು ಬಯಸಿದ ಖಾತೆ ಸಿಗಲಿಲ್ಲ ಎಂಬುದು ಸೇರಿದಂತೆ ಹಲವು ಕಾರಣಗಳಿಂದ ಜೆಡಿಎಸ್ ತೊರೆದವರು ಹೆಚ್.ಡಿ.ದೇವೇಗೌಡರ ಬಗ್ಗೆ ಆಧಾರರಹಿತ ಆರೋಪ ಮಾಡುತ್ತಿದ್ದಾರೆ ಎಂದು ಹೇಳಿದರು.

ಜೆಡಿಎಸ್ ಪಕ್ಷದಲ್ಲಿ ಬಹಳಷ್ಟು ಜನರು ತಿಂದು ತೇಗಿ ಹೋಗಿದ್ದಾರೆ. ಆದರೆ ಈಗ ಅವರೆ ಈ ಪಕ್ಷದ ನಾಯಕರನ್ನು ಟೀಕೆ ಮಾಡುತ್ತಿದ್ದಾರೆ. ಇವರ ಈ ವರ್ತನೆ ರಾಜ್ಯದ ಜನರಿಗೆ ತಿಳಿದಿದೆ ಎಂದರು.

ಸ್ಟೀಲ್ ಕಂಪನಿಗಳಿಂದ ಹಣ ವಸೂಲಿ ಮಾಡಿದ್ದಾರೆಂದು ಕುಮಾರಸ್ವಾಮಿ ವಿರುದ್ಧ ಆಧಾರ ರಹಿತ ಆರೋಪ ಮಾಡಿದ್ದಾರೆ. ಆದರೆ ಇವರು ಪರಿಶಿಷ್ಟ ಜಾತಿ ಮತ್ತು ಪಂಗಡದವರ ಹಣವನ್ನೇ ಲೂಟಿ ಮಾಡಿದ್ದಾರೆ. ಸಿದ್ದರಾಮಯ್ಯ ಸರ್ಕಾರ ಸರಿಪಡಿಸಲಾಗದಷ್ಟು ಕೆಟ್ಟು ಹೋಗಿದೆ ಎಂದು ಸಾ.ರಾ.ಮಹೇಶ್ ಟೀಕಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ವಿಶ್ವಂ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬಘೀರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಭೂಲ್ ಭುಲಯ್ಯ 3 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಸಂಗೀತಾ ಸಂತೋಷ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಬಘೀರ (ಕ)	4 ಪ್ರದರ್ಶನಗಳು
ರಾಜಕಮಲ್	
ಅಮರನ್ (ಕ)	4 ಪ್ರದರ್ಶನಗಳು
ಸಂಗಂ	
ನವಗ್ರಹ (ಕ)	4 ಪ್ರದರ್ಶನಗಳು
ಲಿಡೋ	
ಎಲಾ ಕುನ್ನಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸಿಂಗಂ ಅಗೇನ್ (ಹಿಂ)	4 ಪ್ರದರ್ಶನಗಳು
ಪ್ರಭಾ	
ಸಂಗೀತಾ ಸಂತೋಷ (ಕ)	2 ಪ್ರದರ್ಶನಗಳು
ಆದಿ ಪರ್ವ(ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಲಕ್ಕಿ ಭಾಸ್ಕರ್ (ತೆ): ಬೆ.10.30ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ವೆನಂ ದಿ ಲಾಸ್ಟ್ ಡ್ಯಾನ್ಸ್ (3ಡಿ)(ಇಂ): ಮ.1.30ಕ್ಕೆ, ಲಕ್ಕಿ ಭಾಸ್ಕರ್ (ಮ): ರಾ.9.55ಕ್ಕೆ.
ಸ್ಕ್ರೀನ್ 2	ವೆನಂ ದಿ ಲಾಸ್ಟ್ ಡ್ಯಾನ್ಸ್ (3ಡಿ)(ಇಂ): ಬೆ.10.55ಕ್ಕೆ, ಬ್ಲಡಿ ಬೆಗ್ಗರ್ (ತ): ಮ.1.20ಕ್ಕೆ, ಬ್ರದರ್ (ತ): ಸಂ.4.20ಕ್ಕೆ, ಬಘೀರ (ಕ): ರಾ.7.05ಕ್ಕೆ, ಕ (ತೆ): ರಾ.10.10ಕ್ಕೆ.
ಸ್ಕ್ರೀನ್ 3	ಅಮರನ್ (ತ): ಬೆ.10.05ಕ್ಕೆ, ಮ.1.15ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಅನ್ನ (ಕ): ಸಂ.4.30ಕ್ಕೆ.
ಸ್ಕ್ರೀನ್ 4	ಬಘೀರ (ಕ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.20ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ವೆಟ್ಟೈಯನ್ (ತ): ಮ.1ಕ್ಕೆ, ಎಲ್ಲಿಗೆ ಪಯಣ ಯಾವುದೋ ದಾರಿ (ಕ): ಸಂ.4ಕ್ಕೆ, ಮಾರ್ಟಿನ್ (ಕ): ಸಂ.6.30ಕ್ಕೆ, ವೆಟ್ಟೈಯನ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ವೆನಂ ದಿ ಲಾಸ್ಟ್ ಡ್ಯಾನ್ಸ್ (3ಡಿ)(ಇಂ): ಮ.1.30ಕ್ಕೆ, ಸಂ.4ಕ್ಕೆ, ರಾ.7ಕ್ಕೆ.
ಸ್ಕ್ರೀನ್ 3	ಯಲಾಕುನ್ನಿ (ಕ): ಮ.1.30ಕ್ಕೆ, ಒಬ್ಬಟ್ಟು (ಕ): ಸಂ.4.30ಕ್ಕೆ, ಉದಾಹರಣೆ (ಕ): ರಾ.7ಕ್ಕೆ, ವೆನಂ ದಿ ಲಾಸ್ಟ್ ಡ್ಯಾನ್ಸ್ (3ಡಿ)(ಇಂ): ರಾ.9.15ಕ್ಕೆ.
ಸ್ಕ್ರೀನ್ 4	ಮಾರ್ಟಿನ್ (ಕ): ಮ.1.10ಕ್ಕೆ, ಯಲಾಕುನ್ನಿ (ಕ): ಮ.3.55ಕ್ಕೆ, ವೆಟ್ಟೈಯನ್ (ತ): ಸಂ.6.30ಕ್ಕೆ, ಪಣಿ (ಮ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ರೇಸ್

1ನೇ ದಿನ, ಬುಧವಾರ, 13–11–2024

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ

I. ನಂಜನಗೂಡ್ ಪ್ಲೇಟ್–1400 ಮೀ. ರೇಟೆಡ್ 00 ರಿಂದ 25. ಮಧ್ಯಾಹ್ನ 2.00ಕ್ಕೆ
1. ಸ್ಕ್ವಾಂಟೋ 2. ಬ್ರೇಕ್ ವೇ 3. ಗೇಮ್ ಬಾಯ್

II. ಬಿಗ್ ಡೀಲ್ ಪ್ಲೇಟ್ –1200 ಮೀ. ರೇಟೆಡ್ 00 ರಿಂದ 25. ಮ.2.30ಕ್ಕೆ
1. ಪೋಲಾರ್ ಕ್ವೀನ್ 2. ಬಂಡಲ್ ಖಾಂದ್ ಕ್ವೀನ್ 3. ಫಿಫ್ಟಿ ಗ್ರ್ಯಾಂಡ್

III ಬಿ.ಆರ್.ಹಿಲ್ಸ್ ಪ್ಲೇಟ್ ಡಿII –1200 ಮೀ. ರೇಟೆಡ್ 20 ರಿಂದ 45. ಮಧ್ಯಾಹ್ನ 3.00ಕ್ಕೆ
1. ಇನ್‌ಎಕ್ಸಾಸ್ಟಬಲ್ 2. ವಿಜಯ ಬ್ರೇವ್ 3. ನಾಟಿ ಮೆಥಡ್

IV. ಎಸ್.ಎಂ. ಅಟ್ಟಾವೋಲಾಹಿ ಮೆಮೋರಿಯಲ್ ಟ್ರೋಫಿ –1100 ಮೀ. ರೇಟೆಡ್ 40 ರಿಂದ 65. ಮ. 3.30ಕ್ಕೆ
1. ವೆಲ್ಲಿಂಗ್‌ಟನ್ 2. ಕೋರ್ಟ್ ಜಸ್ಟರ್ 3. ಸೈಂಟ್ ಎಮಿಲಿಯನ್

V. ರಾಜ್ಯೋತ್ಸವ ಟ್ರೋಫಿ–1400 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. ಸಂ.4.00ಕ್ಕೆ
1. ರೈಸ್ ಎ ಬಾಕ್ 2. ಹೀರೋ ಹಿಸಮ್ 3. ಕಾಂಟ್ರಿಬ್ಯೂಟರ್

VI. ಫ್ಯಾಂಟ್‌ಸಿ ಡ್ರೀಮ್ ಪ್ಲೇಟ್ –1400 ಮೀ. ರೇಟೆಡ್ 20 ರಿಂದ 45. ಸಂ.4.30ಕ್ಕೆ
1. ತರೆಕ್ 2. ಸರ್ವೋತ್ತಮ್ 3. ಔರ್ಲಿ

VII. ಬಿ.ಆರ್.ಹಿಲ್ಸ್ ಪ್ಲೇಟ್ ಡಿI–1200 ಮೀ. ರೇಟೆಡ್ 20 ರಿಂದ 45. ಸಂ.5.00ಕ್ಕೆ
1. ರೆವೆಲೇಟರ್ 2. ಮೆಬರಿ 3. ಬ್ರಿಲಿಯಂಟ್ ಲೈಟ್

ದಿನದ ಅತ್ಯುತ್ತಮ	ರೈಸ್ ಎ ಬಕ್
ಡಬ್ಬಲ್	ವೆಲ್ಲಿಂಗ್‌ಟನ್, ರೆವೆಲೇಟರ್
ಜಾಕ್‌ಪಾಟ್	3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್	4, 5, 6 ಮತ್ತು 7
I ಟ್ರಿಬಲ್	2, 3 ಮತ್ತು 4
II ಟ್ರಿಬಲ್	5, 6 ಮತ್ತು 7
ಎಕ್ಸ್‌ಆಕ್ಟ್	1 ರಿಂದ 7

ಟಿಪ್‌ಸ್ಟರ್ ಪಿಜೆಸಿ

ಮುಲಕನಾಡು ಸಭಾದಲ್ಲಿ ನ.17ರಂದು ಧಾತ್ರಿ ಹವನ

ಮೈಸೂರು, ನ.12–ಮೈಸೂರಿನ ಹುಣಸೂರು ರಸ್ತೆ ವಿಜಯನಗರ 3ನೇ ಹಂತದಲ್ಲಿರುವ ಮುಲಕನಾಡು ಸಭಾದಲ್ಲಿ (ಐಶ್ವರ್ಯ ಪೆಟ್ರೋಲ್ ಬಂಕ್ ಸಮೀಪ) ನ.17 ಭಾನುವಾರದಂದು ಸುಹಾಸಿನಿಯರ ಪೂಜೆ ಬೆಳಿಗ್ಗೆ 8.30ಕ್ಕೆ, ಶ್ರೀ ಧಾತ್ರಿ ಹವನ ಬೆಳಿಗ್ಗೆ 9 ಗಂಟೆಗೆ, ಸಹಸ್ರನಾಮಾರ್ಚನೆ 10.30ಕ್ಕೆ ಏರ್ಪಡಿಸಲಾಗಿದೆ. ಭಕ್ತಮಹಾಶಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ತಿಕ ದಾಮೋದರನ ಪೂಜೆಗೆ ಪಾತ್ರರಾಗಬೇಕೆಂದು ಕೋರಲಾಗಿದೆ. ಮಾಹಿತಿಗಾಗಿ ಮೊಬೈಲ್ 9845341511, 9916138371 ಸಂಪರ್ಕಿಸಬಹುದು.

8ನೇ ವರ್ಷದ ಸವಿನೆನಪು



ಎನ್.ಮುನೀತ್

ದುಃಖಿತಪ್ತರು: ತಾಯಿ ಶ್ರೀ ಅನುಸೂಯ, ತಂದೆ ನಾಗರಾಜು ಯು, ಲೋಹಿತ್.ಎನ್ ಮಕ್ಕಳು ಹಾಗೂ ಕುಟುಂಬವರ್ಗದವರು

Aquaguard & Kent Water Purifier
Sales & Service
9901200444
#319, Near Mega Medical Store, Kuvempunagar

ಬೇಕಾಗಿದ್ದಾರೆ
ಫ್ಯಾಷನ್ ಜ್ಯುವೆಲರಿ ಶೋರೂಂನಲ್ಲಿ ಕೆಲಸ ಮಾಡಲು
ಸೇಲ್ಸ್ ಗರ್ಲ್ಸ್
ಕನ್ನಡ ಮತ್ತು ಇಂಗ್ಲೀಷ್ ವಾಕ್‌ಚಾತುರ್ಯ ಇರಬೇಕು. ಉತ್ತಮ ಸಂಬಳ + ಇನ್‌ಸೆಂಟಿವ್ಸ್
NPG Lucky Stones, Ashoka Road, Mysore
ಫೋನ್ : 93 42 42 42 41

WANTED
30x40 Site in Hootagalli Industrial Area, Hebbal or surrounding near Infosys and L&T for immediate purchase.
Contact: **8660371834**

PROPERTY FOR SALE
6 Acres alienated residential land MUDA approved at RT Nagar near Ring Road Mysore, property fully compounded.
Contact: 98809-25949

ACCOUNTANT REQUIRED
Mysore (Hotel)
Qualification -B.com
Candidate having knowledge of computer / Tally
(Experience & Freshers)
9448142639

WEKREATE PROPERTIES
SITE FOR SALE
Premium Residential Plots for SALE behind Chamundi Hills with in Ring Road
Dimensions
30x40 / 30x50
For Site Visit & Details Call
9844 0090 49
#658, 3rd Floor, Vishwamanava Double Road, Saraswathipuram, Mysuru-09

ಮೈಸೂರು ಮಿತ್ರ 45
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

100% TEAK WOOD
FACTORY FINISH DOORS & FRAMES
@ DEPOT RATES
10 YEARS WARRANTY
www.ssbuildmart.com
9901291267
9845426862

WANTED
8x4 Wood CNR Router Machine and 4x3 Wood Cutting Laser Machine. Contact:
8660371834

ಬೇಕಾಗಿದ್ದಾರೆ
ಮನೆಯ ಕೆಲಸದಾಕೆ: ಮನೆಯ ಕೆಲಸ ಮಾಡಲು ಉತ್ತಮ ಅನುಭವವಿರುವ ಒಬ್ಬ ಮಹಿಳೆ ಬೇಕಾಗಿದ್ದಾರೆ.
ಊಟ ಮತ್ತು ವಸತಿಯೊಂದಿಗೆ ಆಕರ್ಷಕ ಸಂಬಳವನ್ನು ನೀಡಲಾಗುತ್ತದೆ.
ಕೆಲಸದ ಸ್ಥಳ: ಸಿದ್ಧಾರ್ಥನಗರ, ಮೈಸೂರು
9448283983

FULLY FURNISHED FLAT FOR SALE
East Facing Ground Floor at Vijayanagar 3rd stage.
9353990365

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದು ಏನೆಂದರೆ, ನನ್ನ ಕಕ್ಷಿದಾರರು ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು, ಅದರ ಹಾಲಿ ಮಾಲೀಕರಾದ, ಶ್ರೀ. ಶಿವಕುಮಾರ, ಬಿನ್. ಲೇಟ್. ಸಣ್ಣೇಗೌಡ ಮತ್ತು ಅವರ ಕುಟುಂಬದವರು, ಇವರ ವಾಸ: ಬೀಡನಹಳ್ಳಿ ಗ್ರಾಮ, ಬನ್ನೂರು ಹೋಬಳಿ, ಟಿ. ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ ರವರಿಂದ ಶುದ್ಧ ಕ್ರಯಕ್ಕೆ ಪಡೆಯಲು ಉದ್ದೇಶಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ಬಗ್ಗೆ ಯಾವುದೇ ವ್ಯಕ್ತಿ/ವ್ಯಕ್ತಿಗಳಿಗೆ, ಸಂಘ, ಸಂಸ್ಥೆ, ಬ್ಯಾಂಕ್ ಇನ್ನಿತರರಿಂದ ಯಾವುದೇ ರೀತಿಯ ಹಕ್ಕು, ಆಸಕ್ತಿ, ಬಾಧ್ಯತೆ ಹಿತಾಸಕ್ತಿ ಹಾಗೂ ಆಕ್ಷೇಪಣೆಗಳು ಇದ್ದಲ್ಲಿ ಅದನ್ನು ಸಂಬಂಧಪಟ್ಟ ದಾಖಲೆಗಳ ಸಹಿತ ಈ ಕೆಳಗೆ ತಿಳಿಸಲಾದ ವಿಳಾಸಕ್ಕೆ ಈ ಪ್ರಕಟಣೆಯ ದಿನದಿಂದ ಏಳು (7) ದಿನಗಳ ಒಳಗಾಗಿ ಲಿಖಿತವಾಗಿ ತಿಳಿಸತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಷೆಡ್ಯೂಲ್ ಸ್ವತ್ತಿನ ಮೇಲೆ ಬೇರೆ ಯಾರಿಗೂ ಯಾವುದೇ ಹಕ್ಕು, ಹಿತಾಸಕ್ತಿ ಇಲ್ಲವೆಂದು ಪರಿಗಣಿಸಿ ಕ್ರಯವನ್ನು ಪೂರ್ಣಗೊಳಿಸಲಾಗುವುದು. ನಿರ್ದಿಷ್ಟ ಅವಧಿ ಮುಗಿದ ನಂತರ ಬರುವ ಯಾವುದೇ ಆಕ್ಷೇಪಣೆ ಅಥವಾ ಹಕ್ಕುಗಳಿಗೆ ಅವಕಾಶವಿರುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ:

ಮೈಸೂರು ಜಿಲ್ಲೆ, ಟಿ. ನರಸೀಪುರ ತಾಲ್ಲೂಕು, ಬೀಡನಹಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟ ಬೀಡನಹಳ್ಳಿ ಗ್ರಾಮದಲ್ಲಿರುವ ನಿವೇಶನದ ಸ್ವತ್ತಿನ ಸಂಖ್ಯೆ 348/337, ಯೂನಿಕ್ ನಂಬರ್ 152200700703000373, ಇದರ ವಿಸ್ತೀರ್ಣ ಪೂರ್ವ–ಪಶ್ಚಿಮ 24.9936 ಮೀಟರ್‌ಗಳು ಮತ್ತು ಉತ್ತರ–ದಕ್ಷಿಣ 21.183600 ಮೀಟರ್‌ಗಳು, ಒಟ್ಟು 529.45 ಚದರ ಮೀಟರ್‌ಗಳು ಹಾಗೂ ಇದರ ಚಕ್ಕುಬಂದಿ: ಪೂರ್ವಕ್ಕೆ: ಶ್ರೀ. ದೇವರಾಜು, ಬಿನ್. ಬೆಟ್ಟೇಗೌಡ ರವರ ಸ್ವತ್ತು ಮತ್ತು 14 ಅಡಿ ತಿರುಗಾಡಲು ಬಿಟ್ಟಿರುವ ದಾರಿ; ಪಶ್ಚಿಮಕ್ಕೆ: ಶ್ರೀ. ಚನ್ನೇಗೌಡ ನಂಜುಂಡೇಗೌಡ ರವರ ಸ್ವತ್ತು; ಉತ್ತರಕ್ಕೆ: ರಸ್ತೆ ಮತ್ತು 5 ಅಡಿ ತಿರುಗಾಡಲು ಬಿಟ್ಟಿರುವ ದಾರಿ; ದಕ್ಷಿಣಕ್ಕೆ: ಶ್ರೀಮತಿ. ಯಶೋಧ ದೇವರಾಜು ಮತ್ತು ಶ್ರೀ. ದಾಸೇಗೌಡ ಮರಿಗಯ್ಯ ರವರ ಸ್ವತ್ತು.

ಸಹಿ/– ಡಿ.ಜಿ. ನಾಗೇಂದ್ರ ಪ್ರಸಾದ್, ವಕೀಲರು,
ಕೆಎಆರ್ 1609/2005, ನಂ.405, 4ನೇ ಮುಖ್ಯ ರಸ್ತೆ, ಎಸ್.ವಿ.ಪಿ. ನಗರ, ಟಿ. ನರಸೀಪುರ ರಸ್ತೆ, ಮೈಸೂರು – 570028.
ಮೊಬೈಲ್ ನಂಬರ್: 9916139244.
ಇ–ಮೇಲ್:nagendraprasad.dg@gmail.com
ಮೈಸೂರು
ದಿನಾಂಕ :13–11–2024

ಹಸಿರು ನಮ್ಮ ಉಸಿರು

ಉದ್ಯೋಗ ಅವಕಾಶ

ಭಾರತದ ಪ್ರಮುಖ ಖಾಸಗಿ ಬ್ಯಾಂಕ್-2024ರಲ್ಲಿ
ಉತ್ತಮ ಉದ್ಯೋಗಾವಕಾಶ
280 ಹುದ್ದೆಗಳು
ವಾಣಿಜ್ಯ, ಕಲೆ ಮತ್ತು ವಿಜ್ಞಾನದಲ್ಲಿ ಪದವೀಧರರಾಗಿರಬೇಕು.
31 ಜಿಲ್ಲೆಯವರೂ ಸಹ ಭಾಗವಹಿಸಬಹುದು.

ಅರ್ಹತೆ:	ಪ್ರಾರಂಭಿಕ ಸಂಬಳ:	ಆಯ್ಕೆ ವಿಧಾನ:
25 ವರ್ಷಕ್ಕಿಂತ ಕಡಿಮೆ ವಯಸ್ಸಿನವರು (ಪುರುಷರು/ಮಹಿಳೆಯರು)	ರೂ. 20,000 ರಿಂದ ರೂ. 24,000	ಆಪ್ಟಿಟ್ಯೂಡ್ ಪರೀಕ್ಷೆ, ಲಿಖಿತ ಪರೀಕ್ಷೆ ಮತ್ತು ಸಂದರ್ಶನ

ಸಂದರ್ಶನದ ದಿನಾಂಕ : 15-11-2024 | ಸಮಯ : ಬೆಳಿಗ್ಗೆ 10-00
ಸಂದರ್ಶನ ನಡೆಯುವ ಸ್ಥಳ:
CSCE EDU SKILLS PRIVATE LIMITED
297/1, 2nd Floor, Harilakshmi Towers, Lakshmi Villas Road, Deveraja Mohalla, Behind Junior Maharani PU College, Mysuru
7845760154

SALES Staff: Male/Female WANTED
1. Readymade Women's Wear (Male/Female) : 4 Nos
2. Fancy and Silk Saree (Male/Female) : 2 Nos.
3. Kidswear (Male/Female) :2 Nos.
4. Helper (Male/Female): 5 Nos.(Age limit within 40)
5. Tailor: Male/Female: 2 Nos. (Ladies Readymade Dress Alterations Tailor)
6. Housekeeping (Male/ Female) : 1No. (Age Limit within 45 Yrs)
7. Security Guard (Male): 2 Nos.

Interview timing: 11.30 am to 2 pm 3.30 pm to 6.00 pm
From 13/11/2024 to 17/11/2024
Bhimji's, 65, DD Urs Road, Mysore-1
Ph: 0821-4192666

15ನೇ ವರ್ಷದ ಪುಣ್ಯಸ್ಮರಣೆ



A.M. ಮಹದೇವಯ್ಯ
Rtd. ASI
ನಂಜನಗೂಡು

ನೀವು ನಮ್ಮನಗಲಿ ಇಂದಿಗೆ 15 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖಿತಪ್ತರು
ಪತ್ನಿ: ಗೌರಮ್ಮ, ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಬೀಗರು ಮತ್ತು ಮೊಮ್ಮಕ್ಕಳು ಹಾಗೂ ಕುಟುಂಬದವರು.

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀ ರವಿಕುಮಾರ್ (ಪಟೇಲ)

ಇವರು ದಿನಾಂಕ 03-11-2024ರ ಭಾನುವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ 13-11-2024ರ ಬುಧವಾರ ಬೆಳಗ್ಗೆ 11 ರಿಂದ 1 ಗಂಟೆಗೆ ನಮ್ಮ ಸ್ವಗೃಹ ಮೈಸೂರು ತಾಲ್ಲೂಕು ಇಲವಾಲ ಗ್ರಾಮ ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು: ಮಹಾಲಕ್ಷ್ಮಿ, ಮಕ್ಕಳು, ಕುಟುಂಬಸ್ಥರು ಮತ್ತು ಸ್ನೇಹಿತರು ಹಾಗೂ ಇಲವಾಲ ಗ್ರಾಮಸ್ಥರು.

ವೈಕುಂಠ ಸಮಾರಾಧನೆ ಆಹ್ವಾನ ಪತ್ರಿಕೆ



ಶ್ರೀ ಹೆಚ್.ಪಿ.ನಾಗರತ್ನ
ಶ್ರೀ ಸಿ.ಪುಟ್ಟಸ್ವಾಮಿಗೌಡರವರ ಧರ್ಮಪತ್ನಿ

ಇವರು ದಿನಾಂಕ 04-11-2024ನೇ ಸೋಮವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧ ವೈಕುಂಠ ಸಮಾರಾಧನೆಯನ್ನು ದಿನಾಂಕ 14-11-2024ರ ಗುರುವಾರ ಬೆಳಗ್ಗೆ 11.30 ಗಂಟೆಗೆ ನಮ್ಮ ಸ್ವಗೃಹ ಚಿಲ್ಕುಂದ ಗ್ರಾಮ, ಹನಗೋಡು ಹೋ||, ಹುಣಸೂರು ತಾ|| ಇಲ್ಲಿ ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು: ಶ್ರೀ.ಸಿ.ಟಿ.ಪುಟ್ಟಸ್ವಾಮಿಗೌಡ, ಶ್ರೀಮತಿ ಮತ್ತು ಶ್ರೀ ಸಿ.ಟಿ.ರಾಜಣ್ಣ ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬದವರು





ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಶ್ರೀಮಾನ್ ಯಜಮಾನ್
ಬಂಧೀಗೌಡರು

ಇವರು ದಿನಾಂಕ 04-11-2024ರ ಸೋಮವಾರದಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾದ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ 14-11-2024ರ ಗುರುವಾರ ಬೆಳಗ್ಗೆ 10.30 ಗಂಟೆಗೆ ನಮ್ಮ ಸ್ವಗ್ರಾಮವಾದ ಚಿಕ್ಕೇಗೌಡನಹುಂಡಿಯಲ್ಲಿ ಏರ್ಪಡಿಸಲಾಗಿದೆ. ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು: ಮಗ, ಸೊಸೆ, ಹೆಣ್ಣುಮಕ್ಕಳು ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು

ಹರಿಕಥೆ: 14-11-2024 ಗುರುವಾರ ರಾತ್ರಿ 8.00
ಎಂ. ಕೈಲಾಸಮೂರ್ತಿ ಮತ್ತು ಸಂಗಡಿಗರು, ಕಂಸಾಳೆ ಮತ್ತು ತಂಬೂರಿ ಕಥೆ